ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 19 ಗುರುವಾರ 2026

ಮೈಸೂರು ಮಿತ್ರ 46

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 300 | ಪುಟಗಳು: 12
ಜಾಹೀರಾತು: ad@mysurumithra.com, website: www.mysurumithra.com
ಸುದ್ದಿ, ಫೋಟೋಗೆ: news@mysurumithra.com

₹4

ಇಂದಿನಿಂದ ನಾಗರಹೊಳೆ, ಬಂಡೀಪುರದಲ್ಲಿ

ಸಫಾರಿ ಪುನರಾರಂಭ

• ಕೇವಲ ಶೇ.50ರಷ್ಟು ಮಾತ್ರ ಸಫಾರಿ ಪ್ರಾರಂಭಕ್ಕೆ ಸರ್ಕಾರದಿಂದ ಅನುಮತಿ • ಇದರಿಂದ ಬರುವ ಆದಾಯ ಸ್ಥಳೀಯ ಅಭಿವೃದ್ಧಿಗೂ ಬಳಕೆ

ಬೆಂಗಳೂರು, ಫೆ.18(ಎಂಟಿವೈ)– ನಾಳೆ (ಗುರುವಾರ)ಯಿಂದ ನಾಗರಹೊಳೆ, ಬಂಡೀಪುರದಲ್ಲಿ ಸಫಾರಿ ಪುನರಾರಂಭ ಆಗಲಿದೆ. ರಾಜ್ಯ ಸರ್ಕಾರ ಶೇ. 50 ರಷ್ಟು ಮಾತ್ರ ಸಫಾರಿ ಪ್ರಾರಂಭಕ್ಕೆ ಅನುಮತಿ ನೀಡಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದ್ದಾರೆ.



ಈಶ್ವರ್ ಖಂಡ್ರೆ

ವಿಕಾಸ ಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಕ್ಟೋಬರ್ ತಿಂಗಳಲ್ಲಿ ನಾಗರಹೊಳೆ, ಬಂಡೀಪುರದಲ್ಲಿ ಹುಲಿ ದಾಳಿಯಿಂದ ಅನೇಕ ಜನರು ಸಾವನ್ನಪ್ಪಿದ್ದರು. ನಮ್ಮ ಸರ್ಕಾರದ ಆದ್ಯತೆ ಮಾನವ ಜೀವ. ಪ್ರತಿ ಜೀವ ಅತ್ಯಮೂಲ್ಯವಾದದ್ದು. ಯಾವುದೇ ಜೀವಕ್ಕೆ ಹಾನಿಯಾಗಬಾರದು ಎಂದು ನ.7ರಿಂದ ಸಫಾರಿ ಬಂದ್ ಮಾಡಿ, ಆದೇಶ ಮಾಡಲಾಗಿತ್ತು ಎಂದರು.

ಅರಣ್ಯ ಸಚಿವನಾದ ಮೇಲೆ ಮಾನವ–ಪ್ರಾಣಿ ಸಂಘರ್ಷ ತಡೆಗೆ ಅನೇಕ ಕ್ರಮ ಕೈಗೊಂಡಿದ್ದೇವೆ. ಕ್ರಮ ಕೈಗೊಂಡರೂ ಕೂಡ ಪ್ರತಿ ವರ್ಷ 45–50 ಮಂದಿ ಸಾಯುತ್ತಿದ್ದಾರೆ. ಇದು ನೋವಿನ ಸಂಗತಿ. ಇದೀಗ



ಫೈಲ್ ಚಿತ್ರ

ಮತ್ತೆ ನಾಗರಹೊಳೆ, ಬಂಡೀಪುರದಲ್ಲಿ ನಾಳೆಯಿಂದ (ಫೆ19) ಸಫಾರಿ ಪುನರಾರಂಭ ಆಗಲಿದೆ ಎಂದು ತಿಳಿಸಿದರು.

ಸಫಾರಿ ಟ್ರಿಪ್‌ಗಳಲ್ಲಿ ಕಡಿತ: ಬಂಡೀಪುರ ಮತ್ತು ನಾಗರಹೊಳೆಯಲ್ಲಿ ಈ ಹಿಂದೆ ನಡೆಯುತ್ತಿದ್ದ ಸಫಾರಿ ಟ್ರಿಪ್, ಸಮಯ ಮತ್ತು ವಾಹನ ಸಂಖ್ಯೆಯಲ್ಲಿ ಕಡಿತ ಮಾಡಲಾಗುತ್ತಿದೆ. ಈ ಹಿಂದೆ ಬಂಡೀಪುರದಲ್ಲಿ 8 ಗಂಟೆಗಳ ಕಾಲ ಸಫಾರಿ ನಡೆಯುತ್ತಿತ್ತು. ಈಗ 5 ಗಂಟೆಗೆ ತಗ್ಗಿಸಲಾಗಿದೆ. ನಾಗರಹೊಳೆಯ ಕಾಕನಕೋಟೆಯಲ್ಲಿ 6 ಗಂಟೆ ಹಾಗೂ ನಾಗರಹೊಳೆಯಲ್ಲಿ 4 ಗಂಟೆ ಕಾಲ ಮಾತ್ರ ಸಫಾರಿಗೆ ಪ್ರಥಮ ಹಂತದಲ್ಲಿ ಅನುಮತಿಸಲಾಗಿದೆ.

■ 6ನೇ ಪುಟಕ್ಕೆ

ರೈತ ಮುಖಂಡರಿಂದ ಹೋರಾಟದ ಎಚ್ಚರಿಕೆ

ಮೈಸೂರು, ಫೆ.18– ಮಾನವ–ಪ್ರಾಣಿ ಸಂಘರ್ಷದ ಹಿನ್ನೆಲೆಯಲ್ಲಿ ರೈತ ಸಂಘಟನೆಗಳ ಹೋರಾಟಕ್ಕೆ ಮಣಿದು ರಾಜ್ಯದಲ್ಲಿ ಸಫಾರಿ ನಿರ್ಬಂಧಿಸಿ ಅದೇಶ ಹೊರಡಿಸಿದ್ದ ಸರ್ಕಾರ, ಇಂದು ಬಂಡವಾಳಶಾಹಿಗಳ ಒತ್ತಡಕ್ಕೆ ಮಣಿದು, ಕಾಡನ್ನು ಕಾಪಾಡುವ ಬದಲು ಕಾಸ(ಹಣ)ನ್ನು ಕಾಪಾಡುವ ಸಲುವಾಗಿ ಹಂತ ಹಂತವಾಗಿ ಸಫಾರಿ ಪುನಾರಂಭಕ್ಕೆ ಮುಂದಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ರಾಜ್ಯ ಕಾರ್ಯದರ್ಶಿ ಮಂಜು ಕಿರಣ್ ದೂರಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಹಾಗೂ ಅರಣ್ಯ ಮಂತ್ರಿಗಳು ರೈತರ ಜೀವಕ್ಕಿಂತ ಬಂಡವಾಳ ಶಾಹಿಗಳೇ ಹೆಚ್ಚು ಎಂಬ ನಿರ್ಧಾರವನ್ನು ರಾಜ್ಯದ ಜನರಿಗೆ ರವಾನೆ ಮಾಡಿದ್ದಾರೆ. ಅರಣ್ಯ ಮಂತ್ರಿಗಳ ಈ ನಿಲುವನ್ನು ಧಿಕ್ಕರಿಸಿ, ನಾಳೆ (ಫೆ.19) ಮಧ್ಯಾಹ್ನ 3 ಗಂಟೆಗೆ ಬಂಡಿಪುರದ ಸಫಾರಿ ಕಚೇರಿಗೆ ಮುತ್ತಿಗೆ ಹಾಕಲಾಗುವುದು. ಸಫಾರಿ ಚಾಲನೆಗೆ ನೀಡಿರುವ ಆದೇಶ ಹಿಂಪಡೆಯದೇ ಹೋದಲ್ಲಿ ಮುಂದಿನ ದಿನಗಳಲ್ಲಿ ಹೋರಾಟ ತೀವ್ರ

■ 6ನೇ ಪುಟಕ್ಕೆ

ಕೆನರಾ ಬ್ಯಾಂಕ್‌ನಲ್ಲಿ ಗಿರವಿ ಇಟ್ಟ ಚಿನ್ನಾಭರಣದ ತೂಕದಲ್ಲಿ ವ್ಯತ್ಯಾಸ

ಚಿನ್ನಾಭರಣ ಮೌಲ್ಯಮಾಪಕ ಎಂ.ಅಶ್ವಿನ್‌ಕುಮಾರ್ ಬಂಧನ

• ಬ್ಯಾಂಕಾಕ್‌ನಲ್ಲಿ ತಲೆಮರೆಸಿಕೊಂಡಿದ್ದ ಆರೋಪಿ
• ವಾಪಸ್ಸಾಗುತ್ತಿದ್ದಂತೆ ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಸೆರೆ

ಮೈಸೂರು, ಫೆ.18(ಪಿಎಂ)– ಹಿನಕಲ್‌ನ ಕೆನರಾ ಬ್ಯಾಂಕ್ ಶಾಖೆಯಲ್ಲಿ ಗ್ರಾಹಕರು ಅಡವಿಟ್ಟ ಚಿನ್ನಾಭರಣದ ತೂಕದಲ್ಲಿ ವ್ಯತ್ಯಾಸ ಕಂಡುಬಂದ ಪ್ರಕರಣದಲ್ಲಿ ವಿದೇಶದಲ್ಲಿ ತಲೆಮರೆಸಿಕೊಂಡಿದ್ದ ಚಿನ್ನಾಭರಣ ಮೌಲ್ಯಮಾಪಕನನ್ನು ಬಂಧಿಸುವಲ್ಲಿ ವಿಜಯನಗರ ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.

ಮೈಸೂರಿನ ಗೋಕುಲಂ ಮೂರನೇ ಹಂತದ ನಿವಾಸಿ ಎಂ.ಅಶ್ವಿನ್‌ಕುಮಾರ್ (39) ಬಂಧಿತ ಆರೋಪಿ. ಈತನನ್ನು ಸೋಮವಾರ ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬಂಧಿಸಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದ ವಿಜಯನಗರ ಪೊಲೀಸರು, ವಿಚಾರಣೆಗಾಗಿ ಎರಡು ದಿನಗಳ ಕಾಲ ತಮ್ಮ ವಶಕ್ಕೆ ಪಡೆದಿದ್ದರು. ಬುಧವಾರ ಆತನನ್ನು ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ 14 ದಿನಗಳ ಕಾಲ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಹಿನಕಲ್ ಕೆನರಾ ಬ್ಯಾಂಕ್ ಶಾಖೆಯಲ್ಲಿ ಎಂ.ಅಶ್ವಿನ್‌ಕುಮಾರ್ 2014ರಿಂದ ಚಿನ್ನಾಭರಣದ ಮೌಲ್ಯಮಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದ. ಕಳೆದ ಡಿಸೆಂಬರ್‌ನಲ್ಲಿ ಸಾಲಕ್ಕಾಗಿ ಗಿರವಿ ಇಟ್ಟ ಚಿನ್ನಾಭರಣದ ತೂಕದಲ್ಲಿ ವ್ಯತ್ಯಾಸ ಕಂಡುಬಂದಿದೆ ಎಂದು ಹಲವು ಗಿರವಿದಾರರು ಬ್ಯಾಂಕಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ಸಹ ನಡೆಸಿದ್ದರು. ಅಲ್ಲದೆ, ಗ್ರಾಹಕರು ಬ್ಯಾಂಕಿಗೆ ದೂರು ಸಹ ನೀಡಿದ್ದರು. ಈ ಸಂಬಂಧ ಬ್ಯಾಂಕ್ ಅಧಿಕಾರಿಗಳು ಪರಿಶೀಲಿಸಿದಾಗ, ಗ್ರಾಹಕರು ಗಿರವಿ ಇಟ್ಟಿದ್ದ



ಆರೋಪಿ ಎಂ.ಅಶ್ವಿನ್‌ಕುಮಾರ್

ಒಡವೆಗಳ ಪ್ರಮಾಣದಲ್ಲಿ ಕೊರತೆ ಉಂಟಾಗಿರುವುದು ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಎಂ.ಅಶ್ವಿನ್‌ಕುಮಾರ್ ಮೇಲೆ ಅನುಮಾನ ವ್ಯಕ್ತಪಡಿಸಿ ಬ್ಯಾಂಕಿನ ಅಧಿಕಾರಿ ಎಸ್.ರಾಜಶೇಖರ್, ವಿಜಯನಗರ

■ 6ನೇ ಪುಟಕ್ಕೆ

ಇಂದು ಸಾರಿಗೆ ನೌಕರರ ಬೆಂಗಳೂರು ಚಲೋ

ಮೈಸೂರಲ್ಲಿ ಬಸ್ ಸಂಚಾರದಲ್ಲಿ ಯಾವುದೇ ವ್ಯತ್ಯಯವಿಲ್ಲ

ಮೈಸೂರು, ಫೆ.18(ಎಂಟಿವೈ)– ಬಾಕಿ ವೇತನ ಪಾವತಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಾರಿಗೆ ಸಂಸ್ಥೆಯ ನೌಕರರು ಗುರುವಾರ (ಫೆ.19) ಕರೆ ನೀಡಿರುವ 'ಬೆಂಗಳೂರು ಚಲೋ' ಪ್ರತಿಭಟನಾ ಸಭೆಯಲ್ಲಿ ಮೈಸೂರು ಭಾಗದಿಂದ ಸಾರಿಗೆ ನೌಕರರ ಸಂಘದ ಮುಖಂಡರು ಮಾತ್ರ ಪಾಲ್ಗೊಳ್ಳುತ್ತಿದ್ದು, ಬಸ್ ಸಂಚಾರದಲ್ಲಿ ಯಾವುದೇ ವ್ಯತ್ಯಯ ಉಂಟಾಗುವುದಿಲ್ಲ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ಹಾಗೂ ನೌಕರರ ಸಂಘದ ಮುಖಂಡರು ಸ್ಪಷ್ಟಪಡಿಸಿದ್ದಾರೆ.

ಬೇಡಿಕೆ ಈಡೇರಿಕೆಗಾಗಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೌಕರರ ಸಂಘಟನೆಗಳು ಮುಷ್ಕರ ನಡೆಸಲು ನಿರ್ಧರಿಸಿದ್ದು, ಅದರ ಭಾಗವಾಗಿ ನಾಳೆ ರಾಜ್ಯದಾದ್ಯಂತ ಸಾರಿಗೆ ನೌಕರರು ಬೆಂಗಳೂರು ಚಲೋ ಹಮ್ಮಿಕೊಂಡಿದ್ದಾರೆ. ಈಗಾಗಲೇ ಸಾರಿಗೆ ಸಂಸ್ಥೆಯ ಅಧಿಕಾರಿಗಳು ಮುಷ್ಕರದಲ್ಲಿ ನೌಕರರು ಪಾಲ್ಗೊಳ್ಳದಂತೆ ಮನವರಿಕೆ ಮಾಡಿಕೊಡುತ್ತಿದ್ದು, ನಿಯಮ ಉಲ್ಲಂಘಿಸದಂತೆ ಎಚ್ಚರಿಕೆ ನೀಡಿದ್ದಾರೆ. ಅಲ್ಲದೆ, 'ನೋ ವರ್ಕ್, ನೋ ಪೇ' ನಿಯಮ ಜಾರಿಗೆ ತಂದಿದ್ದು, ಸಾರಿಗೆ ಸಂಸ್ಥೆಯ ನೌಕರರು ಕರ್ತವ್ಯಕ್ಕೆ ಗೈರು ಹಾಜರಾಗಿ ಮುಷ್ಕರದಲ್ಲಿ ಪಾಲ್ಗೊಂಡರೆ, ಗೈರಾದ ದಿನ ವೇತನ ನೀಡದಿರಲು ನಿರ್ಧರಿಸಿದೆ.

■ 6ನೇ ಪುಟಕ್ಕೆ

ಸರ್ಕಾರ ಸ್ಪಂದಿಸದಿದ್ದರೆ ಹೋರಾಟ

ಗುರುವಾರ ಬೆಂಗಳೂರು ಚಲೋ ಕರೆ ನೀಡಿರುವುದರಿಂದ ಮೈಸೂರಿಂದ ನೌಕರರ ಸಂಘದ ಮುಖಂಡರು ಹಾಗೂ ವಿವಿಧ ಡಿಪೋಗಳಲ್ಲಿ ವಾರದ ರಜೆಯಲ್ಲಿರುವ ನೌಕರರು ಮಾತ್ರ ಪಾಲ್ಗೊಳ್ಳಲಿದ್ದಾರೆ. ಹಾಗಾಗಿ ಮೈಸೂರಲ್ಲಿ ಸಾರಿಗೆ ಬಸ್ ಸಂಚಾರ ಎಂದಿನಂತೆ ಇರುತ್ತದೆ. ನೌಕರರ ಬೇಡಿಕೆಗೆ ಸರ್ಕಾರ ಸ್ಪಂದಿಸದಿದ್ದರೆ, ಮುಷ್ಕರ ತೀವ್ರ ಸ್ವರೂಪ ಪಡೆಯಬಹುದು. ಆಗ ಬಸ್ ಸಂಚಾರ ಸ್ಥಗಿತಗೊಳ್ಳುವ ಅನಿವಾರ್ಯತೆ ಇದೆ.

-ಬಸವರಾಜಗೌಡ,
ಸಾರಿಗೆ ನೌಕರರ ಸಂಘದ ಮುಖಂಡ



ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ ಯೋಜನೆಯಡಿ

ಮೈಸೂರು ಕಾರಂಜಿ ಕೆರೆಯಲ್ಲಿ ಸಾಹಸ ಕ್ರೀಡೆಗೆ



ಝಿಪ್‌ಲೈನ್ ನಿರ್ಮಾಣ

• 14 ಕೋಟಿ ರೂ. ಅನುದಾನದಲ್ಲಿ ಕಾಮಗಾರಿ ಆರಂಭ
• ವರ್ಷಾಂತ್ಯಕ್ಕೆ ಕಾಮಗಾರಿ ಪೂರ್ಣಗೊಳ್ಳುವ ವಿಶ್ವಾಸ



ಮೈಸೂರಿನ ಕಾರಂಜಿಕೆರೆ ಆವರಣದಲ್ಲಿ ಝಿಪ್‌ಲೈನ್‌ಗೆ ಪಿಲ್ಲರ್ ನಿರ್ಮಾಣ ಕಾಮಗಾರಿ ಆರಂಭವಾಗಿದೆ.

ಮೈಸೂರು, ಫೆ.18(ಎಂಟಿವೈ)– ಮೈಸೂರಿಗೆ ಪ್ರವಾಸಿಗರ ಮತ್ತಷ್ಟು ಆಕರ್ಷಿಸುವ ನಿಟ್ಟಿನಲ್ಲಿ ಪ್ರವಾಸೋದ್ಯಮ ಇಲಾಖೆ ನೈಸರ್ಗಿಕ ತಾಣವಾದ ಕಾರಂಜಿ ಕೆರೆ ಆವರಣದಲ್ಲಿ ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ ಯೋಜನೆಯಡಿ ಸಾಹಸ ಕ್ರೀಡೆಗಾಗಿ 'ಝಿಪ್‌ಲೈನ್' ನಿರ್ಮಾಣ ಆರಂಭಿಸಿದೆ.

ಮೈಸೂರು ಮೃಗಾಲಯ ಹಾಗೂ ಕಾರಂಜಿಕೆರೆಗೆ ಬರುವ ಪ್ರವಾಸಿಗರ ಸಾಹಸ ಕ್ರೀಡಾ ಚಟುವಟಿಕೆಗಳತ್ತ ಸೆಳೆಯುವ ನಿಟ್ಟಿನಲ್ಲಿ 14 ಕೋಟಿ ರೂ. ವೆಚ್ಚದಲ್ಲಿ ಸಾಹಸ ಕ್ರೀಡೆಗೆ ಅಣಿ ಮಾಡಲಾಗುತ್ತಿದೆ. ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಇಲಾಖೆಯ ಮೂಲಸೌಕರ್ಯ ಅಭಿವೃದ್ಧಿ ನಿಗಮವು ಕಾರಂಜಿಕೆರೆ ಆವರಣದಲ್ಲಿ ಮೊದಲ ಹಂತದಲ್ಲಿ ಜಿಪ್‌ಲೈನ್ ಕಾಮಗಾರಿ ಕೈಗೆತ್ತಿಕೊಂಡಿದೆ. ಒದಕ್ಕಾಗಿ ಪಿಲ್ಲರ್ ನಿರ್ಮಾಣ ಕಾಮಗಾರಿ ಆರಂಭವಾಗಿದೆ.

18 ಮೀಟರ್ ಎತ್ತರ, 250 ಮೀಟರ್ ಉದ್ದ: ಕಾರಂಜಿಕೆರೆಯ ದಕ್ಷಿಣ ಮತ್ತು ಉತ್ತರ ದಿಕ್ಕಿಗೆ ಝಿಪ್‌ಲೈನ್ ನಿರ್ಮಿಸಲು ಉದ್ದೇಶಿಸಲಾಗಿದೆ. ಈ ಝಿಪ್‌ಲೈನ್ 18 ಮೀಟರ್ ಎತ್ತರ ಹಾಗೂ 250 ಮೀಟರ್ ಉದ್ದವಿರುತ್ತದೆ. ಈಗಾಗಲೇ ಪ್ರವಾಸೋದ್ಯಮ ಇಲಾಖೆ ಡಿಪಿಆರ್ ಸಿದ್ಧಪಡಿಸಿದ್ದು, ಕಾಮಗಾರಿಗೆ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅನುಮತಿ ಪಡೆದಿದೆ. ಉದ್ದೇಶಿತ ಜಿಪ್‌ಲೈನ್, ಕಾರಂಜಿಕೆರೆಯ ಚಿಟ್ಟೆ ಪಾರ್ಕ್‌ಗೆ ಹೊಂದಿಕೊಂಡಂತೆ ನಿರ್ಮಾಣವಾಗಲಿದೆ. ನಜ್ಜರ್‌ಬಾದ್ ಕಡೆ(ಇರಾನಿ ಮನೆ ಕಡೆ)ಯಿಂದ ಆರಂಭವಾಗುವ

■ 6ನೇ ಪುಟಕ್ಕೆ

ಪರಿಸರವಾದಿಗಳು ಆಕ್ಷೇಪಿಸಿದ್ದರು

ಚಾಮುಂಡಿಬೆಟ್ಟದಲ್ಲಿ ರೋಪ್‌ವೇ ನಿರ್ಮಾಣಕ್ಕೆ ಪರಿಸರ ವಾದಿಗಳಿಂದ ಪ್ರಬಲ ವಿರೋಧ ವ್ಯಕ್ತವಾಗಿತ್ತು. ಹಾಗೆಯೇ ಕಾರಂಜಿಕೆರೆಯಲ್ಲಿ ಜಿಪ್‌ಲೈನ್, ಫ್ಲೈಓವರ್ ಫುಟ್‌ಪಾತ್ ನಿರ್ಮಾಣ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಯನ್ನು ವಿರೋಧಿಸಿದ್ದರು.

ಕಾರಂಜಿಕೆರೆ ನೈಸರ್ಗಿಕ ಜೀವ ವೈವಿಧ್ಯತೆ ತಾಣವಾಗಿದ್ದು, ಅದನ್ನು ಮನರಂಜನಾ ತಾಣವಾಗಿಸದಂತೆ ಆಕ್ಷೇಪಿಸಿದ್ದರು. ಇದರಿಂದ ಅಂದು ಮೃಗಾಲಯ 18 ಕೋಟಿ ರೂ. ಯೋಜನೆಯನ್ನು ತಿರಸ್ಕರಿಸಿತ್ತು.

ಇಂದು ಛತ್ರಪತಿ ಶಿವಾಜಿ ಜಯಂತಿ



ಮೈಸೂರು,ಫೆ.18–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ ಜಯಂತ್ಯೋತ್ಸವ ಸಮಿತಿಯಿಂದ ನಾಳೆ (ಫೆ.19) ಛತ್ರಪತಿ ಶ್ರೀ ಶಿವಾಜಿ ಮಹಾರಾಜ 399ನೇ ಜಯಂತ್ಯೋತ್ಸವವನ್ನು ಆಚರಿಸಲಾಗುತ್ತಿದ್ದು, ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಛತ್ರಪತಿ ಶ್ರೀ ಶಿವಾಜಿ ಮಹಾರಾಜರ 399ನೇ ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಕೆ.ನಾಗೇಂದ್ರ ರಾವ್ ಅವತಾಡೆ ಕೋರಿದರು.

ಗುರುವಾರ ಬೆ.9.30ಕ್ಕೆ ಗಂಟೆಗೆ ಅರಮನೆ ಕೋಟೆ ಆಂಜನೇಯಸ್ವಾಮಿ ದೇವಾಲಯದಿಂದ ಕಲಾತಂಡಗಳೊಂದಿಗೆ ಕಲಾಮಂದಿರದವರೆಗೂ ಮೆರವಣಿಗೆ ನಡೆಯಲಿದೆ. ಬಳಿಕ ಕಲಾಮಂದಿರದಲ್ಲಿ ಸಭಾ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಯಶಸ್ವಿಗೆ ಈಗಾಗಲೇ ಸ್ವಾಗತ, ಹಣಕಾಸು, ಪ್ರಚಾರ, ಅಲಂಕಾರ, ಮೆರವಣಿಗೆ, ಸಾಂಸ್ಕೃತಿಕ, ಆಹಾರ ಸಮಿತಿಗಳನ್ನು ರಚಿಸಲಾಗಿದೆ. ಜಯಂತಿ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ಉದ್ಘಾಟಿಸಲಿದ್ದು, ವಿಶೇಷ ಅತಿಥಿಗಳಾಗಿ ಸಂಸದರಾದ ಯದುವೀರ್ ಒಡೆಯರ್, ಸುನೀಲ್ ಬೋಸ್ ಆಗಮಿಸುವರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಾಸಕರಾದ ಕೆ.ಹರೀಶ್‌ಗೌಡ, ಶ್ರೀವತ್ಸ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ನಗರಪಾಲಿಕೆ ಮಾಜಿ ಸದಸ್ಯರಾದ ಶೋಭಾ, ಸುನೀಲ್ ವಹಿಸುವರು.

ಮುಖ್ಯ ಭಾಷಣಕಾರರಾಗಿ ಭಾರತೀಯ ಭಾಷಾ ಸಂಸ್ಥಾನದ ಶಾಸ್ತ್ರೀಯ ಕನ್ನಡ ಅಧ್ಯಯನ ಕೇಂದ್ರ ಹಿರಿಯ ಸಂಶೋಧಕ ಡಾ.ಆರ್.ಚಲಪತಿ ಮಾತನಾಡುವರು. ಸಭಾ ಕಾರ್ಯಕ್ರಮದ ನಂತರ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಲಿದೆ. ಸಮುದಾಯದ ಹಾಗೂ ಸಾರ್ವಜನಿಕರು ಆಗಮಿಸಿ ಕಾರ್ಯಕ್ರಮ ಯಶಸ್ವಿಗೊಳಿಸುವಂತೆ ಕೋರಿದ್ದಾರೆ.

ಫೆ.21, ಮೈಸೂರಲ್ಲಿ ಕೇಂದ್ರ ಬಜೆಟ್ ಮೇಲೆ 'ಭಾರತದ ಭವಿಷ್ಯಕ್ಕಾಗಿ ಹಣಕಾಸು ಮಾರ್ಗಸೂಚಿ' ಕುರಿತು ಸಮ್ಮೇಳನ

ಮೈಸೂರು,ಫೆ.18(ಜಿಎ)–ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಡೆಂಟ್ ಆಫ್ ಇಂಡಿಯಾದ ಮೈಸೂರು ಶಾಖೆ ವತಿಯಿಂದ ಮೈಸೂರಿನಲ್ಲಿ ಫೆ.21ರಂದು 2026ರ ಕೇಂದ್ರ ಬಜೆಟ್ ಕುರಿತು 'ಭಾರತದ ಭವಿಷ್ಯಕ್ಕಾಗಿ ಹಣಕಾಸು ಮಾರ್ಗಸೂಚಿ' ವಿಷಯ ಕುರಿತು ಒಂದು ದಿನದ ಸಮ್ಮೇಳನ ಆಯೋಜಿಸಲಾಗಿದೆ ಎಂದು ಶಾಖೆಯ ಅಧ್ಯಕ್ಷ ಎಸ್.ಭಾರ್ಗವ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ವಿಶ್ವೇಶ್ವರನಗರದಲ್ಲಿರುವ ಬಿಲ್ಡರ್ ಅಸೋಸಿಯೇಷನ್ ಸಭಾಂಗಣದಲ್ಲಿ ಬೆಳಗ್ಗೆ 9.30ರಿಂದ ಸಂಜೆ 7 ಗಂಟೆಯವರೆಗೆ ಹಿರಿಯ ಚಾರ್ಟರ್ಡ್ ಅಕೌಂಡೆಂಟ್‌ಗಳು ಈ ಸಮ್ಮೇಳನದಲ್ಲಿ ಕೇಂದ್ರದ ಈ ಬಾರಿಯ ಬಜೆಟ್ ಕುರಿತು ಆಳವಾದ ವಿಶ್ಲೇಷಣೆ, ತಜ್ಞರ ಅಭಿಪ್ರಾಯ ಮಂಡನೆ, ನೇರ ತೆರಿಗೆ, ಪರೋಕ್ಷ ತೆರಿಗೆ, ನಿಯಂತ್ರಣಾತ್ಮಕ ನವೀಕರಣ, ನೀತಿ ಪರಿಣಾಮ, ಭಾರತದ ಆರ್ಥಿಕ ಬೆಳವಣಿಗೆಯ ಸಮಗ್ರ ಮಾರ್ಗನಕ್ಷೆ ಕುರಿತು ಚರ್ಚಿಸಲಿದ್ದಾರೆ ಎಂದರು.

ಇದು ಚಾರ್ಟರ್ಡ್ ಅಕೌಂಟೆಂಟ್‌ಗಳು, ತೆರಿಗೆ ತಜ್ಞರು, ಉದ್ಯಮಿಗಳು, ಮಾಲೀಕರು, ಹಣಕಾಸು ವೃತ್ತಿಪರರು, ವಿದ್ಯಾರ್ಥಿಗಳು ಹಾಗೂ ದೇಶದ ಆರ್ಥಿಕ ದಿಕ್ಕು ಕುರಿತು ಅರಿತುಕೊಳ್ಳಲು ಆಸಕ್ತಿ ಇರುವ ಎಲ್ಲರಿಗೂ ಉಪಯುಕ್ತವಾದುದಾಗಿದೆ. ಮಾಹಿತಿಗೆ ದೂ. 0821-2598000 ಸಂಪರ್ಕಿಸಿ ಎಂದರು. ಗೋಷ್ಠಿಯಲ್ಲಿ ವೆಂಕಟೇಶ್‌ಸ್ವಾಮಿ, ಶರತ್ಚಂದ್ರ ಇದ್ದರು.

ಅಭಿನಂದನೆ...



ಕೆ.ಆರ್.ನಗರದ ಕಪ್ಪಡಿ ಕ್ಷೇತ್ರದ ಪೀಠಾಧಿಪತಿಗಳಾದ ಎಂ.ಎಲ್.ವರ್ಚಸ್ವಿ ಸಿದ್ದಲಿಂಗ ರಾಜೇ ಅರಸು ಅವರನ್ನು ಪಾಲಿಕೆ ಮಾಜಿ ಸದಸ್ಯ ಬಿ.ವಿ.ಮಂಜುನಾಥ್, ವಕೀಲರಾದ ಶಿವರಾಜ್, ಸತೀಶ್, ಕೃಷ್ಣ ನಾಯಕ್, ಸೋಮಶೇಖರ್‌ರಾಜೇ ಅರಸ್, ವಿಜಯ್ ಕುಮಾರ್, ಸುಪ್ರೀತ್ ಜಗದೀಶ್, ಶ್ರೀನಿವಾಸ್ ಅಭಿನಂದಿಸಿ, ಆಶೀರ್ವಾದ ಪಡೆದರು.

ಫೆ.22, 'ಹುತ್ತದಲ್ಲಿ ಹುತ್ತ' ಹಾಸ್ಯ ನಾಟಕ

ಮೈಸೂರು,ಫೆ.18(ಜಿಎ)–ಬೆಂಗಳೂರಿನ ಅಂತರಂಗ ತಂಡದ ವತಿಯಿಂದ ಫೆ.22 ರಂದು ಸಂಜೆ 7 ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಕೈಲಾಸಂ ಅವರ 'ಹುತ್ತದಲ್ಲಿ ಹುತ್ತ' ನಗೆ ನಾಟಕ ಪ್ರದರ್ಶನ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ತಂಡದ ಕಾರ್ಯದರ್ಶಿ ಅಂಕಲ್ ಶ್ಯಾಮ್ ಈ ವಿಷಯ ತಿಳಿಸಿ, ನಿರಂತರ ಫೌಂಡೇಷನ್ ಈ ಪ್ರದರ್ಶನಕ್ಕೆ ಸಹಕಾರ ನೀಡಿದೆ. ತಮ್ಮ ತಂಡ ಕಳೆದ 46 ವರ್ಷಗಳಿಂದ ರಂಗಕ್ರಿಯೆಯಲ್ಲಿ ತೊಡಗಿಕೊಂಡಿದೆ. ಕನ್ನಡಕ್ಕೊಬ್ಬನೇ ಕೈಲಾಸಂ ಆದ ಟಿ.ಪಿ.ಕೈಲಾಸಂ ರಚಿಸಿರುವ ವಿಭಿನ್ನ ಹಾಸ್ಯ ನಾಟಕ ಇದಾಗಿದೆ. ಮೂಲ ನಿರ್ದೇಶನ ಡಾ.ಬಿ.ವಿ. ರಾಜಾರಾಂ ಅವರದ್ದಾಗಿದ್ದು, ಪರಿಷ್ಕೃತ ನಿರ್ದೇಶನ ಅರ್ಚನಾ ಶ್ಯಾಂ ನಿರ್ವಹಿಸಿದ್ದಾರೆ ಎಂದರು.

ನಿರಂತರ ಫೌಂಡೇಷನ್‌ನ ಶ್ರೀನಿವಾಸ ಪಾಲಹಳ್ಳಿ ಮಾತನಾಡಿ, ಈ ನಾಟಕದ ಪ್ರತಿಯೊಂದೂ ಸಂಭಾಷಣೆಯಲ್ಲಿ ಹಾಸ್ಯವಿರುವುದರ ಜೊತೆಗೆ ಗಂಭೀರ ಚಿಂತನೆಯೂ ಇದೆ. ಟಿಕೆಟ್ ದರ 150 ರೂ.ಗಳಾಗಿದ್ದು, ಹೆಚ್ಚಿನ ಮಾಹಿತಿಗೆ ದೂ. 98809 14509 ಸಂಪರ್ಕಿಸಬಹುದು ಎಂದರು. ಸುದ್ದಿಗೋಷ್ಠಿಯಲ್ಲಿ ಹೆಚ್.ವಿ. ನಟರಾಜ್, ರಂಗನಾಥರಾವ್, ನಂಜುಂಡರಾವ್ ಉಪಸ್ಥಿತರಿದ್ದರು.

ನಿಧನ

ರೆ. ಫಾ. ಜೋಸೆಫ್ ಅಲೆಕ್ಸಾಂಡರ್



ಮೈಸೂರು, ಫೆ. 18–ಮೈಸೂರಿನ ಮಣಿಪಾಲ್ ಆಸ್ಪತ್ರೆಯಲ್ಲಿ ರೆ. ಫಾ. ಜೋಸೆಫ್ ಅಲೆಕ್ಸಾಂಡರ್ (62) ಬುಧವಾರ ಬೆಳಗ್ಗೆ ನಿಧನರಾದರು. ಪಾರ್ಥಿವ ಶರೀರವನ್ನು ನಾಳೆ (ಫೆ.19) ಬೆಳಗ್ಗೆ 8.30ಕ್ಕೆ ಮೈಸೂರಿನ ಸೇಂಟ್ ಜೋಸೆಫ್ ಕೆಥೆಡ್ರಲ್‌ನಲ್ಲಿ (ಸೇಂಟ್ ಫಿಲೋಮಿನಾ ಚರ್ಚ್) ಸಾರ್ವಜನಿಕರ ದರ್ಶನಕ್ಕೆ ತರಲಾಗುವುದು. ಬೆಳಗ್ಗೆ 10.30ಕ್ಕೆ ಅಂತ್ಯಕ್ರಿಯೆಯ ಸಾಮೂಹಿಕ ಪ್ರಾರ್ಥನೆ ಬಳಿಕ ಸಂಜೆ 4 ಗಂಟೆಗೆ ಬೆಂಗಳೂರಿನ ಒಟ್ಟರ್‌ಹೊಟ್ಟಿಯಲ್ಲಿರುವ ಸೇಂಟ್ ಜೋಸೆಫ್ ಚರ್ಚ್ (ಮಾರ್ತಳ್ಳಿ)ನಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪೋರಂಗಡ ಎಂ.ಪೊನ್ನಪ್ಪ



ಮೈಸೂರು: ನಗರದ ಬೃಂದಾವನ ಬಡಾವಣೆ ನಿವಾಸಿ, ಮೂಲತಃ ಕೊಡಗಿನ ಪೊನ್ನಂಪೇಟೆ ತಾಲೂಕಿನ ಬೆಕ್ಕೆಸೊಡ್ಲೂರು ಗ್ರಾಮದ ದಿವಂಗತರಾದ ಮಾಚಯ್ಯ ಅವರ ಪುತ್ರ ಹಾಗೂ ರಾಧಾ ಕಾವೇರಮ್ಮ (ಮಚ್ಚರಂಡ) ಅವರ ಪತಿ ಪೋರಂಗಡ ಎಂ.ಪೊನ್ನಪ್ಪ (83) ಬುಧವಾರ ಮಧ್ಯಾಹ್ನ ಮೈಸೂರಿನ ಅವರ ನಿವಾಸದಲ್ಲಿ ನಿಧನರಾದರು. ಇವರ ಅಂತ್ಯಕ್ರಿಯೆ ನಾಳೆ (ಫೆ.19)ರ ಬೆಳಗ್ಗೆ 11 ಗಂಟೆಗೆ ಮೈಸೂರಿನ ಗೋಕುಲಂನಲ್ಲಿರುವ ಚಿರಶಾಂತಿಧಾಮದಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮಾಹಿತಿಗೆ ಮೊ.98806 25952 ಸಂಪರ್ಕಿಸಬಹುದು.

ಪುಟ್ಟಲಿಂಗಮ್ಮ



ಮೈಸೂರಿನ ಜಯನಗರ ನಿವಾಸಿ, ಆದಾಯ ತೆರಿಗೆ ಇಲಾಖೆ ನಿವೃತ್ತ ಅಧಿಕಾರಿ ಚಿಕ್ಕಣ್ಣ ಅವರ ಧರ್ಮಪತ್ನಿ ಪುಟ್ಟಲಿಂಗಮ್ಮ(85) ಅವರು ಬುಧವಾರ ನಿಧನರಾದರು.

ಇವರು ಪತಿ, ಮಕ್ಕಳಾದ ದಿನೇಶ್ ಕುಮಾರ್, ಚಂದ್ರ, ಲಕ್ಷ್ಮೀ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಜಯನಗರ ರುದ್ರಭೂಮಿಯಲ್ಲಿ ಗುರುವಾರ(ಫೆ.19) ಮಧ್ಯಾಹ್ನ 12ಕ್ಕೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎನ್.ಮಾದೇಗೌಡ



ಮೈಸೂರಿನ ಸಿದ್ದಾರ್ಥನಗರ ನಿವಾಸಿ, ಲೋಕೋಪಯೋಗಿ ಇಲಾಖೆ ನಿವೃತ್ತ ಸೂಪರಿಂಟೆಂಡೆಂಟ್ ಇಂಜಿನಿಯರ್ ಎನ್.ಮಾದೇಗೌಡರು (86) ಬುಧವಾರ ನಿಧನರಾದರು.

ಇವರು ಪತ್ನಿ ಗೌರಮ್ಮ, ಪುತ್ರ ಮಹೇಶ್, ಪುತ್ರಿ ರೂಪಶ್ರೀ ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗುರುವಾರ(ಫೆ.19) ಮಧ್ಯಾಹ್ನ 3 ಗಂಟೆಗೆ ಚಾಮುಂಡಿಬೆಟ್ಟ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪಠ್ಯದ ಜೊತೆಗೆ ಬದುಕು ಕಟ್ಟಿಕೊಳ್ಳುವ ಪೂರಕ ಜ್ಞಾನಾರ್ಜನೆ ಅಗತ್ಯ

ತರಬೇತಿ ಕಾರ್ಯಾಗಾರದಲ್ಲಿ ವಿದ್ಯಾರ್ಥಿಗಳಿಗೆ ಕುಲಸಚಿವ ಪ್ರೊ.ನಾಗರಾಜ್ ಸಲಹೆ

ಮೈಸೂರು, ಫೆ.18(ಬಿಎಲ್‌ಯು)– ವಿದ್ಯಾರ್ಥಿಗಳಿಗೆ ಪಠ್ಯದ ಜೊತೆಗೆ ಬದುಕು ಕಟ್ಟಿಕೊಳ್ಳುವ ಪೂರಕ ಜ್ಞಾನಾರ್ಜನೆಯ ಅಗತ್ಯವಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್.ನಾಗರಾಜ್ ಸಲಹೆ ನೀಡಿದರು.

ನಗರದ ಮಾನಸ ಗಂಗೋತ್ರಿಯ ರೇಷ್ಮೆ ಕೃಷಿ ಅಧ್ಯಯನ ವಿಭಾಗದಲ್ಲಿ 'ಉದ್ಯೋಗಾರ್ಹತೆ ಸಂವಹನ ಮತ್ತು ಮೃದು ಕೌಶಲ್ಯ' ಕುರಿತ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಕಂಪ್ಯೂಟರ್ ಸೇರಿದಂತೆ ಇತರೆ ಕೌಶಲ್ಯದ ಕಲಿಕೆ ಇದ್ದರೆ ಹಲವು ಕಂಪನಿಗಳಲ್ಲಿ ಸರಾಗವಾಗಿ ಉದ್ಯೋಗಾವಕಾಶ ದೊರೆಯುತ್ತದೆ ಎಂದು ಅಭಿಪ್ರಾಯಪಟ್ಟರು.

ಈ ಹಿನ್ನೆಲೆಯಲ್ಲಿ ವಿದ್ಯಾರ್ಥಿಗಳು ಪಠ್ಯದ ಜೊತೆಗೆ ವಿವಿಧ ಕ್ಷೇತ್ರಗಳ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು. ಇದರಿಂದ ಒಂದಲ್ಲಾ ಒಂದು ಕಡೆ ಉದ್ಯೋಗ



ಮಾನಸಗಂಗೋತ್ರಿಯ ರೇಷ್ಮೆ ಕೃಷಿ ಅಧ್ಯಯನ ವಿಭಾಗದಲ್ಲಿ ನಡೆದ 'ಉದ್ಯೋಗಾರ್ಹತೆ ಸಂವಹನ ಮತ್ತು ಮೃದು ಕೌಶಲ್ಯ' ಕುರಿತ ತರಬೇತಿ ಕಾರ್ಯಾಗಾರವನ್ನು ಮೈಸೂರು ವಿವಿ ಕುಲಸಚಿವ (ಪರೀಕ್ಷಾಂಗ) ಪ್ರೊ.ಎನ್.ನಾಗರಾಜ್ ಉದ್ಘಾಟಿಸಿದರು.

ದೊರೆಯುವುದು ಖಚಿತ ಎಂದರು.

ಭಾರತದಲ್ಲಿ ಶೇಕಡ 65ರಷ್ಟು ಯುವ ಶಕ್ತಿ ಇದ್ದು, ದೇಶದ ಅಭಿವೃದ್ಧಿಗೆ ಇವರು ಬೆನ್ನೆಲುಬಾಗಿದ್ದಾರೆ. ಯುವ ಶಕ್ತಿಗೆ ಸೂಕ್ತ ಮಾರ್ಗದರ್ಶನ ನೀಡಿದರೆ ಅವರಿಂದ ದೇಶದ ಬೆಳವಣಿಗೆ ಇಮ್ಮಡಿಗೊಳ್ಳುತ್ತದೆ ಎಂದು ತಿಳಿಸಿದರು.

ಉದ್ಯೋಗ ಪಡೆಯುವ ಸಂದರ್ಭದಲ್ಲಿ ವಿದ್ಯಾರ್ಥಿಗಳು ಹಲವು ಶಿಸ್ತುಬದ್ಧ ನಿಯಮಗಳನ್ನು ಪಾಲಿಸಬೇಕು. ಉದ್ಯೋಗ ನೀಡುವವರು ಇದನ್ನೆಲ್ಲಾ ಸೂಕ್ಷ್ಮವಾಗಿ ಗಮನಿಸುತ್ತಾರೆ. ಆದ ಕಾರಣ ಇಂತಹ ತರಬೇತಿ ಕಾರ್ಯಾಗಾರದಲ್ಲಿ ಈ ಬಗ್ಗೆ ನೀಡುವ ಟಿಪ್ಸ್‌ಗಳನ್ನು ವಿದ್ಯಾರ್ಥಿಗಳು ಗಂಭೀರವಾಗಿ ಪರಿಗಣಿಸಬೇಕು ಎಂದು ಪ್ರೊ.ನಾಗರಾಜ್ ಕಿವಿಮಾತು ಹೇಳಿದರು.

ಈ ವೇಳೆ ಮಾತನಾಡಿದ ಮೈಸೂರು ವಿಶ್ವವಿದ್ಯಾನಿಲಯದ ವೃತ್ತಿ ಕೇಂದ್ರದ ಸಂಯೋಜಕ ಪ್ರೊ.ಆರ್.ಮಹೇಶ್, ಇಂದಿನ ಜಾಗತಿಕ ಮಟ್ಟದ ಸ್ಪರ್ಧೆಯಲ್ಲಿ ಅನಾರೋಗ್ಯಕರ ಪೈಪೋಟಿ ಏರ್ಪಟ್ಟಿದೆ. ಇದರಿಂದ ಉನ್ನತ ಶಿಕ್ಷಣ ಪಡೆದ ಮಾತ್ರಕ್ಕೆ ನಮಗೆ ಉದ್ಯೋಗ ಸಿಕ್ಕೇ ಸಿಗುತ್ತದೆ ಎಂಬ ಅತೀವ ವಿಶ್ವಾಸ ಬೇಡ ಎಂದು ಹೇಳಿದರು.

ವಿದ್ಯಾರ್ಹತೆಗೆ ತಕ್ಕ ಹಾಗೆ ಕೌಶಲ್ಯ ಪಡೆಯುವುದು ಅನಿವಾರ್ಯವಾಗಿದೆ. ಕೌಶಲ್ಯಾಧಾರಿತ ತರಬೇತಿ ಉದ್ಯೋಗಕ್ಕೆ ಮಾತ್ರ ಸೀಮಿತವಾಗಬಾರದು. ಕೌಶಲ್ಯ ವಿದ್ದರೆ ಉದ್ಯೋಗಾವಕಾಶ ಮಾತ್ರವಲ್ಲದೆ ವ್ಯಕ್ತಿತ್ವ ವಿಕಸನ ಕೂಡ ಆಗುತ್ತದೆ. ಇದರಿಂದ ತರಬೇತಿ ಪಡೆದಿರುವುದಕ್ಕೂ ಅರ್ಥ ಸಿಗುತ್ತದೆ ಎಂದು ಪ್ರೊ.ಮಹೇಶ್ ಅಭಿಪ್ರಾಯಪಟ್ಟರು. ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗದ ಅಧ್ಯಕ್ಷ ಪ್ರೊ.ಬಿ. ಸಣ್ಣಪ್ಪ, ಸಂಘಟನಾ ಕಾರ್ಯದರ್ಶಿ ಪ್ರೊ.ಟಿ.ಎಸ್.ಜಗದೀಶ್‌ಕುಮಾರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ತಂತ್ರಜ್ಞಾನ ಉದ್ಯಮದ ಹೊಸತನ: ಸೈಬರ್ ಭದ್ರತೆ, ಎಐ, ವೆಬ್ ಅಭಿವೃದ್ಧಿ



ಸೈಬರ್ ಭದ್ರತೆ, ಎಐ ಮತ್ತು ವೆಬ್ ಅಭಿವೃದ್ಧಿ ಕಾರ್ಯಾಗಾರದ ಉದ್ಘಾಟನೆ.

ಮೈಸೂರು,ಫೆ.18–ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಯುಜಿ ಕಂಪ್ಯೂಟರ್ ವಿಜ್ಞಾನ ವಿಭಾಗದ ವತಿಯಿಂದ ಉದ್ಯಮ ಪ್ರವೃತ್ತಿಗಳು ತಂತ್ರಜ್ಞಾನಗಳು: ಸೈಬರ್ ಭದ್ರತೆ, ಎಐ ಮತ್ತು ವೆಬ್ ಅಭಿವೃದ್ಧಿ ಕುರಿತು ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿತ್ತು.

ಮೈಸೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಡಾ.ಜಿ.ಹೇಮಂತ್ ಕುಮಾರ್ ಕಾರ್ಯಕ್ರಮ ಉದ್ಘಾಟಿಸಿ, ಎಐ ಮತ್ತು ಸೈಬರ್ ಭದ್ರತೆ ನಮ್ಮ ಡಿಜಿಟಲ್ ಭವಿಷ್ಯದ ಅವಳಿ ಸ್ತಂಭಗಳಾಗಿವೆ; ತಂತ್ರಜ್ಞಾನವು ಪ್ರತಿಯೊಂದು ಆಧುನಿಕ ಪ್ರಯತ್ನದ ಹೈ–ಸ್ಪೀಡ್ ಮೆದುಳಿನಂತೆ ಕಾರ್ಯನಿರ್ವಹಿಸುತ್ತದೆ. ಆದರೆ ಅದು ಮಾನವ ಅಂತಃಪ್ರಜ್ಞೆಗೆ ಪಾಲುದಾರನಾಗಿ ಉಳಿದಿದೆ, ಎಂದಿಗೂ ಬದಲಿಯಾಗಿಲ್ಲ ಎಂದರು.

ಅಧ್ಯಕ್ಷತೆಯನ್ನು ವಹಿಸಿದ್ದ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಮಾತನಾಡಿ, ಸೈಬರ್ ಸುರಕ್ಷತೆಯನ್ನು ಕಲಿಯುವುದರಿಂದ ಆನ್‌ಲೈನ್ ಬೆದರಿಕೆಗಳಿಂದ ಡೇಟಾ ಮತ್ತು ಗೌಪ್ಯತೆಯನ್ನು ರಕ್ಷಿಸಲು ಸಹಾಯ ಮಾಡುತ್ತದೆ. ಇದು ಹ್ಯಾಕಿಂಗ್ ಮತ್ತು ಮಾಲ್‌ವೇರ್‌ನಂತಹ ಸೈಬರ್ ಅಪಾಯಗಳ ಬಗ್ಗೆ ಜಾಗೃತಿ ಮೂಡಿಸುತ್ತದೆ. ಇದು ಇಂದಿನ ಡಿಜಿಟಲ್ ಜಗತ್ತಿನಲ್ಲಿ ಬಲವಾದ ವೃತ್ತಿ ಅವಕಾಶಗಳನ್ನು ಸಹ ನೀಡುತ್ತದೆ ಎಂದರು. ಪ್ರಾಂಶುಪಾಲ ಡಾ.ಎಂ. ಪ್ರಭು ಮಾತನಾಡಿದರು. ಕಾರ್ಯಾಗಾರದಲ್ಲಿ ವಿಭಾಗದ ಮುಖ್ಯಸ್ಥರಾದ ಡಾ.ವಿದ್ಯಾಶಂಕರ, ಅಧ್ಯಾಪಕರು ಮತ್ತು ಕಾಲೇಜಿನ ವಿದ್ಯಾರ್ಥಿಗಳು ಹಾಜರಿದ್ದರು.

ಮೈಸೂರಲ್ಲಿರುವ ಕೆರೆಗಳ ಉಳಿಸಿ

ಕೆರೆಯಲ್ಲಿ ಅಕ್ರಮ ಕಟ್ಟಡಗಳನ್ನು ತೆರವುಗೊಳಿಸಿ

ಮೈಸೂರು,ಫೆ.18(ಜಿಎ)–ಮೈಸೂರಿನಲ್ಲಿರುವ ಕೆರೆಗಳ ಮೇಲೆ ಅಕ್ರಮವಾಗಿ ನಿರ್ಮಿಸಿರುವ ಕಟ್ಟಡಗಳನ್ನು ತೆರವುಗೊಳಿಸಿ ಕೆರೆಗಳನ್ನು ಉಳಿಸುವಂತೆ ಪರಿಸರ ಸಂರಕ್ಷಣಾ ವೇದಿಕೆ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ವೇದಿಕೆ ಅಧ್ಯಕ್ಷ ಗಿರೀಶ್ ದೇವರಮನಿ ಮಾತನಾಡಿ, ಕುರುಬಾರಹಳ್ಳಿ ಗ್ರಾಮದ ಸರ್ವೆ ನಂ.4ರಲ್ಲಿ ಮುಡಾ ವತಿಯಿಂದ ನಿರ್ಮಿಸಿರುವ ನಿವೇಶನಗಳು ಪ್ರಕೃತಿಯ ಜಲಮೂಲಗಳಿಗೆ ಹಾನಿ ಉಂಟು ಮಾಡುತ್ತಿವೆ. ಹೀಗಾಗಿ ಇಲ್ಲಿ ನಿವೇಶನ ತೆರವುಗೊಳಿಸಿ ದೊಡ್ಡಕೆರೆ ಹಾಗೂ ಲಿಂಗಾಂಬುದಿ ಕೆರೆ ಪುನಃ ಸ್ಥಾಪಿಸುವ ಕೆಲಸ ಮಾಡಬೇಕೆಂದು ಆಗ್ರಹಿಸಿದರು.


ಈ ಪ್ರದೇಶದಲ್ಲಿ ಸಾಂಪ್ರದಾಯಿಕ ಕಟ್ಟೆ ಹಾಗೂ ಜಲ ಮಾರ್ಗಗಳಿಗೆ ಮುಡಾ ನಿವೇಶನಗಳಿಂದ ಹಾನಿಯುಂಟಾಗಿದೆ. ಭೂಗರ್ಭ ಜಲ ಮಟ್ಟ ಕುಸಿಯುವ ಆತಂಕ ಎದುರಾಗಿದೆ. ಹೀಗಾಗಿ ನಗರದ ಪರಿಸರ ಸಮತೋಲನ ಮತ್ತು ಭವಿಷ್ಯದ ನೀರಿನ ಭದ್ರತೆಗಾಗಿ ಈ ಜಲ ಮೂಲಗಳನ್ನು ಸಂರಕ್ಷಿಸಬೇಕೆಂದು ಒತ್ತಾಯಿಸಿದರು.

ಹಾನಿಗೊಳಗಾಗಿರುವ ಸಾಂಪ್ರದಾಯಿಕ ಕಟ್ಟೆಗಳನ್ನು ಪುನಃ ಸ್ಥಾಪಿಸಿ ಸಂರಕ್ಷಿಸಬೇಕು. ದೊಡ್ಡ ಕೆರೆಯನ್ನು ಮೂಲ ಪರಿಸ್ಥಿತಿಗೆ ತಂದು ಪುನರುಜ್ಜೀವನಗೊಳಿಸಬೇಕು, ಪರಿಸರ ಹಾನಿಗೆ ಕಾರಣವಾಗಿ ಯೋಜನೆಗಳನ್ನು ಪರಿಶೀಲಿಸಬೇಕು. ಒಂದು ವೇಳೆ ಈ ಕುರಿತು 15 ದಿನಗಳೊಳಗೆ ಕ್ರಮ ಕೈಗೊಳ್ಳದಿದ್ದಲ್ಲಿ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿ ಸಲ್ಲಿಸಲಾಗುವುದು ಎಂದು ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಎಸ್.ಮಾಲತೇಶ್, ವಿಜಯ್‌ಕುಮಾರ್, ಎಂ.ಶಿವಕುಮಾರ್ ಉಪಸ್ಥಿತರಿದ್ದರು.

ಹಿಂದೂ ಕುಟುಂಬ ಕನಿಷ್ಠ 3 ಮಕ್ಕಳ ಹೊಂದಬೇಕು; ಘರ್ ವಾಪ್ಸಿ ಹೆಚ್ಚೆಚ್ಚು ಪ್ರೋತ್ಸಾಹಿಸಿ

ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಕರೆ



ಲಖ್ನೌ, ಫೆ.18– ಹಿಂದು ಧರ್ಮದ ಬಗ್ಗೆ ತಮ್ಮ ನಿಲುವನ್ನು ಪುನರುಚ್ಚರಿಸಿದ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ 'ಘರ್ ವಾಪ್ಸಿ' (ಹಿಂದು ಧರ್ಮಕ್ಕೆ ಮರುಪ್ರವೇಶ) ಪ್ರಯತ್ನಗಳನ್ನು ಮತ್ತಷ್ಟು ಬಲಪಡಿಸುವಂತೆ ಕರೆ ನೀಡುವುದರೊಂದಿಗೆ ಹಿಂದು ಕುಟುಂಬಗಳು ಕನಿಷ್ಠ ಮೂರು ಮಕ್ಕಳನ್ನು ಹೊಂದಬೇಕು ಎಂಬ ಅಭಿಪ್ರಾಯವನ್ನೂ ವ್ಯಕ್ತಪಡಿಸಿದರು.

ನಿರಾಲಾ ನಗರದ ಸರಸ್ವತಿ ಶಿಶು ಮಂದಿರದಲ್ಲಿ ನಡೆದ ಸಾಮಾಜಿಕ ಸಾಮರಸ್ಯ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಹಿಂದು ಧರ್ಮಕ್ಕೆ ಮರಳುವವರನ್ನು ಸಮಾಜವು ಬೆಂಬಲಿಸಿ ಕಾಳಜಿ ವಹಿಸಬೇಕು ಎಂದು ಹೇಳಿದರು.

ಹಿಂದು ಸಮಾಜ ಹೆಚ್ಚು ಎಚ್ಚರಿಕೆಯಿಂದ ಮತ್ತು ಜಾಗರೂಕತೆಯಿಂದ ಇರಬೇಕು. ಹಿಂದೂ ಸಮುದಾಯಕ್ಕೆ ತಕ್ಷಣದ ಯಾವುದೇ ಅಪಾಯ ಇಲ್ಲದಿದ್ದರೂ, ಹೆಚ್ಚು ಸಂಘಟಿತರಾಗುವ ಮೂಲಕ ಶಕ್ತಿಶಾಲಿಯಾಗಬೇಕು ಮತ್ತು ಸದಾ ಎಚ್ಚರಿಕೆಯಿಂದಿರಬೇಕು ಎಂದರು.

ಹಿಂದು ಜನಸಂಖ್ಯೆ ಕುಸಿಯುತ್ತಿರುವ ಬಗ್ಗೆ ಆತಂಕವ್ಯಕ್ತಪಡಿಸಿದ ಅವರು, ಬಲವಂತ ಅಥವಾ ಪ್ರಲೋಭನಗಳ ಮೂಲಕ ಧರ್ಮಾಂತರವಾಗುತ್ತಿರುವ ಘಟನೆಗಳನ್ನು ಉಲ್ಲೇಖಿಸಿದರು.

ಪ್ರತಿ ಹಿಂದು ಕುಟುಂಬದಲ್ಲಿ ಕನಿಷ್ಠ ಮೂರು ಮಕ್ಕಳು ಇರಬೇಕು, ಕುಟುಂಬಕ್ಕೆ ಸರಾಸರಿ ಮೂರು ಮಕ್ಕಳಿಗಿಂತ ಕಡಿಮೆ ಜನನ ಪ್ರಮಾಣವಿದ್ದರೆ, ಆ ಸಮಾಜ ಭವಿಷ್ಯದಲ್ಲಿ ಕುಸಿತದ ಅಪಾಯವನ್ನು ಎದುರಿಸಬಹುದು ಎಂದು ವಿಜ್ಞಾನಿಗಳ ಅಭಿಪ್ರಾಯವನ್ನು ಉಲ್ಲೇಖಿಸಿದರು.

ಹೊಸದಾಗಿ ಮದುವೆಯಾಗುವ ದಂಪತಿಗಳಿಗೆ ಮೂರು ಮಕ್ಕಳನ್ನು ಹೊಂದಬೇಕೆಂಬುದನ್ನು ತಿಳಿಸಬೇಕು ಎಂದು ಹೇಳಿದ ಅವರು, ವಿವಾಹವನ್ನು ಕೇವಲ ವೈಯಕ್ತಿಕ ಇಚ್ಛೆ ಪೂರೈಸುವ ಸಾಧನವಾಗಿ ಅಲ್ಲ, ಸೃಷ್ಟಿಯ ನಿರಂತರತೆಯನ್ನು ಕಾಯ್ದುಕೊಳ್ಳುವ ಒಂದು ಸಂಸ್ಥೆಯಾಗಿ ಪರಿಗಣಿಸಬೇಕು ಎಂದರು.

ನುಸುಳುಕೋರರ ಹೊರ ಹಾಕಬೇಕು: ಅಕ್ರಮ ನುಸುಳುಕೋರರ ವಿಷಯವನ್ನು ಪ್ರಸ್ತಾಪಿಸಿದ ಮೋಹನ್ ಭಾಗವತ್, ಅಕ್ರಮ ಪ್ರವೇಶಗಳನ್ನು ಗುರುತಿಸಿ ದೇಶದಿಂದ ಹೊರಹಾಕಬೇಕು ಎಂದು ಹೇಳಿದರು. ಅಕ್ರಮ ನುಸುಳುಕೋರರಿಗೆ ನಮ್ಮ ದೇಶದಲ್ಲಿ ಉದ್ಯೋಗ ನೀಡಬಾರದು ಎಂದರು.

ಸಾಮಾಜಿಕ ಸಾಮರಸ್ಯ ಬಲಪಡಿಸುವ ಅಗತ್ಯವನ್ನು ಒತ್ತಿ ಹೇಳಿದ ಅವರು, ಸಾಮರಸ್ಯ ಇಲ್ಲದಾಗ ಭೇದಭಾವ ಉಂಟಾಗುತ್ತದೆ. ನಾವು ಎಲ್ಲರೂ ಒಂದೇ ದೇಶದ, ಒಂದೇ ತಾಯ್ನಾಡಿನ ಮಕ್ಕಳು ಎಂದು ಹೇಳುತ್ತಾ, ಸನಾತನ ತತ್ವವು ಏಕತೆ ಮತ್ತು ಸಾಮರಸ್ಯವನ್ನು ಉತ್ತೇಜಿಸುತ್ತದೆ ಎಂದು ಹೇಳಿದರು.

ಅಮೆರಿಕಾ ಮತ್ತು ಚೀನಾ ಸೇರಿದಂತೆ ಕೆಲವು ದೇಶಗಳಲ್ಲಿ ಇರುವ ಗುಂಪುಗಳು ಭಾರತದ ಸಾಮಾಜಿಕ ಸಾಮರಸ್ಯವನ್ನು ಅಸ್ಥಿರಗೊಳಿಸಲು ಪ್ರಯತ್ನಿಸುತ್ತಿವೆ. ನಾಗರಿಕರು ಹೆಚ್ಚು ಜಾಗರೂಕರಾಗಿದ್ದು ಪರಸ್ಪರ ವಿಶ್ವಾಸವನ್ನು ಹೆಚ್ಚಿಸಬೇಕು ಎಂದು ಕರೆ ನೀಡಿದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.2.2026 ಗುರುವಾರ, ಮಳೆ ನಕ್ಷತ್ರ: ಶತಭಿಷ 19.02.2026 ರಿಂದ 03.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಪಾಲ್ಗುಣ ಮಾಸ, ಶುಕ್ಲ ಪಕ್ಷ,
ತಿಥಿ: ಬಿದಿಗೆ, ನಕ್ಷತ್ರ: ಪೂರ್ವಾಭಾದ್ರ, ರಾಹುಕಾಲ: ಮಧ್ಯಾಹ್ನ 1.30ರಿಂದ 3 ಗಂಟೆಯವರೆಗೆ

- **ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನ ಕೆರೆ :** ಗುರುವೈಭವೋತ್ಸವ–2026, ಧಾರ್ಮಿಕ ಕಾರ್ಯಕ್ರಮಗಳು, ಬೆಳಗ್ಗೆ 7 ರಿಂದ ಶ್ರೀ ರಾಘವೇಂದ್ರಸ್ವಾಮಿಗಳವರ 405ನೇ ಪಟ್ಟಾಭಿಷೇಕ, ಧನ್ವಂತರಿ ಹೋಮ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳವರ ಮಠ, ಸುಬ್ಬರಾಯನ ಕೆರೆ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಪಾರ್ಕಿಸನ್ ಕಾಯಿಲೆ, ಮೈಗ್ರೇನ್, ಕಣ್ಣು–ಮೂಗಿನ ಅಲರ್ಜಿ ಮತ್ತು ಕೊಲೆಸ್ಟ್ರಾಲ್‌ಗೆ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ರಿಂದ.
- **ನಾರಾಯಣ ಆಸ್ಪತ್ರೆ :** ಎಲೆಕ್ತಾ ಇನ್‌ಫಿನಿಟಿ ಟೆಕ್ನಾಲಜಿಯೊಂದಿಗೆ ರೇಡಿಯೇಷನ್ ಥೆರಪಿ ಉದ್ಘಾಟನಾ ಸಮಾರಂಭ, ಸಾನ್ನಿಧ್ಯ : ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ, ಪ್ರಾಸ್ತಾವಿಕ ನುಡಿ : ನಾರಾಯಣ ಹೆಲ್ತ್ ಛೇರ್ಮನ್ ಡಾ. ದೇವಿಪ್ರಸಾದ್ ಶೆಟ್ಟಿ, ಸ್ಥಳ: ನಾರಾಯಣ ಆಸ್ಪತ್ರೆ, ದೇವನೂರು, ಬೆಳಗ್ಗೆ 9.30ಕ್ಕೆ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಸೋರಿಯಾಸಿಸ್(ಕಿಟಿಬಾ ಕುಷ್ಠ), ಶ್ರವಣ ಮತ್ತು ಕಿವಿಯ ಆರೈಕೆ ಕುರಿತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಯಿಂದ
- **ಪ್ರಜಾಪಿತ ಬ್ರಹ್ಮಾಕುಮಾರಿ ಈಶ್ವರೀಯ ವಿಶ್ವವಿದ್ಯಾಲಯ:** ಸಂಸ್ಥೆಯ 90ನೇ ವಾರ್ಷಿಕೋತ್ಸವ, ಮಹಾಶಿವರಾತ್ರಿ ಪ್ರಯುಕ್ತ ಗುಜರಾತಿನ ಸುಪ್ರಸಿದ್ಧ ಶ್ರೀ ಸೋಮನಾಥ ದಿವ್ಯ ದರ್ಶನ, ಸಂಜೆ 6.15 ರಿಂದ ಸಂಚಾಲಕರಾದ ಬಿ.ಕೆ. ರಾಧ ಅವರಿಂದ ರಾಜಯೋಗದ ಮಹತ್ವಿಕೆ ಕುರಿತು ಪ್ರವಚನ, ಸಂಜೆ 7 ರಿಂದ ಹಿರಿಯ ಸಾಹಿತಿ ಡಾ. ಎಸ್.ಪಿ. ಉಮಾದೇವಿ ಅವರಿಂದ ನಾರಿ ಮತ್ತು ನಾರೀತ್ವ ಕುರಿತು ಉಪನ್ಯಾಸ, ರಾತ್ರಿ 8 ರಿಂದ ಬಿ.ಕೆ. ಕಲಾಮಂಡಲಂ, ಕೊಚಿನ್, ಕೇರಳ ಅವರಿಂದ ಮೋಹಿನಿ ಅಟ್ಟಂ, ಸ್ಥಳ: ಹುಣಸೂರು ರಸ್ತೆ, ಐಶ್ವರ್ಯ ಪೆಟ್ರೋಲ್ ಬಂಕ್ ಎದುರು, ಬೆಳಗ್ಗೆ 10ರಿಂದ.
- **ವಿಶ್ವೇಶ್ವರಯ್ಯ ತಾಂತ್ರಿಕ ವಿವಿ, ಪ್ರಾದೇಶಿಕ ಕೇಂದ್ರ :** ಯುಕ್ತಿ–2026 ಪ್ರಾದೇಶಿಕ ಮಟ್ಟದ ತಾಂತ್ರಿಕ ಮತ್ತು ಸಾಂಸ್ಕೃತಿಕ ಹಬ್ಬ, ಉದ್ಘಾಟನೆ : ವಿಟಿಯು ಕುಲಪತಿ ಡಾ. ಎಸ್.ವಿದ್ಯಾಶಂಕರ್, ಅತಿಥಿಗಳು : ನಟ ಶರಣ್, ನಟಿಯರಾದ ಸೋನಲ್ ಮೊಂಥೆರೋ, ಧನ್ಯಾ ರಾಮ್‌ಕುಮಾರ್, ಗಾಯಕ ವಾಸುಕಿ ವೈಭವ್, ವಯೋಲಿನ್ ವಾದಕ ಅನೀಶ್ ವಿದ್ಯಾಶಂಕರ್, ಸ್ಥಳ: ವಿಟಿಯು ಕಾಲೇಜು ಆವರಣ, ಸಾತಗಳ್ಳಿ, ಬೆಳಗ್ಗೆ 10ಕ್ಕೆ.
- **ಪ್ರೀತಿ ಕ್ಯಾನ್ಸರ್ ಸೆಂಟರ್:** ಉಚಿತ ಕ್ಯಾನ್ಸರ್ ತಪಾಸಣಾ ಶಿಬಿರ, ಸ್ಥಳ: ಪ್ರೀತಿ ಕ್ಯಾನ್ಸರ್ ಸೆಂಟರ್, ಲಕ್ಷ್ಮೀಪುರಂ, ಬೆಳಗ್ಗೆ 10 ರಿಂದ.
- **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ :** ಛತ್ರಪತಿ ಶಿವಾಜಿ ಜಯಂತಿ, ಬೆಳಗ್ಗೆ 9 ಗಂಟೆಗೆ ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಮುಂಭಾಗದಿಂದ ಕಲಾಮಂದಿರದವರೆಗೂ ಮೆರವಣಿಗೆ, ಸಭಾ ಕಾರ್ಯಕ್ರಮ, ಉದ್ಘಾಟನೆ : ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ.ಮಹದೇವಪ್ಪ, ವಿಶೇಷ ಅತಿಥಿಗಳು : ಸಂಸದರಾದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಸುನೀಲ್ ಬೋಸ್, ಅಧ್ಯಕ್ಷತೆ: ಶಾಸಕರಾದ ಕೆ.ಹರೀಶ್‌ಗೌಡ, ಮುಖ್ಯ ಅತಿಥಿಗಳು : ಟಿ.ಎಸ್. ಶ್ರೀವತ್ಸ, ತನ್ವೀರ್ ಸೇಠ್, ಜಿ.ಟಿ.ದೇವೇಗೌಡ, ಮುಖ್ಯ ಭಾಷಣಕಾರರು : ಹಿರಿಯ ಸಂಶೋಧಕ ಡಾ. ಆರ್.ಚಲಪತಿ, ಉಪಸ್ಥಿತರು : ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಶಾಸಕರಾದ ಅನಿಲ್‌ಕುಮಾರ್, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷ ಹೆಚ್.ಡಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷ ಡಾ. ಪುಷ್ಪಾ ಅಮರನಾಥ್, ಸ್ಥಳ : ಕರ್ನಾಟಕ ಕಲಾಮಂದಿರ, ಹುಣಸೂರು ರಸ್ತೆ.
- **ಮೈಸೂರು ರಿದಮ್ಸ್ ಕರೋಕೆ ಕ್ಲಬ್ :** ಸಂಗೀತದ ಅಲೆಗಳ ಮೇಲೆ ಪ್ರೀತಿಯ ಪಯಣ, ಬಹುಭಾಷಾ ಚಲನಚಿತ್ರ ಗೀತೆಗಳ ರಸಸಂಜೆ ಕಾರ್ಯಕ್ರಮ, ಉಪಸ್ಥಿತರು : ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕನ್ನಡ ಸುಗಮ ಸಂಗೀತ ಪರಿಷತ್ ಜಿಲ್ಲಾಧ್ಯಕ್ಷ ನಾಗರಾಜ್ ವಿ. ಭೈರಿ, ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಮಾಜಿ ಜಿಲ್ಲಾಧ್ಯಕ್ಷ ಡಾ. ವೈ.ಡಿ. ರಾಜಣ್ಣ, ಬಿಜೆಪಿ ನಗರ ಉಪಾಧ್ಯಕ್ಷ ಎಂ.ಎ. ಬಾಲಕೃಷ್ಣ, ಸಾಹಿತಿ ಡಾ. ಗುಬ್ಬಿಗೂಡು ರಮೇಶ್, ಸ್ಥಳ:ನಾದಬ್ರಹ್ಮ ಸಂಗೀತ ಸಭಾಂಗಣ, ಜೆಎಲ್‌ಬಿ ರಸ್ತೆ, ಸಂಜೆ 4.30ಕ್ಕೆ.

ತಿರುಮಕೂಡಲಿನಲ್ಲಿಂದು

- **ಶ್ರೀ ವ್ಯಾಸರಾಜ ಮಠ (ಸೋಸಲೆ) :** ಪುನಃಪ್ರತಿಷ್ಠಾಪನೆ ಹಾಗೂ ನೂತನ ಭವನ ಉದ್ಘಾಟನೆ, ದಿವ್ಯ ಸನ್ನಿಧಾನ : ಶ್ರೀ 1008 ಶ್ರೀ ವಿದ್ಯಾಶ್ರೀಶತೀರ್ಥ ಶ್ರೀಪಾದಂಗಳವರು, ಶ್ರೀ 1008 ಶ್ರೀ ಸುಜನಿಧಿತೀರ್ಥ ಶ್ರೀಪಾದಂಗಳವರು, ಬೆಳಗ್ಗೆ 5.30 ರಿಂದ ವಿವಿಧ ಪೂಜಾ ಕೈಂಕರ್ಯ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ದೈಹಿಕ ದೀಕ್ಷೆ ಅರಿವಿನಿಂದ ಆರೋಗ್ಯದತ್ತ ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಡಾ.ಕುಲದೀಪ್.ಎನ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ರೋಹಿಣಿ ಸುಧಾಂ. ವ್ಯಾಖ್ಯಾನ–ಮೈಸೂರು ಕೃಷ್ಣಮೂರ್ತಿ, 6.50 ರೈತರಿಗೆ ಸಲಹೆ, 7.15 ಹಸಿರು ಹೊನ್ನು, 8.30 ಕನ್ನಡ ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ –ಗುರು ಕಾರೈಕುಡಿ ಆರ್. ಮಣಿ ಅವರ ನಿರ್ದೇಶನದಲ್ಲಿ ವಾದ್ಯವೃಂದ, 11.00 ಸುತ್ತ ಮುತ್ತ–ಪ್ರಸ್ತುತಿ–ಚಂದನಾ.ಸಿ, ನಿತಿನ್ ರಾಜಾರಾಂ ಶಾಸ್ತ್ರೀ

ಮಧ್ಯಾಹ್ನ: 12.05 ವನಿತಾ ವಿಹಾರ, 12.35 ದೇವರನಾಮ– ಸುನೀತಾ ಎಸ್., 12.45 ಚಿತ್ರಗೀತೆಗಳು, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಿತ್ರಗೀತೆಗಳು, 4.00 ಜನಪದ ಸಂಗೀತ, 4.30 ವಿಜ್ಞಾನ ಭಾರತಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ, ಪ್ರಾಯೋಜಕರು–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಹಣ್ಣು–ಹೊನ್ನು ತೋಟಗಾರಿಕಾ ಬೆಳೆಗಳ ಸುಸ್ಥಿರ ಬೇಸಾಯ ಕುರಿತ ಬಾನುಲಿ ಸರಣಿ. ಶುಂಠಿಯ ಸಮಗ್ರ ಕೃಷಿ ವಿಧಾನಗಳು ಈ ಕುರಿತು ಬೆಂಗಳೂರಿನ ತೋಟಗಾರಿಕಾ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ.ಎಸ್.ಹರೀಶ್ ಅವರೊಂದಿಗೆ ಸಂದರ್ಶನ, ಸಂದರ್ಶನ–ಎನ್. ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ : ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಸಮಾಜಶಾಸ್ತ್ರ, ಭಾಗವಹಿಸುತ್ತಾರೆ–ಮೈಸೂರು ಜಿಲ್ಲೆಯ ಬನ್ನೂರು ಹೋಬಳಿಯ ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರಾದ ಡಾ. ಮಹದೇವಸ್ವಾಮಿ .ಕೆ, ಪ್ರಸ್ತುತಿ–ದಿಗ್ವಿಜಯ್ .ಬಿ, 9.30 ಕನ್ನಡ ಭಾರತಿ, 10.00 ಆಕಾಶವಾಣಿ ಸಂಗೀತ ಸಮ್ಮೇಳನ: ಲಕ್ಷ್ಮೀ ನಟರಾಜ್–ಲಘು ಸಂಗೀತ, ಶ್ರೀಮತಿ ಜಾಬ ಚಕ್ರವರ್ತಿ ದಾಸ್–ಜನಪದ ಸಂಗೀತ

ಮೈಸೂರು ಮಿತ್ರ

ಸ್ಥಳೀಯ ಆಡಳಿತದ ಇಚ್ಛಾಶಕ್ತಿ ಕೊರತೆಯಿಂದ ಸಾರ್ವಜನಿಕ ಹಿತಾಸಕ್ತಿ ಅಭಿವೃದ್ಧಿ ಕಾರ್ಯ ನೆನೆಗುದಿಗೆ

ಇರ್ವಿನ್ ರಸ್ತೆ ಅಭಿವೃದ್ಧಿ ಪೂರ್ಣಗೊಳ್ಳಲಿಲ್ಲ! ರಾಜ್‌ಕುಮಾರ್ ರಸ್ತೆ ಭಾಗಶಃ ಅಪಾಯಕಾರಿ!!

- ಕೆಲ ವೃತ್ತಗಳಲ್ಲಿ ವರ್ಷಗಳಿಂದ ಪೊಲೀಸರ ಕಾವಲು!
- ರಾಜರ ಯೋಜನಾಬದ್ಧ ನಗರಿಯಲ್ಲಿ ಅವ್ಯವಸ್ಥೆ ತಾಂಡವ



ಮೈಸೂರು, ಫೆ.17(ಎಂಕೆ)– ಮೈಸೂರು ಮಹಾ ನಗರಪಾಲಿಕೆ ಮತ್ತು ಜಿಲ್ಲಾಡಳಿತ ದಲ್ಲಿನ ಇಚ್ಛಾಶಕ್ತಿಯ ಕೊರತೆ ಹಾಗೂ ಅಪ್ರಬುದ್ಧ ಆಡಳಿತ ವೈಖರಿಯಿಂದಾಗಿ ನಗರದ ಹೃದಯ ಭಾಗದಲ್ಲಿರುವ ಐತಿಹಾಸಿಕ ಇರ್ವಿನ್ ರಸ್ತೆಯ ಅಗಲೀಕರಣ, ಡಾ.ರಾಜ್‌ಕುಮಾರ್ ರಸ್ತೆ ಅಭಿವೃದ್ಧಿ ಸೇರಿದಂತೆ ಹಲವು ಸಾರ್ವಜನಿಕ ಹಿತಾಸಕ್ತಿಯುಳ್ಳ ಕಾರ್ಯಗಳು ನೆನೆಗುದಿಗೆ ಬಿದ್ದಿವೆ.

ಸಾಂಸ್ಕೃತಿಕ ನಗರಿಯೂ ಆದ ಮೈಸೂರಿನ ಅಭಿವೃದ್ಧಿ ಕುಂಠಿತಗೊಳ್ಳಲು, ಪ್ರವಾಸೋದ್ಯಮ ಸೇರಿದಂತೆ ಇನ್ನಿತರೆ ಕ್ಷೇತ್ರಗಳಿಗೆ ಹೊಡೆತ ಬೀಳಲು ಆಡಳಿತದ ಚುಕ್ಕಾಣಿ ಹಿಡಿದಿರುವ ಜನಪ್ರತಿನಿಧಿಗಳು, ಅಧಿಕಾರಿಗಳೇ ನೇರ ಕಾರಣರಾಗುತ್ತಿರುವುದು ಅತ್ಯಂತ ಬೇಸರದ ಸಂಗತಿಯಾಗಿದೆ.

ಮೈಸೂರಿನ ಅಭಿವೃದ್ಧಿಗೆ ಪೂರಕವಾದ ಹೊಸ ಯೋಜನೆಗಳನ್ನು ರೂಪಿಸುವಲ್ಲಿ ಚಾಕಚಕ್ಯತೆ ತೋರುವುದಿರಲಿ, ರಾಜಮಹಾರಾಜರು ನಿರ್ಮಾಣ ಮಾಡಿರುವ ಪ್ರತಿಷ್ಠಿತ ರಸ್ತೆಗಳನ್ನು ಅಭಿವೃದ್ಧಿಪಡಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವಲ್ಲೂ ಆಸಕ್ತಿ ತೋರುತ್ತಿಲ್ಲ.

ಇರ್ವಿನ್ ರಸ್ತೆ ಅಭಿವೃದ್ಧಿ ಕುಂಠಿತ: ಐತಿಹಾಸಿಕ ಇರ್ವಿನ್ ರಸ್ತೆ ಅಗಲೀಕರಣ ಹಾಗೂ ಅಭಿವೃದ್ಧಿ ಕಾಮಗಾರಿ ಮುಕ್ತಾಯಗೊಂಡು ಹಲವು ವರ್ಷಗಳೇ ಕಳೆದಿವೆ. ಆದರೆ ರಸ್ತೆ ಮಧ್ಯೆ ಇರುವ ಒಂದು ಪುಟ್ಟ ಕಟ್ಟಡ ತೆರವು ಮಾಡಿಸುವಲ್ಲಿ ನಗರಪಾಲಿಕೆ ವಿಫಲವಾಗಿದೆ. ಸರ್ಕಾರಿ ಆಯುರ್ವೇದ ಕಾಲೇಜು ಸರ್ಕಲ್‌ನಿಂದ ನೆಹರು ವೃತ್ತ (ಸೆಂಟ್ರಲ್ ಪೋಸ್ಟ್ ಆಫೀಸ್) ದವರೆಗಿನ 850 ಮೀಟರ್ ಇರ್ವಿನ್ ರಸ್ತೆ ಮಧ್ಯದಲ್ಲಿರುವ ಈ ಕಟ್ಟಡ, ಸುಗಮ ಸಂಚಾರಕ್ಕೆ ಅಡ್ಡಿಯಾಗಿದ್ದರೂ ಅದಕ್ಕೆ ಕಾನೂನು ಪರಿಹಾರ ಕಂಡುಕೊಳ್ಳಲಾಗದೆ ಕೈಕಟ್ಟಿ ಕುಳಿತಿದ್ದಾರೆ.

ಕಟ್ಟಡದ ಮಾಲೀಕರು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರೂ ಪಾಲಿಕೆಯ ಕಾನೂನು ವಿಭಾಗದಲ್ಲಿರುವ ಕಾನೂನು ತಜ್ಞರ ವೈಫಲ್ಯವೋ, ಈ ನಿಟ್ಟಿನಲ್ಲಿ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆಯೋ, ಇಲ್ಲ ಮತ್ತಾವ ಕಾರಣವೋ, ಒಟ್ಟಿನಲ್ಲಿ ಸಮರ್ಪಕ ಹೋರಾಟವಂತೂ ನಡೆದುತ್ತಿಲ್ಲ. ಸಾರ್ವಜನಿಕರಿಗೆ ಅನಾನುಕೂಲವಾಗುವ ಯಾವುದೇ ಸಂಗತಿಯನ್ನು ನ್ಯಾಯಾಲಯಗಳು ಗಂಭೀರವಾಗಿ ಪರಿಗಣಿಸಿ, ತ್ವರಿತ ಇತ್ಯರ್ಥಕ್ಕೆ ಸಹಕರಿಸುತ್ತವೆ. ಆದರೆ, ಅಧಿಕಾರಿಗಳು ವಾಸ್ತವಸ್ಥಿತಿಯನ್ನು ನ್ಯಾಯಾಲಯದ ಗಮನಕ್ಕೇ ತರುತ್ತಿಲ್ಲ ಎಂದು ಸಾರ್ವಜನಿಕರು ದೂರಿದ್ದಾರೆ.

ಇರ್ವಿನ್ ರಸ್ತೆಯ ಇಕ್ಕೆಲಗಳ ಸುಮಾರು 80ಕ್ಕೂ ಹೆಚ್ಚು ಆಸ್ತಿ ಮಾಲೀಕರಿಗೆ ಒಂದು ಅಡಿಗೆ ಬರೋಬ್ಬರಿ 13,072 ರೂ.ನಂತೆ ಪರಿಹಾರ ನೀಡಲಾಗಿದೆ. ಇದಕ್ಕಾಗಿ ಸುಮಾರು 47 ಕೋಟಿ ರೂ.ಗೂ ಹೆಚ್ಚು ಹಣವನ್ನು ಖರ್ಚು ಮಾಡಲಾಗಿದೆ. ಸಮುದಾಯವೊಂದರ ಪ್ರಾರ್ಥನಾ ಕೇಂದ್ರದ ಕಾಂಪೌಂಡ್ ಅನ್ನೂ ಆ ಸಮುದಾಯದ ಮುಖಂಡರು ಸ್ವಯಂ ಮುಂದೆ ಬಂದು ರಸ್ತೆ ಅಗಲೀಕರಣಕ್ಕಾಗಿ ತೆರವು ಮಾಡಿಕೊಟ್ಟರು. ಇಷ್ಟಾದರೂ ಇಡೀ ರಸ್ತೆಯಲ್ಲಿ ಸುಗಮ ಸಂಚಾರಕ್ಕೆ ಅಡ್ಡಿಯಾಗಿರುವ ಪುಟ್ಟ ಹಳೇ ಕಟ್ಟಡವೊಂದನ್ನು ತೆರವು ಮಾಡಿಸಲು ಸಾಧ್ಯವಾಗದಿರುವುದು ಆಡಳಿತ ವೈಫಲ್ಯಕ್ಕೆ ಹಿಡಿದ ಕೈಗನ್ನಡಿ ಎಂದು ಅಸಮಾಧಾನ ಹೊರಹಾಕಿದ್ದಾರೆ.

ಡಾ.ರಾಜ್‌ಕುಮಾರ್ ಹೆಸರಿಗೂ ಕಳಂಕ: ಯರಗನಹಳ್ಳಿ ವೃತ್ತದಿಂದ ಮಹದೇವಪುರ ಮುಖ್ಯ ರಸ್ತೆಗೆ ಸಂಪರ್ಕ ಕಲ್ಪಿಸುವ, ಮೇರು ನಟ ಡಾ.ರಾಜ್‌ಕುಮಾರ್ ಹೆಸರಿಟ್ಟಿರುವ ರಸ್ತೆಯ ದುಃಸ್ಥಿತಿಯಂತೂ ಹೇಳತೀರದ್ದಾಗಿದೆ. ಸುಮಾರು 3 ಕಿ.ಮೀ ಉದ್ದದ ಈ ರಸ್ತೆಯ 200 ಮೀಟರ್ ನಷ್ಟು ಮಾತ್ರ ದುರ್ಗಮವಾಗಿದೆ. ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿ ಸಂಬಂಧ ಉಂಟಾಗಿರುವ ಭೂ ವಿವಾದವನ್ನು ಬಗೆಹರಿಸಿ, ಡಾಂಬರೀಕರಣ ಮಾಡಿಸುವಲ್ಲೂ ಅಧಿಕಾರಿಗಳು ನಿರ್ಲಕ್ಷ್ಯ ಮೆರೆದಿದ್ದಾರೆ.

ಮಹನೀಯರಿಗೆ ಅಪಮಾನ

ಅದೇ ರೀತಿ ಗನ್ ಹೌಸ್ ವೃತ್ತ, ಮಾತೃಮಂಡಳಿ ಸರ್ಕಲ್ ಸೇರಿದಂತೆ ಹಲವು ವೃತ್ತಗಳಲ್ಲಿ ಮಹನೀಯರ ಪ್ರತಿಮೆಗಳನ್ನು ಸ್ಥಾಪಿಸುವ ವಿಚಾರಗಳೇ ವಿವಾದಗಳಾಗಿ ಪರಿಣಮಿಸಿವೆ. ಪರಿಣಾಮ ಹಲವು ಸ್ಥಳಗಳಲ್ಲಿ ವರ್ಷಗಳಿಂದ ಹಗಲು–ರಾತ್ರಿ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಅಧಿಕಾರಿಗಳು, ಜನಪ್ರತಿನಿಧಿಗಳು ಮನಸ್ಸು ಮಾಡಿದರೆ ಈ ವಿವಾದಗಳನ್ನು ಕ್ಷಣಮಾತ್ರದಲ್ಲಿ ಬಗೆಹರಿಸಿ, ಮಹನೀಯರ ಪ್ರತಿಮೆಗಳನ್ನು ಪ್ರತಿಷ್ಠಾಪಿಸುವುದು ಕಷ್ಟವೇನಲ್ಲ. ಆದರೆ ಎಲ್ಲವೂ ಸುಖಾಂತ್ಯವಾಗುವುದು ಯಾರಿಗೂ ಇಷ್ಟವಿಲ್ಲ. ಗಲಾಟೆ, ಗದ್ದಲ, ವಿವಾದಗಳು ಜೀವಂತವಾಗಿರುವುದನ್ನೇ ಬಯಸಿರುವಂತೆ ಕಾಣುತ್ತಿದೆ ಎಂದು ಸಾರ್ವಜನಿಕರು ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ಈ ಅಪಾಯಕಾರಿ ಮಾರ್ಗದಲ್ಲಿ ಹಿರಿಯರು, ಮಹಿಳೆಯರು, ಮಕ್ಕಳು ಆತಂಕದಿಂದಲೇ ಓಡಾಡುವಂತಾಗಿದೆ. ಅನೇಕರು ಆಯತಪ್ಪಿ ರಸ್ತೆ ಹೊಂಡದಲ್ಲಿ ಬಿದ್ದು ಗಾಯಗೊಂಡಿದ್ದಾರೆ. ನಾಗರಿಕರ ಸುರಕ್ಷತೆ ಬಗ್ಗೆ ಕಿಂಚಿತ್ತೂ ಕಾಳಜಿ ಇಲ್ಲದ ಅಧಿಕಾರಿಗಳು ಮಾತ್ರ ಎಸಿ ರೂಂಗಳಲ್ಲಿ ಕಡತ ವಿಲೇವಾರಿಯಲ್ಲಷ್ಟೇ ಬಿಸಿಯಾಗಿದ್ದಾರೆ ಎಂದು ಸ್ಥಳೀಯರು ಹಿಡಿಶಾಪ ಹಾಕುತ್ತಿದ್ದಾರೆ.

ಮಳೆ ನೀರು ಚರಂಡಿಯಲ್ಲಿ ಮಲ–ಮೂತ್ರ: ಇನ್ನು ಮೈಸೂರಿನ ಮಂಚೇಗೌಡನಕೊಪ್ಪಲು ಸೇರಿದಂತೆ ಬಹುತೇಕ ಕಡೆ ಒಳಚರಂಡಿ ಅವ್ಯವಸ್ಥೆ ಹಾಗೂ ಅಧಿಕಾರಿಗಳ ಬೇಜವಾಬ್ದಾರಿತನದಿಂದಾಗಿ ಮ್ಯಾನ್‌ಹೋಲ್‌ಗಳು ತುಂಬಿ ಹರಿದಾಗ, ಅದನ್ನು ಮಳೆ ನೀರು ಚರಂಡಿಗೆ ಹರಿಯಬಿಡಲಾಗಿದೆ. ಇದರಿಂದ ಅಜು–ಬಾಜಲ್ಲಿ ವಾಸಿಸುತ್ತಿರುವ ಜನ ದಿನನಿತ್ಯ ದುರ್ವಾಸನೆ ಜೊತೆಗೆ ಮಕ್ಕಳು ರೋಗರುಜಿನಗಳಿಂದ ನರಳುತ್ತಿದ್ದಾರೆ. ಯಾವ ಅಧಿಕಾರಿ, ಜನಪ್ರತಿನಿಧಿಯೂ ಇದನ್ನು ನಿವಾರಿಸುವ ಕಾಳಜಿ ಇಲ್ಲ. ಮೈಸೂರು ಬಗ್ಗೆ ಮೈಸೂರು ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಗಮನಹರಿಸಿದ್ದರೆ ಇಂತಹ ಸಮಸ್ಯೆ ಪರಿಹರಿಸಬಹುದಿತ್ತೇನೋ.

ಚಾಕಚಕ್ಯತೆಯೂ ಇಲ್ಲ... ಕ್ಷಮತೆಯೂ ಇಲ್ಲ..!

ಮೈಸೂರು ನಗರಪಾಲಿಕೆ ಮತ್ತು ಜಿಲ್ಲಾಡಳಿತದ ಅಧಿಕಾರಿಗಳು ಹಾಗ ಜನಪ್ರತಿನಿಧಿಗಳಲ್ಲಿ ಸೂಕ್ಷ್ಮ ವಿಚಾರ–ವಿವಾದಗಳನ್ನು ಬಗೆಹರಿಸುವ ಪ್ರಬುದ್ಧತೆ, ಚಾಕಚಕ್ಯತೆಯೇ ಇಲ್ಲ. ಅವರಲ್ಲಿ ಕ್ಷಮತೆಯೂ ಇಲ್ಲ. ಅಭಿವೃದ್ಧಿ ಹೆಸರಿನಲ್ಲಿ ಸಾರ್ವಜನಿಕರ ತೆರಿಗೆ ಹಣವನ್ನು ಎಗ್ಗಿಲ್ಲದೆ ಖರ್ಚು ಮಾಡುತ್ತಿದ್ದಾರೆಯೇ ಹೊರತು ಸಾರ್ವಜನಿಕ ಹಿತಾಸಕ್ತಿಯನ್ನು ಕಾಪಾಡುವಲ್ಲಿ ಸಂಪೂರ್ಣ ವಿಫಲರಾಗಿದ್ದಾರೆ. ನ್ಯಾಯಾಲಯದಲ್ಲಿರುವ ವ್ಯಾಜ್ಯಗಳ ಇತ್ಯರ್ಥಕ್ಕೆ ಸಮರ್ಥ ಕಾನೂನು ತಜ್ಞರ ತಂಡವನ್ನು ನಿಯೋಜಿಸಿಲ್ಲ ಅಥವಾ ಸಮರ್ಥರಿದ್ದರೂ ಅವರ ಕಾನೂನು ಹೋರಾಟಕ್ಕೆ ಪೂರಕವಾದ ಅಂಶಗಳನ್ನು ಒದಗಿಸುವಲ್ಲಿ ವಿಫಲರಾಗಿದ್ದಾರೆ. ಇಂತಹ ವೃತ್ತಿ ಬಲಹೀನ ಅಧಿಕಾರಿ ವರ್ಗದಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ! – **ಮೈಸೂರಿನ ಪ್ರಜ್ಞಾವಂತ ನಾಗರಿಕರು**

ಅರಮನೆ ಮುಂದಿನ ದುರಂತದ ಹಿನ್ನೆಲೆ

ಮೈಸೂರು ನಗರ ವ್ಯಾಪ್ತಿ ಹೀಲಿಯಂ ಬಳಕೆ ಸಂಪೂರ್ಣ ನಿಷಿದ್ಧ

ಮೈಸೂರು, ಫೆ.18– ಅರಮನೆ ಮುಂಭಾಗ ಹೀಲಿಯಂ ಸಿಲಿಂಡರ್ ಸ್ಫೋಟಗೊಂಡು ಮೂವರು ಸಾವನ್ನಪ್ಪಿದ್ದ ಪ್ರಕರಣದ ಹಿನ್ನೆಲೆಯಲ್ಲಿ ಮೈಸೂರು ನಗರ ವ್ಯಾಪ್ತಿಯಲ್ಲಿ ಹೀಲಿಯಂ ಬಳಕೆಯನ್ನು ಸಂಪೂರ್ಣವಾಗಿ ನಿಷೇಧಿಸಿ, ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಬುಧವಾರ ಆದೇಶ ಹೊರಡಿಸಿದ್ದಾರೆ.

ಭಾರತೀಯ ನಾಗರಿಕ ಸುರಕ್ಷಾ ಸಂಹಿತೆ–2023ರ ಸೆಕ್ಷನ್ 152ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸಾರ್ವಜನಿಕ ಶಾಂತಿ, ಸುರಕ್ಷತೆ ಮತ್ತು ಜೀವ ರಕ್ಷಣೆಯ ಹಿತದೃಷ್ಟಿಯಿಂದ ಮೈಸೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿರುವ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ ಹೀಲಿಯಂ ಅನಿಲವನ್ನು ಬಳಸಿ ಬಲೂನ್ ಅಥವಾ ಇತರ ಯಾವುದೇ ವಸ್ತುಗಳನ್ನು ತುಂಬುವುದು, ಬಳಸುವುದು ಹಾಗೂ ಮಾರಾಟ ಮಾಡುವುದನ್ನು ಮುಂದಿನ ಆದೇಶದವರೆಗೆ ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಈ ಆದೇಶವನ್ನು ಉಲ್ಲಂಘಿಸುವವರ ವಿರುದ್ಧ ಕಾನೂನಿನನ್ವಯ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಆದೇಶದಲ್ಲಿ ಎಚ್ಚರಿಸಿರುವ ಪೊಲೀಸ್ ಆಯುಕ್ತರು, ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲು ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶಿಸಲಾಗಿದೆ ಎಂದು ತಿಳಿಸಿದ್ದಾರೆ.



ಇತ್ತೀಚೆಗೆ ಅರಮನೆ ಸಮೀಪ ಹೀಲಿಯಂ ಅನಿಲವನ್ನು ಬಳಸಿ ಬಲೂನ್‌ಗಳನ್ನು ತುಂಬುವ ಸಂದರ್ಭದಲ್ಲಿ ಸ್ಫೋಟ ಸಂಭವಿಸಿ, ಅಪಾಯ ಉಂಟಾಗಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಹೀಲಿಯಂ ಅನಿಲವು ಅತ್ಯಧಿಕ ಒತ್ತಡದಲ್ಲಿರುವ ಸಿಲಿಂಡರ್‌ಗಳಲ್ಲಿ ಸಂಗ್ರಹಿಸಲಾಗುತ್ತಿದ್ದು, ಅವುಗಳನ್ನು ಅಜಾಗರೂಕತೆ ಅಥವಾ ಅಪ್ರಮಾಣಿತ ವಿಧಾನದಲ್ಲಿ ಬಳಸುವುದರಿಂದ ಸಿಲಿಂಡರ್ ಸ್ಫೋಟ, ಉಸಿರುಗಟ್ಟುವಿಕೆ, ಅಗ್ನಿ ಅಪಾಯ, ಸಾರ್ವಜನಿಕರಲ್ಲಿ ಭಯ ಮತ್ತು ಅಶಾಂತಿ ಉಂಟಾಗುವ ಸಾಧ್ಯತೆ ಹೆಚ್ಚಾಗಿದೆ.

ಹಬ್ಬಗಳು, ಜಾತ್ರೆಗಳು, ಪ್ರವಾಸಿ ಕೇಂದ್ರಗಳು, ಸಾರ್ವಜನಿಕ ಸಭೆ–ಸಮಾರಂಭಗಳು ಸೇರಿದಂತೆ ಜನಸಂದಣಿ ಹೆಚ್ಚಾಗಿರುವ ಸ್ಥಳಗಳಲ್ಲಿ ಹೀಲಿಯಂ ಅನಿಲ ಬಳಕೆಯು ಸಾರ್ವಜನಿಕ ಜೀವನಕ್ಕೆ ವಿಪರೀತ ಅಪಾಯಕಾರಿಯಾಗಿದ್ದು, ಬಳಕೆ ಮುಂದುವರಿದಲ್ಲಿ ಗಂಭೀರ ಹಾಗೂ ಅನಿರೀಕ್ಷಿತ ದುರಂತಗಳು ಸಂಭವಿಸುವ ಸಾಧ್ಯತೆ ಸ್ಪಷ್ಟವಾಗಿದೆ. ಆದ್ದರಿಂದ ಸಾರ್ವಜನಿಕ ಶಾಂತಿ, ಸುರಕ್ಷತೆ ಮತ್ತು ಜೀವ ರಕ್ಷಣೆಯ ಹಿತದೃಷ್ಟಿಯಿಂದ ಮೈಸೂರು ನಗರ ವ್ಯಾಪ್ತಿಯ ಎಲ್ಲಾ ಸಾರ್ವಜನಿಕ ಸ್ಥಳಗಳಲ್ಲಿ, ಸಭೆ–ಸಮಾರಂಭ ನಡೆಯುವ ಸ್ಥಳಗಳಲ್ಲಿ ಹೀಲಿಯಂ ಅನಿಲವನ್ನು ಬಲೂನ್ ತುಂಬುವುದನ್ನು ನಿಷೇಧಿಸಲಾಗಿದೆ.

ಬಲೂನ್ ಮಾರಾಟಗಾರರು, ಕಾರ್ಯಕ್ರಮ ಆಯೋಜಕರು, ವ್ಯಾಪಾರಿಗಳು ಸೇರಿದಂತೆ ಯಾರೂ ಪ್ರಮಾಣಿತ ಸುರಕ್ಷತಾ ವಿಧಾನಗಳನ್ನು ಅನುಸರಿಸದೆ ಹೀಲಿಯಂ ಸಿಲಿಂಡರ್ ಸಂಗ್ರಹಿಸುವುದು, ಬಳಸುವುದು, ಸಾಗಾಣೆ ಹಾಗೂ ಮಾರಾಟ ಮಾಡುವುದನ್ನು ಸಂಪೂರ್ಣವಾಗಿ ನಿಷೇಧಿಸುವುದು ಅನಿವಾರ್ಯವಾಗಿರುವುದನ್ನು ಪರಿಗಣಿಸಿ, ಈ ಆದೇಶ ಹೊರಡಿಸಲಾಗಿದೆ ಎಂದು ವಿವರಣೆ ನೀಡಿದ್ದಾರೆ.

ಅರಮನೆಯ ಜಯಮಾರ್ತಾಂಡ ದ್ವಾರದ ಬಳಿ ಕಳೆದ ಡಿಸೆಂಬರ್ 25 ರಾತ್ರಿ ವ್ಯಾಪಾರಿಯೊಬ್ಬರು ಬಲೂನ್‌ಗೆ ಹೀಲಿಯಂ ತುಂಬುವ ವೇಳೆ ಸ್ಫೋಟ ಸಂಭವಿಸಿತ್ತು. ಭೀಕರ ಘಟನೆಯಲ್ಲಿ ಲಖ್ನೋ ಮೂಲದ ವ್ಯಾಪಾರಿ ಸಲೀಂ ಸ್ಥಳದಲ್ಲೇ ಮೃತಪಟ್ಟರೆ, ಪ್ರವಾಸಕ್ಕೆ ಬಂದಿದ್ದ ನಂಜನಗೂಡು ಮೂಲದ ಮಂಜುಳಾ ಹಾಗೂ ಬೆಂಗಳೂರಿನ ಲಕ್ಷ್ಮೀ ಚಿಕಿತ್ಸೆ ಫಲಕಾರಿಯಾಗದೆ ಆಸ್ಪತ್ರೆಯಲ್ಲಿ ಸಾವನ್ನಪ್ಪಿದರು. ವ್ಯಾಪಾರಿ ಸಲೀಂ ದೇಹ ಛಿದ್ರವಾಗಿದ್ದು, ಸ್ಫೋಟದ ತೀವ್ರತೆಗೆ ಸಾಕ್ಷಿಯಾಗಿತ್ತು. ಕ್ರಿಸ್‌ಮಸ್ ಹಿನ್ನೆಲೆಯಲ್ಲಿ ಅಂದು ಪ್ರವಾಸಿಗರ ಸಂಖ್ಯೆ ಹೆಚ್ಚಿದ್ದರೂ, ಸದ್ಯ ಸ್ಫೋಟ ಸಂಭವಿಸಿದ ಸಮಯದಲ್ಲಿ ಹೆಚ್ಚು ಜನ ಇರಲಿಲ್ಲ. ಹತ್ತಿರದಲ್ಲಿದ್ದ ನಾಲ್ಕೈದು ಮಂದಿ ಸಣ್ಣಪುಟ್ಟ ಗಾಯಗಳೊಂದಿಗೆ ಪ್ರಾಣಾಪಾಯದಿಂದ ಪಾರಾದರು. ಆದರೆ, ಸ್ಫೋಟದ ಭಾರೀ ಸದ್ದು ಒಂದು ಕಿ.ಮೀ. ವ್ಯಾಪ್ತಿಗೆ ಕೇಳಿಸಿತ್ತು. ಆ ದುರ್ಘಟನೆಯಿಂದ ಪ್ರವಾಸಿಗರು ಹಾಗೂ ಸ್ಥಳೀಯರು ಆತಂಕಕ್ಕೀಡಾಗಿದ್ದರು.

ಇಂದಿನಿಂದ ರಂಜಾನ್ ಉಪವಾಸ

ಮೈಸೂರು ಜಿಲ್ಲಾ ಮೂನ್ ಕಮಿಟಿ ಘೋಷಣೆ



ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಬುಧವಾರ ಸಂಜೆ ಜಿಲ್ಲಾ ಮೂನ್ ಕಮಿಟಿ ಸಭೆ ನಡೆಯಿತು.

ಮೈಸೂರು, ಫೆ.18(ಪಿಎಂ)– ಮುಸಲ್ಮಾನ ಬಾಂಧವರ ಪವಿತ್ರ ಹಬ್ಬ ರಂಜಾನ್ ಮಾಸದ ಉಪವಾಸ ನಾಳೆಯಿಂದ ಫೆ.19 (ಗುರುವಾರ) ಆರಂಭವಾಗಲಿದೆ.

ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಕಚೇರಿಯಲ್ಲಿ ಬುಧವಾರ ಸಂಜೆ ಹಮ್ಮಿಕೊಂಡಿದ್ದ ಜಿಲ್ಲಾ ಮೂನ್ ಕಮಿಟಿ (ಚಂದ್ರನ ದರ್ಶನ ಸಮಿತಿ) ಸಭೆ ಬಳಿಕ ರಂಜಾನ್ ಮಾಸದ ಉಪವಾಸವು ನಾಳೆ (ಗುರುವಾರ)ಯಿಂದ ಆರಂಭವಾಗಲಿದೆ ಎಂದು ಘೋಷಣೆ ಮಾಡಲಾಯಿತು.

ಮೈಸೂರಿನ ಸರ್‌ಖಾಝಿ ಹಜರತ್ ಮೌಲಾನಾ ಮಹಮ್ಮದ್ ಉಸ್ಮಾನ್ ಷರೀಫ್ ಸಾಹೇಬ್ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಈ ವೇಳೆ ಮೈಸೂರು ಜಿಲ್ಲೆಯ ವಿವಿಧ ಭಾಗಗಳಿಂದ ಮಾಹಿತಿ ಸಂಗ್ರಹಿಸಲಾಯಿತು. ರಾಜ್ಯ ಮಾತ್ರವಲ್ಲದೆ ದೇಶದ ವಿವಿಧ ಭಾಗಗಳಲ್ಲಿ ಚಂದ್ರನು ಗೋಚರಿಸಿದ ಕಾರಣ ರಂಜಾನ್ ಪವಿತ್ರ ಮಾಸವೆಂದು ಘೋಷಿಸಿ, ಗುರುವಾರದಿಂದ ಉಪವಾಸ ಪ್ರಾರಂಭಿಸಲು ನಿರ್ಧರಿಸಲಾಯಿತು. ಹಜರತ್ ಮೌಲಾನಾ ಮಹಮ್ಮದ್ ಝುಕಾ ಉಲ್ಲಾ ಸಾಹೇಬ್ ಸಿದ್ದಿಕಿ, ಹಜರತ್ ಮೌಲಾನಾ ಮುಫ್ತಿ ಸೈಯದ್ ತಾಜುದ್ದೀನ್ ಸಾಹೇಬ್, ಮೌಲಾನಾ ಶಾವಲ್ಲಿ ಉಲ್ಲಾ ಸಾಹೇಬ್ ಉಮ್ರಿ, ಮೌಲಾನಾ ಇಬ್ರಾಹಿಂ ಉಪಸ್ಥಿತರಿದ್ದರು. ಮೈಸೂರು ಜಿಲ್ಲಾ ವಕ್ಫ್ ಸಲಹಾ ಸಮಿತಿ ಅಧ್ಯಕ್ಷ ಅಜೀಜ್ ಉಲ್ಲಾ ಅಜ್ಜು, ಸಮಾಜ ಸೇವಕ ಮುಮ್ತಾಜ್ ಅಹಮದ್, ನಗರ ಪಾಲಿಕೆ ಮಾಜಿ ಸದಸ್ಯ ಸುಹೇಲ್ ಬೇಗ್, ಮುಖಂಡ ರಾದ ಜಮೀಲ್ ಅಹ್ಮದ್ ಅಶ್ರಫಿ, ನಾಸಿರುದ್ದೀನ್ ಬಾಬು, ಶಬ್ಬೀರ್ ಸಯೀದ್, ಅಬ್ದುಸ್ ಸಲಾಂ ಮತ್ತಿತರರು ಹಾಜರಿದ್ದರು.

ಇಂದು ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ರಾಜಗೋಪುರಕ್ಕೆ ಗುದ್ದಲಿ ಪೂಜಾ ಕಾರ್ಯಕ್ರಮ

ಮೈಸೂರು: ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗಾನರಸಿಂಹಸ್ವಾಮಿ ದೇವಸ್ಥಾನದ ರಾಜಗೋಪುರ ಗುದ್ದಲಿ ಪೂಜಾ ಕಾರ್ಯಕ್ರಮವು ಫೆ.19 ರಂದು ಬೆಳಗ್ಗೆ 10:30ಕ್ಕೆ ನಡೆಯಲಿದೆ. ಪೂಜಾ ಕಾರ್ಯಕ್ರಮದಲ್ಲಿ ದೇವಸ್ಥಾನದ ಸಂಸ್ಥಾಪಕರಾದ ಡಾ.ಶ್ರೀ ಭಾಷ್ಯಂ ಸ್ವಾಮೀಜಿ, ಆಡಳಿತಾಧಿಕಾರಿ ಶ್ರೀನಿವಾಸನ್ ಸೇರಿದಂತೆ ಗಣ್ಯರು ಮತ್ತು ಭಕ್ತಾಧಿಗಳು ಭಾಗವಹಿಸುವರು. ನಂತರ 12 ಗಂಟೆಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಎರಡು ದಶಕಗಳಿಂದ ತಲೆ ನೋವಾಗಿದ್ದ ಸುಯೇಜ್ ಫಾರಂನ 6 ಲಕ್ಷ ಟನ್ ಕಸದ ರಾಶಿ

ಜೂನ್ ಅಂತ್ಯಕ್ಕೆ ಸಂಪೂರ್ಣ ತೆರವು

ಹಲವು ವರ್ಷಗಳಿಂದ ಸುತ್ತಮುತ್ತಲ ನಿವಾಸಿಗಳಿಗೆ ನರಕ ಸದೃಶ್ಯವಾಗಿದ್ದ ರಾಶಿ... ರಾಶಿ... ಕಸ



ತ್ಯಾಜ್ಯವನ್ನು ಸಂಸ್ಕರಿಸಿ, ತೆರವು ಮಾಡುತ್ತಿರುವ ಯಂತ್ರಗಳು.

ಮೈಸೂರು, ಫೆ.18(ಜಿಎ)– ಪಾರಂಪರಿಕ ನಗರಿಗೆ ಶಾಪವಾಗಿದ್ದ 20 ವರ್ಷದ 6 ಲಕ್ಷ ಟನ್ ಹಳೆಯ ತ್ಯಾಜ್ಯ ತೆರವು ಕಾರ್ಯ ಜೂನ್ ಅಂತ್ಯದೊಳಗೆ ಪೂರ್ಣಗೊಳ್ಳಲಿದೆ.

ಮೈಸೂರಿನ ವಿದ್ಯಾರಣ್ಯಪುರಂನಲ್ಲಿರುವ ಸುಯೇಜ್ ಫಾರಂ ತ್ಯಾಜ್ಯ ಸಂಗ್ರಹಣಾ ಘಟಕದಲ್ಲಿ 20 ವರ್ಷಗಳಿಂದ ರಾಶಿ ರಾಶಿ ಬಿದ್ದಿರುವ ಅಂದಾಜು 6 ಲಕ್ಷ ಟನ್ ಹಳೆಯ ತ್ಯಾಜ್ಯ ತೆರವು ಕಾರ್ಯವನ್ನು ಸೂರತ್ ಮೂಲದ ಮೆಸರ್ಸ್ ಡಿ.ಹೆಚ್. ಪಟೇಲ್ ಸಂಸ್ಥೆಗೆ ವಹಿಸಿದ್ದು, ಈಗಾಗಲೇ ಬಹುತೇಕ ತ್ಯಾಜ್ಯವನ್ನು ತೆರವುಗೊಳಿಸಲಾಗಿದೆ. ಭಾರೀ ಪ್ರಮಾಣದ ತ್ಯಾಜ್ಯವಿರುವ ಬ್ಲಾಕ್‌ನಲ್ಲಿ ವಿಲೇ ವಾರಿ ಕಾರ್ಯ ತ್ವರಿತವಾಗಿ ನಡೆಯುತ್ತಿದೆ.

ಬೆಟ್ಟದ ಮಾದರಿ ಸಂಗ್ರಹವಾಗಿರುವ ಕಸ ಬಹಳ ವರ್ಷಗಳಿಂದ ತಲೆನೋವಾಗಿತ್ತು. ಮಾತ್ರವಲ್ಲ, ಸುತ್ತಮುತ್ತಲ ವಸತಿ ಪ್ರದೇಶದ ಜನ ದುರ್ವಾಸನೆಯಿಂದ ನರಳುತ್ತಿದ್ದರು. ಈ ಕಸದ ಬೆಟ್ಟವನ್ನು ತೆರವು ಮಾಡಲು 'ಟೆಂಡರ್ ಪಡೆದ ಮೆಸರ್ಸ್ ಡಿ.ಹೆಚ್.ಪಟೇಲ್ ಸಂಸ್ಥೆ 2024ರ ಮಾರ್ಚ್ ನಿಂದ ಕಸ ತೆರವಿಗೆ ಸಿದ್ಧತೆ ಮಾಡಿಕೊಂಡಿತ್ತು ಸುಯೇಜ್ ಫಾರಂ ಆವರಣದಲ್ಲೇ ಘಟಕ ನಿರ್ಮಾಣ ಮಾಡಿಕೊಂಡು, ಸಿಬ್ಬಂದಿಗೆ ತಂಗುದಾಣವನ್ನೂ ನಿರ್ಮಿಸಿ, ಕಸ ತೆರವು ಕಾರ್ಯಕ್ಕೆ ಸಕಲ ಸಿದ್ಧತೆ ಮಾಡಿಕೊಂಡು ನಂತರ ಜೂನ್ ತಿಂಗಳಿಂದ ತೆರವು ಕಾರ್ಯ ಆರಂಭಿಸಲಾಯಿತು.

ತ್ಯಾಜ್ಯ ತೆರವು ಕಾರ್ಯ ಆರಂಭಿಸುವ ಮುನ್ನ ಆರು ಬ್ಲಾಕ್‌ಗಳಲ್ಲಿ ತ್ಯಾಜ್ಯವನ್ನು ವಿಂಗಡಿಸಿಕೊಂಡು, ನಂತರ ಕಡಿಮೆ ಕಸವಿರುವ ಬ್ಲಾಕ್‌ನಿಂದ ಉದ್ದೇಶಿತ ಕಾರ್ಯ ಆರಂಭಿಸಲಾಯಿತು. ಇದೀಗ ಕಡೆಯ ಬ್ಲಾಕ್‌ನಲ್ಲಿ ತೆರವು ಕಾರ್ಯ ಭರದಿಂದ ಸಾಗುತ್ತಿದೆ. ಟೆಂಡರ್ ನಂತರ ಕೂಡಲೇ ಕೆಲಸ ಆರಂಭವಾಗಿದ್ದರೆ ಕಳೆದ ತಿಂಗಳೇ ತೆರವು ಕಾರ್ಯ ಪೂರ್ಣಗೊಳ್ಳಬೇಕಿತ್ತು. ಆದರೆ, ಕೆಲ ಅಡೆತಡೆಗಳಿಂದಾಗಿ ವಿಳಂಬವಾಯಿತು.

ಮಳೆಯಿಂದ ವಿಳಂಬ: ಆರಂಭದಲ್ಲಿ ಒಂದು ದಿನಕ್ಕೆ ಒಂದು ಸಾವಿರ ಟನ್ ನಷ್ಟು ತ್ಯಾಜ್ಯವನ್ನು ತೆರವು ಮಾಡುತ್ತಿದ್ದ ಸಂಸ್ಥೆ, ನಂತರ ಕಾರ್ಯವೇಗ ಹೆಚ್ಚಿಸಿ ಕೊಂಡು ದಿನಕ್ಕೆ ಎಂಟು ಸಾವಿರ ಟನ್‌ನಷ್ಟು ತೆರವು ಮಾಡಲಾರಂಭಿಸಿತು. ಆದರೆ ಈ ವೇಗಕ್ಕೆ ಮಳೆ ಅಡ್ಡಿಯಾಯಿತು. ಮಳೆ ನಂತರದ ದಿನಗಳಲ್ಲಿ ಕಸವನ್ನು ತೆಗೆಯುವ ವೇಳೆ ಅನೇಕ ಬಾರಿ ಸುತ್ತಮುತ್ತಲ ತ್ಯಾಜ್ಯ ನೀರು ತುಂಬಿಕೊಂಡು ಅಡ್ಡಿವುಂಟು ಮಾಡಿತು.

ಬೃಹತ್ ಯಂತ್ರ ಬಳಕೆ: ರಾಶಿ ರಾಶಿ ತ್ಯಾಜ್ಯವನ್ನು ತೆರವು ಮಾಡಲು ಸಂಸ್ಥೆ ವತಿಯಿಂದ ಪವರ್ ಸ್ಕ್ರೀನ್ ಎಂಬ ಎರಡು ಬೃಹತ್ ಯಂತ್ರಗಳನ್ನು ಬಳಸಿಕೊಂಡು ತ್ವರಿತವಾಗಿ ನಡೆಸಲಾಗುತ್ತಿದೆ. ಈ ಯಂತ್ರಗಳು ಪ್ಲಾಸ್ಟಿಕ್, ಮಣ್ಣು, ಗೊಬ್ಬರ ಸೇರಿದಂತೆ ಇತರ ವಸ್ತುಗಳನ್ನು ಬೇರ್ಪಡಿಸಲು ಸಹಕಾರಿಯಾಗಿದ್ದು, ನಿತ್ಯವೂ 10 ಗಂಟೆ ಕಾರ್ಯ ನಿರ್ವಹಿಸಿ 8,000 ಟನ್ ನಷ್ಟು ತ್ಯಾಜ್ಯ ತೆರವು ಮಾಡಲಾಗಿದೆ.

ಮರು ಬಳಕೆ: ಯಂತ್ರದಲ್ಲಿ ಕಸವನ್ನು ಬೇರ್ಪಡಿಸಿದ ನಂತರ ಅದರಲ್ಲಿರುವ ಪ್ಲಾಸ್ಟಿಕ್ ಅನ್ನು ರಾಜ್ಯದ ಕಲ್ಬುರ್ಗಿ ಹಾಗೂ ದೇಶದ ಇತರೆ ರಾಜ್ಯಗಳಲ್ಲಿನ ಸಿಮೆಂಟ್ ತಯಾರಿಕಾ ಘಟಕಗಳಿಗೆ ಸಾಗಿಸಲಾಗುತ್ತಿದೆ. ಸಾವಯವ ಕಸವನ್ನು ಗೊಬ್ಬರ ತಯಾರಿಕೆಗೆ ಉಪಯೋಗಿಸಲಾಗುತ್ತಿದೆ. ಈ ವೇಳೆ ಸಂಗ್ರಹವಾಗುತ್ತಿರುವ ಮಣ್ಣನ್ನು ನೆಲಭರ್ತಿ(ಲ್ಯಾಂಡ್ ಫಿಲಿಂಗ್)ಗೆ ಬಳಸಲಾಗುತ್ತಿದೆ. ಮುಖ್ಯವಾಗಿ ಸುಯೇಜ್ ಫಾರಂನ ತ್ಯಾಜ್ಯ ವಿಲೇವಾರಿ ವೇಳೆ ಬೇರ್ಪಡಿಸುವ ವಸ್ತುಗಳನ್ನು ಮರು ಬಳಕೆ ಮಾಡಲಾಗುತ್ತಿದೆ.

ಸಿಎನ್‌ಜಿ ಗ್ಯಾಸ್ ಉತ್ಪಾದನಾ ಘಟಕ

ಆರು ಲಕ್ಷ ಟನ್ ಹಳೆ ಕಸ ತೆರವುಗೊಳಿಸುವ ಕಾರ್ಯ ತ್ವರಿತವಾಗಿ ನಡೆಯುತ್ತಿದೆ. 7 ಎಕರೆ ಜಾಗವನ್ನು ಆಕ್ರಮಿಸಿ ಕೊಂಡಿದ್ದ ಈ ತ್ಯಾಜ್ಯದ 5 ಮತ್ತು 6ನೇ ಬ್ಲಾಕ್ ಖಾಲಿ ಮಾಡಿದ್ದು, ಆ ಸ್ಥಳದಲ್ಲಿ ಸಿಎನ್‌ಜಿ ಗ್ಯಾಸ್ ಘಟಕ ಆರಂಭಿಸಲು ಪಾಲಿಕೆಯು ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ನೊಂದಿಗೆ 15 ವರ್ಷಗಳ ಅವಧಿ ಯೋಜನೆ ಸಂಬಂಧ ಒಡಂಬಡಿಕೆ ಮಾಡಿಕೊಂಡಿದೆ. ಸಿಎನ್‌ಜಿ ಗ್ಯಾಸ್ ಉತ್ಪಾದನಾ ಘಟಕ ಸ್ಥಾಪಿಸಲು ಈಗಾಗಲೇ ಬಿಪಿಸಿಎಲ್ ಮಣ್ಣು ಪರೀಕ್ಷೆ ಸೇರಿದಂತೆ ಇತರೆ ತಪಾಸಣೆ ಕಾರ್ಯ ನಡೆಸಿದೆ. ಬಹುತೇಕ ಎಲ್ಲಾ ಪ್ರಕ್ರಿಯೆಗಳು ಮುಗಿದಿದ್ದು, ಟೆಂಡರ್ ಹಂತದಲ್ಲಿದೆ. ಪಾಲಿಕೆಯಿಂದ ಪ್ರತಿ ದಿನ 150 ಟನ್ ಹಸಿ ಕಸವನ್ನು ಸಿಎನ್‌ಜಿ ಗ್ಯಾಸ್ ಉತ್ಪಾದನೆಗೆ ನೀಡಲಾಗುತ್ತದೆ. ಇದಕ್ಕೆ ಪ್ರತಿಯಾಗಿ ಪಾಲಿಕೆಯ ವಾಹನಗಳಿಗೆ ಸಬ್ಸಿಡಿಯಲ್ಲಿ ಸಿಎನ್‌ಜಿ ಇಂಧನ ನೀಡಲಿದ್ದಾರೆ. ಮತ್ತೊಂದೆಡೆ ನಿತ್ಯವೂ 150 ಟನ್ ಹಸಿ ಕಸ ನೀಡುವುದರಿಂದ ಅವರು ವಿಲೇವಾರಿಗೆ ತಗಲುತ್ತಿದ್ದ ವೆಚ್ಚದಲ್ಲಿ ಪಾಲಿಕೆಗೆ 2ರಿಂದ 3 ಕೋಟಿ ರೂ. ಉಳಿತಾಯವಾಗಲಿದೆ ಎಂದರು.



ಬಹುತೇಕ ಕಸ ತೆರವುಗೊಂಡ ನಂತರ ಡ್ರೋನ್ ಮೂಲಕ ಸೆರೆ ಹಿಡಿದಿರುವ ದೃಶ್ಯ.

ಡೂಫ್ಲಿನ್ ಕಾಂಪ್ಲೆಕ್ಸ್ ತೆರವು ಗಡುವು ನಮಗೆ ಅನ್ವಯಿಸಲ್ಲ!

ಕಾಂಪ್ಲೆಕ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ ಸ್ಪಷ್ಟನೆ

- ಕಾನೂನು ತಜ್ಞರನ್ನು ಸಂಪರ್ಕಿಸಿದ್ದೇವೆ
- ಹೈಕೋರ್ಟ್ ತೀರ್ಪಿನ ಪ್ರತಿ ಪರಿಶೀಲಿಸಿದ್ದೇವೆ
- ಈಗ ನಮಗೆ ಯಾವ ಆತಂಕ, ಗೊಂದಲವಿಲ್ಲ

ಮೈಸೂರು, ಫೆ.18(ಬಿಎಲ್‌ಯು)– ಡೂಫ್ಲಿನ್ ಕಾಂಪ್ಲೆಕ್ಸ್ ತೆರವು ಬಗ್ಗೆ ಮೈಸೂರು ಅಭಿವೃದ್ಧಿ ಪ್ರಾಧಿಕಾರ (ಎಂಡಿಎ) ನೀಡಿರುವ ಗಡುವು ನಮಗೆ ಸಂಬಂಧಿಸಿದ್ದಲ್ಲ ಎಂದು ಡೂಫ್ಲಿನ್ ಕಾಂಪ್ಲೆಕ್ಸ್ ಮರ್ಚೆಂಟ್ಸ್ ಅಸೋಸಿಯೇಷನ್ ಅಧ್ಯಕ್ಷ ಗಿರೀಶ್ ಸ್ಪಷ್ಟಪಡಿಸಿದ್ದಾರೆ.

ಈ ಸಂಬಂಧ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿರುವ ಅವರು, ಹೈಕೋರ್ಟ್ ನೀಡಿರುವ ತೀರ್ಪಿನ ಪ್ರತಿಯನ್ನು ನಮ್ಮ ಕಾನೂನು ತಜ್ಞರಿಗೆ ತೋರಿಸಿ ಪರಿಶೀಲನೆ ನಡೆಸಿದ್ದೇವೆ. ಉಚ್ಚ ನ್ಯಾಯಾಲಯದ ತೀರ್ಪಿಗೂ ನಿಮಗೂ ಯಾವುದೇ ಸಂಬಂಧವಿಲ್ಲ ನೀವು ನಿಶ್ಚಿಂತೆಯಿಂದ ಇರಿ ಎಂದು ಅವರು ಸಲಹೆ ನೀಡಿದ್ದಾರೆ ಎಂದರು.

ಇದರಿಂದ ಡೂಫ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ ವರ್ತಕರಾದ ನಮಗೆ ಹೈಕೋರ್ಟ್ ಆದೇಶ ಹಾಗೂ ಎಂಡಿಎ ನೀಡಿರುವ ಗಡುವು ಸಂಬಂಧಿಸಿದ್ದಲ್ಲ ಎಂದು ಗಿರೀಶ್ ತಿಳಿಸಿದರು. ಡೂಫ್ಲಿನ್ ಕಾಂಪ್ಲೆಕ್ಸ್‌ನಲ್ಲಿರುವ 51 ಅಂಗಡಿಗಳಲ್ಲಿ ಶೇಕಡ 70ರಷ್ಟು ವರ್ತಕರು ಅಂದಿನ ಮುಡಾಗೆ ಹಣ ಪಾವತಿಸಿ ನೋಂದಣಿ ಮಾಡಿಸಿಕೊಂಡು ಟೈಟಲ್ ಡೀಡ್ ಕೂಡ ಪಡೆದಿದ್ದೇವೆ. ಇದರಿಂದ ಕಾಂಪ್ಲೆಕ್ಸ್‌ನಲ್ಲಿರುವ ನಾವು ಮಾಲೀಕರೇ ಹೊರತು ಬಾಡಿಗೆದಾರರಲ್ಲ ಎಂದು ಹೇಳಿದರು.

ದೇವರಾಜ ಅರಸ್ ರಸ್ತೆಗೆ ಹೊಂದಿಕೊಂಡಂತೆ ಇರುವ ಡೂಫ್ಲಿನ್ ಕಾಂಪ್ಲೆಕ್ಸ್‌ನಲ್ಲಿ 26 ಬಾಡಿಗೆದಾರರು ಹಾಗೂ ಶಿವರಾಂ ಪೇಟೆಗೆ ಹೊಂದಿಕೊಂಡಂತೆ ಇರುವ ಕಾಂಪ್ಲೆಕ್ಸ್‌ನಲ್ಲಿ ಒಬ್ಬ ಬಾಡಿಗೆದಾರರಿಗೆ ಹೈಕೋರ್ಟ್ ತೀರ್ಪು ಅನ್ವಯ ಎಂದು ಸ್ಪಷ್ಟಪಡಿಸಿದರು.



ನಮ್ಮ ಕಾನೂನು ತಜ್ಞರಿಗೆ ಹೈಕೋರ್ಟ್ ತೀರ್ಪಿನ ಪ್ರತಿ ನೀಡಿ ಪರಿಶೀಲನೆ ಮಾಡಿಸಿಕೊಂಡಿದ್ದೇವೆ. ಅವರಿಂದ ವಸ್ತು ಸ್ಥಿತಿಯನ್ನು ಮನದಟ್ಟು ಮಾಡಿಕೊಂಡ ನಂತರ ವರ್ತಕರ ಅಸೋಸಿಯೇಷನ್‌ನಲ್ಲಿ ಚರ್ಚೆ ಮಾಡಿದ್ದೇವೆ ಎಂದು ಹೇಳಿದರು. ನಮ್ಮ ಕಾನೂನು ತಜ್ಞರ ಸಲಹೆಯನ್ನು ಪರಿಗಣಿಸೋಣ, ಈ ವಿಚಾರವಾಗಿ ಯಾರೂ ಕೂಡ ಆತಂಕಗೊಳ್ಳಬಾರದೆಂದು ತೀರ್ಮಾನ ಕೈಗೊಂಡಿದ್ದೇವೆ ಎಂದು ಗಿರೀಶ್ ತಿಳಿಸಿದರು. ಡೂಫ್ಲಿನ್ ಕಾಂಪ್ಲೆಕ್ಸ್ ಬಾಡಿಗೆದಾರರನ್ನು ಮಾರ್ಚ್ ಮೊದಲ ವಾರದಲ್ಲಿ ತೆರವು ಮಾಡಿಸುತ್ತೇವೆ ಎಂದು ಎಂಡಿಎ ಆಯುಕ್ತ ಕೆ.ಆರ್.ರಕ್ಷಿತ್ ಮಾಧ್ಯಮಗಳಿಗೆ ನೀಡಿರುವ ಹೇಳಿಕೆಯಿಂದ ಸಹಜವಾಗಿಯೇ ನಮ್ಮ ವರ್ತಕರು ಈ ಮೊದಲು ಆತಂಕಗೊಂಡಿದ್ದರು ಎಂದರು.

ಅಲ್ಲದೆ ಅಂಗಡಿ ಮಾಲೀಕರಾಗಿರುವ ನಮ್ಮನ್ನು ಹೇಗೆ ತೆರವುಗೊಳಿಸುತ್ತಾರೆ ಎಂಬ ಗೊಂದಲ ಕೂಡ ಕಾಡಿತು. ಈ ವಿಚಾರದ ಖಚಿತತೆ ಪಡೆಯಲು ನಿನ್ನೆ ನಮ್ಮ ಕೆಲವು ವರ್ತಕರು ಎಂಡಿಎ ಕಚೇರಿಗೆ ಹೋದಾಗ ಅಲ್ಲಿನ ಅಧಿಕಾರಿಗಳು ಯಾವುದೇ ಸ್ಪಷ್ಟನೆ ನೀಡದೆ ಬೇಜವಾಬ್ದಾರಿ ಮೆರೆದರು ಎಂದು ಆಕ್ರೋಶ ವ್ಯಕ್ತಪಡಿಸಿದರು.

ಆದರೆ ಈಗ ನಮ್ಮ ಕಾನೂನು ತಜ್ಞರು ನೀಡಿರುವ ಸಲಹೆಯಿಂದ ನಾವು ನಿರಾಂತಕವಾಗಿದ್ದೇವೆ. ಎಂಡಿಎ ನೀಡಿರುವ ಗುಡುವು ನಮಗೆ ಸಂಬಂಧಪಟ್ಟಿದ್ದಲ್ಲ ಎಂಬ ತೀರ್ಮಾನಕ್ಕೆ ಬಂದಿದ್ದು, ನಾವೆಲ್ಲಾ ಎಂದಿನಂತೆ ವ್ಯಾಪಾರದಲ್ಲಿ ತೊಡಗಿದ್ದೇವೆ ಎಂದು ಗಿರೀಶ್ ತಿಳಿಸಿದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಸಾರಿ ವಿನಯ್ ನಿನ್ನೆ ಕ್ಲಾಸಿನಲ್ಲಿ ತುಂಬಾ ಬೈದುಬಿಟ್ಟೆ.
ವಿನಯ್ : ಪರ್ವಾಗಿಲ್ಲ ಬಿಡಿ ಸಾರ್. ನೀವೇ ಹೇಳಿದ್ರಲ್ಲ ನಾಯಿ ಬೊಗಳಿದರೆ ದೇವಲೋಕ ಹಾಳಾಗಲ್ಲ ಅಂತ!!!

ಮೈಸೂರು ಮಿತ್ರ

ಗುರುವಾರ, ಫೆಬ್ರವರಿ 19, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಒಳ್ಳೆಯ ನಿರ್ಧಾರ ನಿನ್ನನ್ನು ಅರ್ಧ ಗೆಲ್ಲಿಸಿದರೆ,
ಪ್ರಯತ್ನ ಮತ್ತು ಪರಿಶ್ರಮ ಇನ್ನರ್ಧ ಗೆಲ್ಲಿಸುತ್ತದೆ.

ವೇದ ಸುಳ್ಳಾದರೂ / ಗಾದೆ ಸುಳ್ಳಾಗದು { ಮಾರಿಯು ಹೋತ / ತೋರಣದ ಚಿಗುರು ಬಯಸಿತಂತೆ.

ನಿಮ್ಮ ಪತ್ರಗಳು

ರಾಜ್ಯ ಸರ್ಕಾರದ್ದು ಮೂರ್ಖತನ, ಪ್ರಜಾಪ್ರಭುತ್ವ ವಿರೋಧಿ ನಡೆ

ಮಾನ್ಯರೆ,

ಮಾಧ್ಯಮಗಳ ಮೇಲೆ ನಿಯಂತ್ರಣ ಹೇರಿ ನಿರ್ಬಂಧ ಹಾಕಿರುವ ರಾಜ್ಯ ಸರ್ಕಾರದ ಆದೇಶ ಪ್ರಜಾಪ್ರಭುತ್ವಕ್ಕೆ ಮಾಡಿದ ಅಪಚಾರವಾಗಿದೆ. ವಿಧಾನಸೌಧದಲ್ಲಿ ಮಾಧ್ಯಮಗಳ ಪ್ರವೇಶಕ್ಕೆ ನಿರ್ಬಂಧ ಹೇರುತ್ತಿರುವುದು ಸಿದ್ದರಾಮಯ್ಯ ಸರಕಾರದ ಮೂರ್ಖತನಕ್ಕೆ ಸಾಕ್ಷಿಯಾಗಿದೆ. ಕಾಂಗ್ರೆಸ್ಸಿನ ಅಧಿನಾಯಕಿ ಯಾಗಿದ್ದ ಇಂದಿರಾ ಗಾಂಧಿಯವರು ತುರ್ತು ಪರಿಸ್ಥಿತಿ ಹೇರಿದ್ದು ಈ ಸಂದರ್ಭದಲ್ಲಿ ಎಲ್ಲರ ನೆನಪಿಗೆ ಬರುತ್ತಿದೆ.

ಇನ್ನು ಮೈಸೂರು ವಿಚಾರಕ್ಕೆ ಬಂದರೆ ಸರ್ಕಾರ ತನ್ನ ಸಾವಿರ ದಿನಗಳನ್ನು ಪೂರೈಸಿದ ಸಂದರ್ಭದಲ್ಲಿ ರಾಜ್ಯದ ಹಾಗೂ ಮೈಸೂರಿನ ಎಲ್ಲಾ ಸಣ್ಣ ಸಣ್ಣ ಪತ್ರಿಕೆಗಳಲ್ಲೂ ಜಾಹೀರಾತು ನೀಡಿದೆ. ಆದರೆ ಅದೇ ಜಾಹೀರಾತನ್ನು ನಮ್ಮ ನೆಚ್ಚಿನ 'ಮೈಸೂರು ಮಿತ್ರ'ಕ್ಕೆ ನೀಡಿಲ್ಲ. ಇದಕ್ಕೆ ಸಿದ್ದರಾಮಯ್ಯ ಹಾಗೂ ಅವರ ಮೈಸೂರಿನ ಕೆಲವು ಶಾಸಕರ ಕುಮ್ಮಕ್ಕು ಇರುವುದು ಸ್ಪಷ್ಟವಾಗಿ ಗೋಚರವಾಗಿದೆ.

ಪ್ರಜಾಪ್ರಭುತ್ವದಲ್ಲಿ ನಾಲ್ಕನೇ ಆಯಾಮವಾಗಿರುವ ಪ್ರತಿಭಾರಂಗದಲ್ಲಿ ತಾರತಮ್ಯ ತೋರಿ ದ್ವೇಷ ಭಾವನೆಯನ್ನು ಸರ್ಕಾರ ಬಹಿರಂಗವಾಗಿ 'ಮೈಸೂರು ಮಿತ್ರ'ದ ಮೇಲೆ ತೋರಿಸುತ್ತಿರುವುದು ಅಕ್ಷಮ್ಯ ಅಪರಾಧ. ಇನ್ನು ಈ ಸರ್ಕಾರ ದ್ವೇಷ ಭಾಷಣದ ಮೇಲೆ ಮಸೂದೆ ತರುವ ಯಾವ ನೈತಿಕತೆ ಉಳಿಸಿಕೊಂಡಿದೆ.

ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು ಹಾಗೆಯೆ ವಿಶೇಷವಾಗಿ ಮೈಸೂರಿನ ಬಿಜೆಪಿ ಪಕ್ಷ ಹಾಗೂ ಜೆಡಿಎಸ್ ಪಕ್ಷ ಅದರ ಕಾರ್ಯಕರ್ತರು ದನಿಯೆತ್ತ ಬೇಕಾಗಿದೆ. ಸಾರ್ವಜನಿಕರಾದ ನಾವೂ ಸಹ ಸಿದ್ದರಾಮಯ್ಯ ಸರ್ಕಾರ ಒಂದು ಕಣ್ಣಿಗೆ ಬೆಣ್ಣೆ, ಇನ್ನೊಂದು ಕಣ್ಣಿಗೆ ಸುಣ್ಣ ಎನ್ನುವ ಪರಿಯನ್ನು ಕೈಬಿಡಬೇಕೆಂದು,, ಎಲ್ಲಾ ಪತ್ರಿಕೆಗಳಿಗೂ ಸರಿಸಮಾನವಾಗಿ ಸರ್ಕಾರದ ಜಾಹೀರಾತನ್ನು ನೀಡಬೇಕೆಂದು ತೆರಿಗೆದಾರರಾದ ನಾವುಗಳು ನಮ್ಮ ಹಕ್ಕೊತ್ತಾಯ ಮಂಡಿಸುತ್ತಿದ್ದೇವೆ ಸರ್ಕಾರ ಸ್ಪಂದಿಸಿ ತನ್ನ ಆದೇಶ ವಾಪಾಸ್ ಪಡೆಯಲಿ ಇಲ್ಲವಾದರೆ ಇದು ಪ್ರಜಾಪ್ರಭುತ್ವ ವಿರೋಧಿ ಸರ್ಕಾರ ಎನಿಸಲಿದೆ.

ಅನುಕೂಲ ಸಿಂಧು ರಾಜಕಾರಣ ಮಾಡಿಕೊಂಡು. ತಮಗೆ ಅನುಕೂಲಕರವಾದ ವ್ಯಾಖ್ಯಾನ ಮಂಡಿಸುತ್ತಾ ಉತ್ತರದಾಯಿತ್ವವೇ ಇಲ್ಲದೆ ವೈಫಲ್ಯವನ್ನು ಮರೆಮಾಚಲು ತೆರಿಗೆದಾರರ ಹಣದಲ್ಲಿ ದಿನಾಲೂ ಪುಟಗಟ್ಟಳೆ ಜಾಹೀರಾತು ನೀಡುವ ಭಂಡ ಸರ್ಕಾರವನ್ನು ಇನ್ನೂ ಎರಡು ವರ್ಷ ಸಹಿಸಬೇಕಲ್ಲ ಎಂಬುದೇ ಮತದಾರರ ಮೂಕರೋಧನೆ.

–ಶಿವಮೊಗ್ಗ ನಾ. ದಿನೇಶ್ ಅಡಿಗ, ಮೈಸೂರು

ಮತ್ತೆ ಆಸ್ತಿ ತೆರಿಗೆ ಏರಿಕೆ ಬೇಡ

ಮಾನ್ಯರೆ,

ಪ್ರತಿ ವರ್ಷ ಏಪ್ರಿಲ್ ಬಂದರೆ ನಾಗರೀಕರು ತಮ್ಮ ವಾಸದ ಮನೆಗಳಿಗೆ ಆಸ್ತಿ ತೆರಿಗೆ ಪಾವತಿಸಬೇಕು. ಇದು ಸರಿಯಷ್ಟೇ.

ಆದರೆ ಆಸ್ತಿ ತೆರಿಗೆ ಪರಿಷ್ಕರಣೆ ಪ್ರತಿ ಐದು ವರ್ಷಕೊಮ್ಮೆ ಮಾಡಬೇಕು ಎಂದಿದ್ದರೂ, ಸರ್ಕಾರ, ನಗರಾಭಿರುದ್ಧಿ ಇಲಾಖೆ, ಪಾಲಿಕೆಗಳು ಪ್ರತಿ ವರ್ಷ ಆಸ್ತಿ ತೆರಿಗೆ ಹಾಗೂ ವಿವಿಧ ಸೆಸ್‌ಗಳನ್ನು ಏರಿಸುವುದು, ಅಳವಡಿಸುವುದು ಮಾಡುತ್ತಿದೆ. ಇದರಿಂದ ಆಸ್ತಿ ತೆರಿಗೆ ಪ್ರತಿ ವರ್ಷ ಹೆಚ್ಚಾಗುತ್ತಿದೆ. ಇದು ನಾಗರೀಕರಿಗೆ ಹೊರೆಯಾಗುತ್ತಿದೆ.

ಉದಾ: 2019–20ರಲ್ಲಿ ನನ್ನ ಮನೆಯ ತೆರಿಗೆ ಸೆಸ್‌ಗಳು ಸೇರಿ 2786 ರೂ (ನೆಲ ಮಹಡಿ) ಇದ್ದದ್ದು 25–26ನೇ ಸಾಲಿನಲ್ಲಿ 5038 ರೂ. ಆಗಿದೆ. ಬಹುತೇಕ ದುಪ್ಪಟ್ಟಾಗಿದೆ. ಇದೇ ರೀತಿ ತೆರಿಗೆ ಏರಿಸುತ್ತಾ ಹೋದರೆ ನಾವು ಸ್ವಂತ ಮನೆಯಲ್ಲಿದ್ದರೂ ಬಾಡಿಗೆ ಮನೆಯಲ್ಲಿ ವಾಸಿಸುವಂತೆ ಆಗುತ್ತದೆ. ಆದ್ದರಿಂದ ಆಸ್ತಿ ತೆರಿಗೆಯನ್ನು ಹಾಗೂ ವಿವಿಧ ಸೆಸ್‌ಗಳನ್ನು ಕಡಿಮೆ ಮಾಡುವತ್ತ ಸರ್ಕಾರ ಗಮನ ಹರಿಸಲಿ. ಹಾಗೂ ತೆರಿಗೆಯು ಒಂದೊಂದು ಏರಿಯಾದಲ್ಲೂ ಒಂದೊಂದು ರೀತಿ ಇದ್ದು ಕೆಲವೆಡೆ ಕಡಿಮೆ ಇದ್ದರೆ ಕೆಲವೆಡೆ ಅತಿ ಹೆಚ್ಚು ಎನ್ನುವಂತಿದೆ. ಇಂತಹ ಅಸಮಾನತೆಯನ್ನು ನಿವಾರಿಸಿ ಎಲ್ಲರಿಗೂ ಅನ್ವಯವಾಗುವಂತೆ ಏಕರೂಪದ ಸರಳ ತೆರಿಗೆ ವಿಧಿಸಲಿ. ಬರುವ ಏಪ್ರಿಲ್‌ನಲ್ಲಿ ಕುಂಟು ನೆಪವೊಡ್ಡಿ ಮತ್ತೆ ಆಸ್ತಿ ತೆರಿಗೆ ಏರಿಕೆ ಮಾಡದಿರಲಿ. ಏಕೆ ತೆರಿಗೆ ಏರಿಕೆ ಮಾಡಿದ್ದೀರಿ ಎಂದು ಪಾಲಿಕೆ ಅಧಿಕಾರಿಗಳನ್ನು ಕೇಳಿದರೆ, ಸರ್ಕಾರದ ಆದೇಶ ಸರ್. ಅದನ್ನು ನಾವು ಪಾಲನೆ ಮಾಡುತ್ತಿದ್ದೇವೆ ಎನ್ನುವ ಸಿದ್ಧ ಉತ್ತರ ಪಾಲಿಕೆ ಅಧಿಕಾರಿಗಳಿಂದ ಬರುತ್ತದೆ. ಇನ್ನಾದರೂ ಇಂತಹ ಏರಿಕೆಗೆ ಕಡಿವಾಣ ಬೀಳಲಿ.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

ಬಿಜೆಪಿ ಕಚೇರಿ ಹಿಂಭಾಗ ರಸ್ತೆ ದುರಸ್ತಿಪಡಿಸಿ

ಮಾನ್ಯರೇ



ಮೈಸೂರಿನ ಚಾಮರಾಜಪುರಂ ಭಾರತೀಯ ಜನತಾ ಪಕ್ಷದ ಕಚೇರಿಯ ಹಿಂಭಾಗದ ರಸ್ತೆಯಲ್ಲಿ ಒಳಚರಂಡಿ ಕಾಮಗಾರಿ ನಡೆದು ಹತ್ತು ದಿವಸಗಳೇ ಆಗಿವೆ. ರಸ್ತೆಯನ್ನು ಅಗೆದ ಪಾಲಿಕೆಯ ಮಂದಿ ಅದನ್ನು ಸರಿಯಾಗಿ ಮುಚ್ಚಿಲ್ಲ ಹಾಗೂ ಕಾಮಗಾರಿ ನಡೆಯುವಾಗ ಜೆ.ಸಿ.ಬಿಯಿಂದ ನೀರು ಸರಬರಾಜಿನ ಕೊಳವೆಗಳು ಹಾಳಾಗಿ ನೀರು ಪೋಲಾಗುತ್ತಿದೆ. ಇದರಿಂದಾಗಿ ರಸ್ತೆಯಲ್ಲಿ ನಡೆದು ಹೋಗಲು ಅಸಾಧ್ಯವಾಗುತ್ತಿದೆ. ಪಾಲಿಕೆಯ ಅಧಿಕಾರಿಗಳು ಈ ಬಗ್ಗೆ ತಮ್ಮ ಗಮನ ಹರಿಸಿ ರಸ್ತೆಯನ್ನು ಸರಿಪಡಿಸಿ ಒಡೆದ ನೀರಿನ ಕೊಳವೆಯನ್ನೂ ಸರಿಪಡಿಸಬೇಕೆಂದು ಒತ್ತಾಯಿಸುತ್ತೇನೆ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು

ಭುಗತಗಳ್ಳಿ ಗ್ರಾಮದಲ್ಲಿ ಮಿನಿ ಗ್ರಂಥಾಲಯ ನಿರ್ಮಿಸಿ

ಮಾನ್ಯರೆ,

ಮೈಸೂರು ತಾಲೂಕು ವಾಜಮಂಗಲ ಗ್ರಾಮ ಪಂಚಾಯಿತಿಗೆ ಒಳಪಡುವ ಬುಗತಗಳ್ಳಿ ಗ್ರಾಮದಲ್ಲಿ ಮಿನಿ ಗ್ರಂಥಾಲಯವಿಲ್ಲದೆ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗಿದೆ. ವರುಣಾ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ಮೈಸೂರು ತಾಲೂಕು ಬುಗತಗಳ್ಳಿ ಗ್ರಾಮದಲ್ಲಿ ಸುಮಾರು 100 ರಿಂದ 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಚುನಾಯಿತಿ ಪ್ರತಿನಿಧಿಗಳು ಬುಗತಗಳ್ಳಿ ಗ್ರಾಮದಲ್ಲಿ ಕೂಡಲೇ ಮಿನಿ ಗ್ರಂಥಾಲಯವನ್ನು ಆರಂಭಿಸುವ ಮೂಲಕ ಸಾರ್ವಜನಿಕರು ಹಾಗೂ ವಿದ್ಯಾರ್ಥಿಗಳು, ಚಿಕ್ಕ ಮಕ್ಕಳ ಜ್ಞಾನಾರ್ಜನೆಗೆ ಅನುಕೂಲ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಮನವಿ.

–ಎಸ್.ನೀಲಿಸಿದ್ದಯ್ಯ, ಭುಗತಗಳ್ಳಿ



ರಾಘವೇಂದ್ರ ಸಿ.ಎಸ್.
ಕನ್ನಡ ಉಪನ್ಯಾಸಕರು
ರಾಮಕೃಷ್ಣ ವಿದ್ಯಾಶಾಲಾ, ಮೈಸೂರು
ಮೊ: 9036389640

ಈ ಜೀವನ

ಭಯ ಪಕ್ಕಕ್ಕೆ ಸರಿಸಿದರೆ ಮುಂದೆ ಜಯ... ಜಯ...

ಬದುಕನ್ನು ಭಯದ ಬಲೆಗೆ ಸಿಲುಕಿಸಿ ಯಾತನೆಗೆ ನೂಕಬಾರದು. ಭಯದಿಂದ ಕಳೆಯುವ ಪ್ರತಿ ಕ್ಷಣಕ್ಕೂ ನೆಮ್ಮದಿಯನ್ನು ಒತ್ತೆ ಇಡಬೇಕಾಗುತ್ತದೆ. ಭಯದಿಂದ ವಿಮುಕ್ತವಾದ ವಾತಾವರಣದಿಂದ ಬದುಕು ಶೋಭಿಸುತ್ತದೆ. ಭಯದ ರೂಪ ವಿರೂಪದ ನೆಲೆಗಳು ಹತ್ತು ಹಲವು. ಅವುಗಳ ಬಲೆಯಲ್ಲಿ ಸದಾಕಾಲ ಮಾನವನಷ್ಟೇ ಅಲ್ಲ ಪ್ರಾಣಿಗಳು ಕೂಡ ಬದುಕುತ್ತವೆ. ಈ ಭಯ ಮಾನವನ ಮನಸ್ಸಿನೊಳಗೆ ಮೌನವಾಗಿ ವಾಸಿಸುವ ಅತಿದೊಡ್ಡ ಶಕ್ತಿ. ಅದು ಕಣ್ಣಿಗೆ ಕಾಣದು; ಆದರೆ ಬದುಕಿನ ಪ್ರತಿಯೊಂದು ಹೆಜ್ಜೆಯಲ್ಲೂ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೆ. ಕೆಲವೊಮ್ಮೆ ಭಯ ನಮ್ಮನ್ನು ಅಪಾಯದಿಂದ ಕಾಪಾಡುವ ಎಚ್ಚರಿಕೆಯ ಗಂಟೆ ಯಾದರೆ, ಇನ್ನೊಮ್ಮೆ ನಮ್ಮ ಕನಸುಗಳ ದಾರಿಗೆ ಅಡ್ಡಿಯಾಗುವ ಕತ್ತಲೆಯ ಗೋಡೆಯಾಗುತ್ತದೆ. ಸೋಲಿನ ಭಯ, ನಿಂದನೆಯ ಭಯ, ಅಪಮಾನವಾದೀತು ಎಂಬ ಆತಂಕ ಇವೆಲ್ಲವೂ ಮಾನವನ ಚಿಂತನೆಗೆ ಮಿತಿ ಹಾಕಿ, ಆತ್ಮವಿಶ್ವಾಸವನ್ನು ಕುಗ್ಗಿಸುತ್ತವೆ. ಭಯವನ್ನು ಅರಿತು, ಅದನ್ನು ಎದುರಿಸುವ ಮನೋಬಲ ಬೆಳೆಸಿದಾಗ ಮಾತ್ರ ವ್ಯಕ್ತಿಯೊಳಗಿನ ನಿಜವಾದ ಶಕ್ತಿ ಹೊರಹೊಮ್ಮುತ್ತದೆ. ಆದ್ದರಿಂದ ಭಯದ ಸ್ವರೂಪ, ಅದರ ಪರಿಣಾಮಗಳು ಮತ್ತು ಅದನ್ನು ಮೀರುವ ಮಾರ್ಗಗಳನ್ನು ಅರಿಯುವುದು ಬದುಕಿನ ಮಹತ್ವದ ಪಾಠವಾಗಿದೆ.

ಭಯ ಪ್ರತಿಯೊಬ್ಬ ಮನುಷ್ಯನಲ್ಲಿಯೂ ಒಂದಲ್ಲ ಒಂದು ಬಗೆಯಲ್ಲಿ ತನ್ನ ಅಸ್ತಿತ್ವವನ್ನು ಉಳಿಸಿ,ಬೆಳೆಸಿಕೊಂಡು ಬಂದಿರುತ್ತದೆ. ಯಾವುದೇ ಕಾರಣಕ್ಕೂ ಭಯಪಡುವುದಿಲ್ಲ ಎನ್ನುವವರು ಕೂಡ ಭಯದ ಕಪಿಮುಷ್ಟಿಯಲ್ಲಿ ಬಂಧಿತರಾಗಿರುತ್ತಾರೆ.ಭಯಕ್ಕೆ ಕಾರಣಗಳನ್ನು ನಿಖರವಾಗಿ ಕೆಲವೊಮ್ಮೆ ಹೇಳಲಾಗದೆ ಹೋದರೂ ಸಹ ವಿವಿಧ ಬಗೆಯಲ್ಲಿ ಇದು ಬಹುತೇಕರಲ್ಲಿ ಪ್ರತ್ಯಕ್ಷವಾಗಿ ಪರೋಕ್ಷವಾಗಿ ನೆಲೆ ನಿಂತಿರುತ್ತದೆ.

ಬದುಕಿನ ಭಯ

ನಾಳೆ ಏನಾಗುತ್ತದೆ, ಭವಿಷ್ಯ ಹೇಗಿರುತ್ತದೆ, ಮಾಡುತ್ತಿರುವ ಕೆಲಸವನ್ನು ಬಿಟ್ಟರೆ ಮುಂದಿನ ಗತಿ ಏನು? ಮಕ್ಕಳು ನಮ್ಮನ್ನು ಸಾಕುತ್ತಾರೊ ಇಲ್ವೊ? ವಯಸ್ಸಾದ ನಂತರ ಮುಂದಿನ ಬದುಕು ಹೇಗೆ? ಹಣವನ್ನು ಉಳಿಸುವುದು ಹೇಗೆ? ಖರ್ಚು ಹೆಚ್ಚಾಗ್ತ ಇದೆ? ಹೀಗೆ ಹೋದರೆ ಮುಂದೆ ಹೇಗೆ ಜೀವನ ನಡೆಸುವುದು? ಆಕಸ್ಮಿಕವಾಗಿ ನಾನು ಇಲ್ಲವಾದರೆ ನಮ್ಮ ಕುಟುಂಬದ ಕಥೆ ಏನು? ಹೀಗೆ ಬೇಕಾದದ್ದು, ಬೇಡವಾದದ್ದನ್ನೆಲ್ಲ ನೆನಪಿಸಿಕೊಂಡು ಭಯ ಪಡುವುದು ಮನುಷ್ಯರಿಗೆ ಸಹಜವಾಗಿ ಬಂದಿದೆ. ಸಮಸ್ಯೆಗಳು ಎದುರಾದರೂ, ಆಗದಿದ್ದರೂ, ತೊಂದರೆ, ಸಾವು, ನೋವು ಏನೇ ಬಂದರೂ ಅದನ್ನು ಎದುರಿಸಲೇ ಬೇಕೆ ವಿನಃ ಅದರ ಬಗ್ಗೆ ಇನ್ನಿಲ್ಲದಂತೆ ಆಲೋಚನೆ ಮಾಡುತ್ತಾ ಪರಿತಪಿಸುವುದರಲ್ಲಿ ಯಾವುದೇ ಅರ್ಥವಿರುವುದಿಲ್ಲ. ಪ್ರಶ್ನೆಗಳು ಹೆಚ್ಚಾದಂತೆ ಭಯ ಜಾಸ್ತಿಯಾಗುವುದೇ ವಿನಃ ಕಡಿಮೆಯಾಗುವುದಿಲ್ಲ.ಆದ್ದರಿಂದ ಬದುಕಿನ ಬಗ್ಗೆ ಭಯವನ್ನು ಪಡೆದೇ ಬಂದದ್ದೆಲ್ಲ ಬರಲಿ ಎಂದು ಭಗವಂತನ ಮೇಲೆ ದಯೆ ಇರಲೆಂದು ಮುನ್ನುಗ್ಗಬೇಕಾಗುತ್ತದೆ. ವಾಹನ ಚಾಲನೆ ಮಾಡುವಾಗ ಕೆಲವೊಮ್ಮೆ ಕೆಂಪು ಬಣ್ಣದ ಸಿಗ್ನಲ್ ಪ್ರತಿ ಹಂತದಲ್ಲಿಯೂ ಸಿಗುವ ಹಾಗೇ ಬಾಳಿನಲ್ಲಿ ಕೆಲವೊಮ್ಮೆ ಭಯ ಆವರಿಸಿಕೊಳ್ಳುವುದು ಸಹಜ, ಆದರೆ ಅವುಗಳನ್ನು ತಾಳ್ಮೆಯಿಂದ ಎದುರಿಸಿದರೆ ಹಸಿರು ಬಣ್ಣದ ಸಿಗ್ನಲ್ ದೊರೆಯುವಂತೆ ಕಷ್ಟಗಳ ನಂತರ ಸುಖ, ನೋವಿನ ನಂತರ ನಲಿವು, ಸೋಲಿನ ನಂತರ ಗೆಲುವು ಸಿಗುತ್ತದೆ. ಹಾಗಾಗಿ ಬದುಕಿನ ಬಗ್ಗೆ ಹೆಚ್ಚು ಆತಂಕಪಡುವ ಅಗತ್ಯವಿಲ್ಲ.

ಸಾವಿನ ಭಯ

ಬದುಕಿನ ಬಗ್ಗೆ ಭಯ ಪಡುವುದನ್ನು ನಿಲ್ಲಿಸಿದರೂ ಕೂಡ ಸಾವಿನ ಬಗ್ಗೆ ಇರುವ ಭಯ ನಮಗೆ ಕಡಿಮೆಯಾಗುವುದೇ ಇಲ್ಲ. ಸಾವು ಯಾರಿಗೆ ತಾನೇ ಇಷ್ಟ? ವಯಸ್ಸಾದವರು ಕೂಡ ಇನ್ನೂ ಸ್ವಲ್ಪ ದಿನ ಬದುಕಬೇಕೆಂದೇ ಅಪೇಕ್ಷೆಪಡುತ್ತಾರೆ ವಿನಃ ಸಾವು ಬರಲೆಂದು ಇಚ್ಛೆಸುವುದಿಲ್ಲ. ಕನ್ನಡ ನಾಡು ಕಂಡ ಅಪರೂಪದ ಕವಿ, ವರಕವಿ ದ.ರಾ.ಬೇಂದ್ರೆ ಅವರು ಹೇಳಿರುವ ಈ ಮಾತನ್ನು ಗಮನಿಸಬೇಕು. 'ಸಾವಿಗೆ ನಾ ಹೆದರುವುದಿಲ್ಲ. ಯಾಕೆಂದರೆ ನಾ ಇರೋತನಕ ಅದು ಬರೋದಿಲ್ಲ. ಅದು ಬಂದಾಗ ನಾ ಇರೋದಿಲ್ಲ' ಬದುಕು ಇರುವವರೆಗೆ ಸಾವಿನ ಬಗ್ಗೆ ಚಿಂತಿಸಬಾರದು, ಸಾವು ಬಂದಾಗ ಬದುಕೆ ಇರುವುದಿಲ್ಲ. ಹಾಗಾಗಿ ಸಾವಿಗೆ ಭಯಪಡುತ್ತಾ ಕುಳಿತ್ತಿರುವುದರಲ್ಲಿ ಯಾವುದೇ ಅರ್ಥವಿರುವುದಿಲ್ಲ.

> ಬದುಕು ಅಮೂಲ್ಯವಾದುದು. ಅದನ್ನು ಆನಂದದಿಂದ ಅನುಭವಿಸುವುದನ್ನು ಬಿಟ್ಟು ಕಾಣದ ಅಥವಾ ಒಂದಲ್ಲ ಒಂದು ದಿನ ಎಲ್ಲರಿಗೂ ಬರುವ ಸಾವಿನ ಕುರಿತಾಗಿ ಭಯಪಡುವ ಅಗತ್ಯವಿಲ್ಲ. ಕೆಲವರು ತುಂಬಾ ಬೇಗ, ಕೆಲವರು ತುಂಬಾ ತಡವಾಗಿ, ಮತ್ತೂ ಕೆಲವರು ಆಕಸ್ಮಿಕವಾಗಿ ಸಾವನ್ನಪ್ಪುವುದು ಸಹಜ. ಅದಕ್ಕೆ ಸಾವಿನ ಭಯವನ್ನು ಬದಿಗೆ ಸರಿಸಿ ಕಣ್ಣಿಗೆ ಕಾಣುವ, ವಾಸ್ತವದಲ್ಲಿರುವ ಬದುಕಿನ ಬಗ್ಗೆ ಆಲೋಚಿಸಿ ಬಾಳುವುದನ್ನು ಕಲಿಯಬೇಕು.



ಬದುಕು ಅಮೂಲ್ಯವಾದುದು. ಅದನ್ನು ಆನಂದದಿಂದ ಅನುಭವಿಸುವುದನ್ನು ಬಿಟ್ಟು ಕಾಣದ ಅಥವಾ ಒಂದಲ್ಲ ಒಂದು ದಿನ ಎಲ್ಲರಿಗೂ ಬರುವ ಸಾವಿನ ಕುರಿತಾಗಿ ಭಯಪಡುವ ಅಗತ್ಯವಿಲ್ಲ. ಕೆಲವರು ತುಂಬಾ ಬೇಗ, ಕೆಲವರು ತುಂಬಾ ತಡವಾಗಿ, ಮತ್ತೂ ಕೆಲವರು ಆಕಸ್ಮಿಕವಾಗಿ ಸಾವನ್ನಪ್ಪುವುದು ಸಹಜ. ಅದಕ್ಕೆ ಸಾವಿನ ಭಯವನ್ನು ಬದಿಗೆ ಸರಿಸಿ ಕಣ್ಣಿಗೆ ಕಾಣುವ, ವಾಸ್ತವದಲ್ಲಿರುವ ಬದುಕಿನ ಬಗ್ಗೆ ಆಲೋಚಿಸಿ ಬಾಳುವುದನ್ನು ಕಲಿಯಬೇಕು.

ಜನರ ಭಯ

ಈ ಶೀರ್ಷಿಕೆ ಕುತೂಹಲವನ್ನುಂಟು ಮಾಡಬಹುದು. ಜನರ ಬಗ್ಗೆ ಭಯ ಯಾಕೆ ಪಡಬೇಕು ಎನ್ನುವ ಅನುಮಾನವು ಬರಬಹುದು.ನಿಜ ನಮ್ಮಲ್ಲಿ ಬಹುತೇಕರು ಈ ಭಯದಲ್ಲಿಯೇ ಸಮಯ ಕಳೆಯುತ್ತಾರೆ. ನಮಗಿಷ್ಟ ಬಂದಂತೆ ಬದುಕುವವರಿಗಿಂತ ಜನರು ಏನಂದುಕೊಳ್ಳುತ್ತಾರೆ ಎಂದು ಬದುಕುವವರೇ ಹೆಚ್ಚಾಗಿ ಕಂಡುಬರುತ್ತಾರೆ. ಹಾಕಿಕೊಳ್ಳುವ ಬಟ್ಟೆಯಿಂದ ಹಿಡಿದು, ನೋಡುವ ಸಿನಿಮಾ, ತೆಗೆದುಕೊಳ್ಳುವ ನಿವೇಶನ, ಕಟ್ಟುವ ಮನೆ, ತಿನ್ನುವ ಆಹಾರ ಹೀಗೆ ಎಲ್ಲದರಲ್ಲಿಯೂ ಜನರ ಭಯ, ಜನ ಏನೆಂದು ತಿಳಿದುಕೊಳ್ಳುತ್ತಾರೆಂಬ ಭಯ ಆವರಿಸಿಕೊಂಡಿರುತ್ತದೆ. ಒಮ್ಮೊಮ್ಮೆ ನಾವು ಜನರಿಗಾಗಿಯೇ ಬದುಕನ್ನು ನಡೆಸುತ್ತಿರುವೆವು ಎಂಬ ಸಂದೇಹವು ಬರುತ್ತದೆ. ಜನ ಹೇಗೆ ಇದ್ದರೂ ಮಾತನಾಡುತ್ತಾರೆ, ಮಾತನಾಡುವ ಚಪಲ ಇದ್ದೇ ಇರುತ್ತದೆ. ನಮಗೆ ದೊರಕದ್ದು ಇವರಿಗೆ ದೊರಕಿದೆಯಲ್ಲ ಎನ್ನುವ ಅಸೂಯೆಗೆ ಅಥವಾ ಅವರಂತೆ ನಾವಿಲ್ಲವಲ್ಲ ಎನ್ನುವ ಕಾರಣಕ್ಕೆ, ಎಲ್ಲಿ ನಮಗೂ ಇದು ಬರುತ್ತದೋ ಎಂಬ ಆತಂಕಕ್ಕೆ ಹೀಗೆ ಒಂದಲ್ಲ ಒಂದು ನೆಪದಿಂದ ಜನ ಮತ್ತೊಬ್ಬರ ಬಗ್ಗೆ ಮಾತನಾಡಿಕೊಳ್ಳುವುದನ್ನು ಬಿಡುವುದೇ ಇಲ್ಲ, ಮತ್ತೊಂದು ವಸ್ತು, ಮತ್ತೊಬ್ಬ ವ್ಯಕ್ತಿ ಸಿಗುವವರೆಗೆ ಮಾತನಾಡುತ್ತಲೇ ಇರುತ್ತಾರೆ. ಜನರ ಬಾಯಿಗೆ ಸಿಲುಕದವರೆ ಇಲ್ಲ, ಗೆದ್ದರೂ, ಸೋತರೂ, ಅತ್ತರೂ, ನಕ್ಕರೂ, ಸುಮ್ಮನಿದ್ದರೂ, ಸುಮ್ಮನಿಲ್ಲದಿದ್ದರೂ ಮಾತನಾಡುತ್ತಲೇ ಇರುತ್ತಾರೆ. ಹಾಗಾಗಿ ಇಂತಹ ಜನರ ಬಗ್ಗೆ ಹೆದರಿಕೊಳ್ಳುವ ಅಗತ್ಯವಿಲ್ಲ.

ಶಿಕ್ಷಣದ ಭಯ

ಓದುವಾಗಲು, ಓದು ಮುಗಿದ ನಂತರವು ಇರುವ ಭಯ ಇದಾಗಿದೆ. ಓದಿದವರು ಕಡಿಮೆ ಅಂಕ ಬಂದರೆ,ನಿರೀಕ್ಷಿತ ಅಂಕಗಳು ಬರದಿದ್ದರೆ ಎಂಬಿತ್ಯಾದಿಗಳ ಭಯವಿದ್ದರೆ ಓದದವರಿಗೆ ಅನುತ್ತೀರ್ಣರಾದರೆ ಮುಂದಿನ ಬದುಕು, ಭವಿಷ್ಯ ಹೇಗೆ ಭಯ ಕಾಡುತ್ತದೆ. ಶಿಕ್ಷಣ ಅಂದರೆ ಧೈರ್ಯ, ಆತ್ಮವಿಶ್ವಾಸವನ್ನು ನೀಡಬೇಕು.ದುರಂತ ಅಂದರೆ ಇಂದು ಶಿಕ್ಷಿತರೇ ಹೆಚ್ಚು ಭಯದಲ್ಲಿ ಮುಳುಗಿದ್ದಾರೆ. ಸ್ನಾತಕೋತ್ತರ ಪದವಿ ಪಡೆದವರು, ಪಿ.ಎಚ್.ಡಿ ಮಾಡಿದವರು, ಪದವಿಗಳ ಪಡೆದವರೇ ಕೆಲಸ ಸಿಗದಿದ್ದರೆ ಮುಂದೆ ಏನು ಕಥೆ ಎಂದು ಭವಿಷ್ಯದ ಬಗ್ಗೆ ಆಲೋಚಿಸಿ ಭಯ ಪಡುವುದನ್ನು ನೋಡಿದಾಗ ಪಡೆದ ಶಿಕ್ಷಣಕ್ಕೂ, ಪಡುತ್ತಿರುವ ಭಯಕ್ಕೂ ಸಂಬಂಧ ಏನು? ಎಂಬ ಪ್ರಶ್ನೆ ಉದ್ಭವಿಸುತ್ತದೆ.

ಭಯವನ್ನು ಪಡದೇ ಮುನ್ನುಗ್ಗುವ ಅಚಲವಾದ ನಂಬಿಕೆಯನ್ನು ನೀಡುವುದು ಶಿಕ್ಷಣದ ಗುರಿಯಾಗಬೇಕು. ಶಿಕ್ಷಣವನ್ನು ಪಡೆದವರು ನಿರ್ಭಯರಾಗಿರುವುದನ್ನು ಕಲಿಯಬೇಕು. ಪರಿಹಾರಗಳಿಲ್ಲದ ಸಮಸ್ಯೆಗಳೇ ಇಲ್ಲ. ಹೀಗಿರುವಾಗ ಸಮಸ್ಯೆಗಳು ಎದುರಾದಾಗ ಪಲಾಯನ ಮಾಡುವ ಬದಲು ಧೈರ್ಯವಾಗಿರುವುದನ್ನು ಕಲಿಯಬೇಕು. ಕಲಿತ ವಿದ್ಯೆ ಎಂದಿಗೂ ವ್ಯರ್ಥವಾಗುವುದಿಲ್ಲ, ಶಿಕ್ಷಣ ಶಿಕ್ಷೆ ಅಲ್ಲ ಅದು ನಮ್ಮೆಲ್ಲರನ್ನು ಕಾಯುವ ಶ್ರೀರಕ್ಷೆ ಎಂಬುದನ್ನು ಅರಿತುಕೊಳ್ಳಬೇಕು.

ಸಭಾ ಕಂಪನದ ಭಯ

ಕೆಲವರಿಗೆ ವೇದಿಕೆ ಮೇಲೆ ನಿಂತು ಮಾತನಾಡಲು ಹೋದರೆ ಸಭಾಕಂಪನದ ಭಯ ಉಂಟಾಗುತ್ತದೆ. ಕೈ ಕಾಲುಗಳು ನಡುಗುವುದು, ಮುಖದಲ್ಲಿ ಬೆವರು ಸುರಿಯುವುದು, ಮಾತುಗಳು ಅಸ್ಪಷ್ಟವಾಗುವುದು ಹೀಗೆ ಸಭಾಕಂಪನದ ಭಯ ಉದ್ಭವಿಸುತ್ತದೆ. ಯಾವುದೇ ಕಾರ್ಯಕ್ರಮವಾದರೂ, ನಾವು ಎಷ್ಟೇ ಪರಿಣತಿ ಪಡೆದಿದ್ದರೂ ಕನ್ನಡಿ ಮುಂದೆ ನಿಂತು ಅಭ್ಯಾಸ ಮಾಡುವುದನ್ನು ಕರಗತ ಮಾಡಿಕೊಂಡರೆ ಸಭಾಕಂಪನದ ಭಯವನ್ನು ಹೋಗಲಾಡಿಸಬಹುದು. ನಮಗೆ ತಿಳಿದ ವಿಚಾರಗಳ ಬಗ್ಗೆ ಸುಲಲಿತವಾಗಿ ಯಾವುದೇ ಸಿದ್ಧತೆ ಇಲ್ಲದಿದ್ದರೂ ಮಾತನಾಡಬಲ್ಲ ಶಕ್ತಿ ಇರುವುದರಿಂದ ವಿಷಯಗಳನ್ನು ಅಭ್ಯಾಸ ಮಾಡಿ ಧೈರ್ಯವಾಗಿ ನಿಂತು ಮಾತನಾಡುವುದನ್ನು ಕಲಿತಾಗ ಈ ಭಯ ಹಂತ ಹಂತವಾಗಿ ಕಡಿಮೆಯಾಗುತ್ತದೆ.

ಇವಿಷ್ಟೇ ಭಯಗಳು ಎಂದೇನು ಇಲ್ಲ, ಪ್ರಮುಖವಾಗಿ ಗಮನಿಸಿದ ಭಯಗಳನ್ನಷ್ಟೇ ಪಟ್ಟಿ ಮಾಡಿ ಅವುಗಳನ್ನು ಕಡಿಮೆ ಮಾಡಿಕೊಳ್ಳುವುದು ಹೇಗೆ ಎಂಬುದನ್ನು ತಿಳಿಸಿರುವೆ. ಇವುಗಳಲ್ಲದೇ ಇನ್ನೂ ಅನೇಕ ಬಗೆಯ ಭಯಗಳು ನಮ್ಮನ್ನು ಬಂಧಿಸಿಟ್ಟಿರುತ್ತವೆ. ಅವುಗಳ ಹಿಡಿತದಿಂದ ಪಾರಾಗಬೇಕಾದರೆ ಈ ಕೆಳಗೆ ತಿಳಿಸಿರುವ ಸಂಗತಿಗಳನ್ನು ಗಮನಿಸಿ, ಪಾಲಿಸಬೇಕು.

ಭಯವನ್ನು ಹೋಗಲಾಡಿಸಲು

ಉಗುಳ್ತ ಉಗುಳ್ತ ರೋಗ, ಹಾಡ್ತ ಹಾಡ್ತ ರಾಗ ಎಂಬ ಗಾದೆ ಮಾತಿನಂತೆ ಭಯವನ್ನು ಅಭ್ಯಾಸ ಬಲದಿಂದ ಹೋಗಲಾಡಿಸಬಹುದು. ಯಾವ ವಿಷಯದಲ್ಲಿ ಭಯವಿರುವುದೋ ಆ ವಿಷಯದ ಕುರಿತು ಆಲೋಚಿಸಿ ಭಯ ಬರದಂತೆ ಅಭ್ಯಾಸ ಮಾಡುವುದರಿಂದ ಭಯದ ಬಂಧನದಿಂದ ಪಾರಾಗಬಹುದು.

ಕೀಳರಿಮೆ ಬಿಟ್ಟರೆ ಭಯ ಕಣ್ಮರೆಯಾಗುತ್ತದೆ

ನನ್ನಿಂದ ಇದು ಸಾಧ್ಯವಿಲ್ಲ. ನನ್ನ ಕೈಯ್ಯಲ್ಲಿ ಇದು ಆಗುವುದಿಲ್ಲ ಎಂಬಿತ್ಯಾದಿ ಕೀಳರಿಮೆಗಳನ್ನು ಬಿಟ್ಟು ಮುಂದೆ ಬಂದಾಗ ಖಂಡಿತವಾಗಿಯು ಎಂತಹ ಭಯವಾದರೂ ಕಣ್ಮರೆಯಾಗುತ್ತದೆ.

ಆಸಕ್ತಿ ಕಡೆಗೆ ಗಮನ ಕೊಟ್ಟರೆ ಭಯ ಕಡಿಮೆಯಾಗುತ್ತದೆ

ಕಲಿಯುವವರೆಗೆ ಬ್ರಹ್ಮ ವಿದ್ಯೆ, ಕಲಿತ ಮೇಲೆ ಕೋತಿ ವಿದ್ಯೆ ಎಂಬ ಆಡುಮಾತಿನಂತೆ ನಮಗಿರುವ ಭಯವನ್ನು ಕಡಿಮೆ ಮಾಡಿಕೊಂಡು ಅದರ ಬಗ್ಗೆಯೇ ಆಸಕ್ತಿ ಮೂಡಿಸಿಕೊಂಡು ಮುನ್ನಡೆದರೆ ಭಯ ಹೋಗುತ್ತದೆ. ಯಾವ ವಿಷಯದ ಕುರಿತು ಆಸಕ್ತಿ ಬೆಳೆಸಿಕೊಳ್ಳುತ್ತೇವೆಯೋ ಆಗ ಶ್ರದ್ಧೆ ಮೂಡುತ್ತದೆ, ಭಯ ಹೋಗುತ್ತದೆ.

ದೃಢವಾದ ಮನಸ್ಸಿನಿಂದ ಭಯವನ್ನು ತೊರೆದು ಹಾಕಬಹುದು

ಮನಸ್ಸೇ ಎಲ್ಲದಕ್ಕೂ ಮೂಲ. ಭಯವನ್ನೇ ಮೂಲವಾಗಿಟ್ಟು ಕೊಂಡರೆ ನಿಂತಲ್ಲೇ ನಿಲ್ಲಬೇಕಾಗುತ್ತದೆ. ಭಯವನ್ನು ತೊಡೆದು ಹಾಕುವೆನೆಂಬ ದೃಢವಾದ ಮನಸ್ಸಿದ್ದರೆ ಅದರೆಡೆಗೆ ಗಮನ ಕೊಟ್ಟರೆ ಭಯವನ್ನು ತೊಡೆದು ಹಾಕಲು ಸಾಧ್ಯವಾಗುತ್ತದೆ.

ನಕರಾತ್ಮಕತೆಯನ್ನು ಕಳಚಿಕೊಳ್ಳಬೇಕು

ಭಯ ನಕರಾತ್ಮಕತೆಯನ್ನು ಹುಟ್ಟುಹಾಕುತ್ತದೆ.ನಾನು ಮಾಡಬಲ್ಲೆ ನೆಂಬ ಸಕಾರಾತ್ಮಕತೆ ಬೆಳೆಸಿಕೊಂಡಲ್ಲಿ ಎಂತಹ ಭಯವಾದರೂ ಅದನ್ನು ಭಯದ ಹಿಂದೆ ಯಶಸ್ಸು ಅಡಗಿ ನಿಂತಿರುತ್ತದೆ, ಭಯವನ್ನು ಪಕ್ಕಕ್ಕೆ ಸರಿಸಿ ನಿಂತಲ್ಲಿ ಯಶಸ್ಸು ಮುಂದೆ ಬರುತ್ತದೆ. ಹಾಗಾಗಿ ಭಯವನ್ನು ಮೆಟ್ಟಿ ನಿಲ್ಲುವ, ಯಶಸ್ಸನ್ನು ಮುಂದೆ ತರುವ ಪ್ರಯತ್ನ ಮಾಡೋಣ. ಅಂತೆಯೇ ಭಯದಿಂದಲೇ ಹಿಂಜರಿದರೆ ಯಾವ ಕಾರ್ಯಗಳು ಸಕಾರ್ಯವಾಗಲಾರವು. ಹಾಗಾಗಿ ಭಯದಿಂದ ತಗ್ಗಿ ಬಗ್ಗಿ ನಡೆದರೂ ಭಯದಿಂದಲೇ ಬದುಕು ನಾಶದತ್ತ ಮುಖ ಮಾಡಬಾರದು ಮಾನವನ ಬದುಕಿನ ಸಹಜ ಸಂಗತಿ. ಅದು ನಮ್ಮನ್ನು ಎಚ್ಚರಿಕೆಯಿಂದ ಇರಿಸಿ ಅಪಾಯಗಳಿಂದ ದೂರವಿಡುವ ರಕ್ಷಾವಾಗಿಯೂ ಕಾರ್ಯನಿರ್ವಹಿಸುತ್ತದೆ.

ಆದರೆ ಅದೇ ಭಯ ಅತಿಯಾದಾಗ ನಮ್ಮ ಚಿಂತನೆಗೆ ಬೀಗ ಹಾಕಿ, ಅವಕಾಶಗಳನ್ನು ಕಸಿದುಕೊಂಡು, ಸಾಧನೆಯ ದಾರಿಯನ್ನು ತಡೆಹಿಡಿಯುತ್ತದೆ. ಭಯಕ್ಕೆ ಶರಣಾಗುವುದಕ್ಕಿಂತ ಅದನ್ನು ಅರಿತು, ಧೈರ್ಯ ಹಾಗೂ ಆತ್ಮವಿಶ್ವಾಸದಿಂದ ಎದುರಿಸಿದಾಗ ಮಾತ್ರ ಜೀವನಕ್ಕೆ ನಿಜವಾದ ದಿಕ್ಕು ಸಿಗುತ್ತದೆ. ಭಯವನ್ನು ಜಯಿಸುವ ಪ್ರತಿ ಪ್ರಯತ್ನವೂ ವ್ಯಕ್ತಿತ್ವವನ್ನು ಬಲಪಡಿಸಿ, ಯಶಸ್ಸಿನ ಹೊಸ ದ್ವಾರಗಳನ್ನು ತೆರೆಯುತ್ತದೆ. ಆದ್ದರಿಂದ ಭಯ ಬಂಧನವಾಗಿಸದೆ, ಅನುಭವದ ಪಾಠವನ್ನಾಗಿ ಮಾಡಿಕೊಂಡು ಮುನ್ನಡೆಯುವ ಮನೋಭಾವವೇ ಮಾನವನಿಗೆ ಶ್ರೇಷ್ಠತೆ ತಂದುಕೊಡುತ್ತದೆ.

ಒಳ ಮೀಸಲಾತಿಯಲ್ಲಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹ

ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿ ಒಕ್ಕೂಟದಿಂದ ಪಂಜಿನ ಮೆರವಣಿಗೆ



ಮೈಸೂರು ವಿಶ್ವವಿದ್ಯಾನಿಲಯದ ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಬುಧವಾರ ಸಂಜೆ ಬೃಹತ್ ಪಂಜಿನ ಮೆರವಣಿಗೆ ನಡೆಸಲಾಯಿತು.

ಮೈಸೂರು,ಫೆ.18(ಪಿಎಂ)– ಒಳ ಮೀಸಲಾತಿ ಸಂಬಂಧ ಪರಿಶಿಷ್ಟ ಜಾತಿಯ ಬಲಗೈ ಸಮುದಾಯಕ್ಕೆ ಅನ್ಯಾಯವಾಗಿದೆ ಎಂದು ಆರೋಪಿ ಮೈಸೂರು ವಿವಿ ಪರಿಶಿಷ್ಟ ಜಾತಿ ಬಲಗೈ ವಿದ್ಯಾರ್ಥಿ ಒಕ್ಕೂಟದ ವತಿಯಿಂದ ಬುಧವಾರ ಸಂಜೆ ಪಂಜಿನ ಮೆರವಣಿಗೆ ನಡೆಸಲಾಯಿತು.

ಮಾನಸ ಗಂಗೋತ್ರಿಯ ಗ್ರಂಥಾಲಯ ಎದುರಿರುವ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಪ್ರತಿಮೆ ಆವರಣದಿಂದ ರಾಮಸ್ವಾಮಿ ವೃತ್ತದವರೆಗೆ ಪಂಜಿನ ಮೆರವಣಿಗೆ ನಡೆಸಿ ಒಳಮೀಸಲಾತಿಗೆ ಅನ್ವಯಿಸಿರುವ ರೋಸ್ಟರ್ ಬಿಂದುವನ್ನು ಪರಿಷ್ಕರಿಸಬೇಕು ಎಂದು ಆಗ್ರಹಿಸಲಾಯಿತು.

ಒಳಮೀಸಲಾತಿ ವರದಿಯ ಸಮಸ್ಯೆಯು ಪೂರ್ಣವಾಗಿ ಬಗೆಹರಿಯುವವರೆಗೆ ಶೈಕ್ಷಣಿಕ ಮತ್ತು ಉದ್ಯೋಗ ವಲಯಕ್ಕೆ ಅನ್ವಯಿಸುತ್ತಿರುವ ಒಳಮೀಸಲಾತಿ ಕಾರ್ಯ ಚಟುವಟಿಕೆಗಳಿಗೆ ಶೀಘ್ರವೇ ತಡೆಯಾಜ್ಞೆ ನೀಡಬೇಕು. ಹೊಸ ಜಾತಿ ಪ್ರಮಾಣ ಪತ್ರವನ್ನು ವಿತರಿಸುವುದನ್ನು ತುರ್ತಾಗಿ ನಿಲ್ಲಿಸಬೇಕು ಹಾಗೂ ಹಳೇ ಮಾದರಿ ಜಾತಿ ಪ್ರಮಾಣ ಪತ್ರವನ್ನೇ ವಿತರಿಸಬೇಕು ಎಂದು ಪ್ರತಿಭಟನಾನಿರತ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಆಗ್ರಹಿಸಿದರು.

ಒಳಮೀಸಲಾತಿಗೆ ಅನ್ವಯಿಸಿರುವ ರೋಸ್ಟರ್ ಬಿಂದುವನ್ನು ಪರಿಷ್ಕರಿಸಬೇಕು. ಗೊಂದಲಗಳು ನಿವಾರಣೆಯಾಗುವವರೆಗೆ ಹಳೇ ಮೀಸಲಾತಿ ಪದ್ಧತಿಯಡಿಯೇ ಖಾಲಿ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಬೇಕು. ಕರ್ನಾಟಕ ರಾಜ್ಯದ ಪರಿಶಿಷ್ಟ ಜಾತಿಯ 101 ಜಾತಿಗಳ ಶಿಕ್ಷಣ ಮತ್ತು ಉದ್ಯೋಗಕ್ಕೆ ಸಂಬಂಧಿಸಿದಂತೆ ನ್ಯಾ. ನಾಗಮೋಹನ್ ದಾಸ್ ಅವರು ಸಿದ್ಧಪಡಿಸಿರುವ ಸಮೀಕ್ಷೆಯ ವರದಿಯು ಅವೈಜ್ಞಾನಿಕವಾಗಿದೆ. ಈ ವರದಿಯಿಂದ ಪರಿಶಿಷ್ಟ ಜಾತಿ ಬಲಗೈ ವರ್ಗದ 19 ಜಾತಿಗಳಿಗೆ ಹಾಗೂ ಆದಿ ಆಂಧ್ರ, ಆದಿ ದ್ರಾವಿಡ ಮತ್ತು ಆದಿ ಕರ್ನಾಟಕ ಸಮುದಾಯಕ್ಕೆ ಸಾಮಾಜಿಕವಾಗಿ ಅನ್ಯಾಯವಾಗಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಲ್ಲದೆ, ಈ ವರದಿಯು ರಾಜ್ಯಪಾಲರಿಂದ ತಿರಸ್ಕೃತವಾಗಿತ್ತು. ಇದೀಗ ಸರ್ಕಾರದಿಂದ ಮತ್ತೆ ರಾಜ್ಯಪಾಲರ ಬಳಿ ಹೋಗಿದೆ. ಈ ವರದಿಗೆ ರಾಜ್ಯಪಾಲರಿಂದ ಅಂಕಿತ ಬೀಳುವ ಮುನ್ನವೇ ಹಾಗೂ ವರದಿಯಿಂದ ಯಾವುದೇ ಕಾಯ್ದೆಗಳು ರಚನೆಯಾಗುವ ಮೊದಲೇ ಹಾಗೂ ಒಳಮೀಸಲಾತಿ ಪೂರ್ಣ ಪ್ರಮಾಣದಲ್ಲಿ ಜಾರಿಯಾಗುವ ಮೊದಲು ಗೊಂದಲಗಳನ್ನು ನಿವಾರಿಸಬೇಕು. ಅವರೆಗೆ ಯಾವುದೇ ಸಂಸ್ಥೆ ಮತ್ತು ಇಲಾಖೆಗಳಿಂದಲೂ ಶೈಕ್ಷಣಿಕ ಹಾಗೂ ಔದ್ಯೋಗಿಕ ಪ್ರಕ್ರಿಯೆಗಳು ನಡೆಯದಂತೆ ಸರ್ಕಾರ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು. ಬೇಡಿಕೆ ಈಡೇರಿಸದಿದ್ದರೆ ರಾಜ್ಯಾದ್ಯಂತ ಹೋರಾಟ ತೀವ್ರಗೊಳಿಸುವ ಎಚ್ಚರಿಕೆ ನೀಡಿದರು.

ಒಕ್ಕೂಟದ ಸಂಚಾಲಕರಾದ ಲಿಂಗರಾಜು, ಕಾರ್ತಿಕ್, ಶಿವಶಂಕರ್, ವಿಶ್ವಪ್ರಸಾದ್, ಮಹೇಶ್ ಮರಳ್ಳಿ, ಪ್ರದೀಪ್ ಮಮ್ಮಡಿ, ಸಂದೇಶ್, ನಂದೀಶ್ ಗಾಗೇನಹಳ್ಳಿ, ಕೃಷ್ಣಮೂರ್ತಿ ಗಣಿಗನೂರು, ಗಜೇಂದ್ರ, ಗೌರವ ಸಲಹೆಗಾರರಾದ ಡಾ.ಬಿ.ಕೆ.ಜ್ಞಾನಪ್ರಕಾಶ್, ಮಲೆ ಮಹಾದೇವಸ್ವಾಮಿ, ಡಾ.ಕೆ.ಪಿ.ರಮೇಶ್, ಡಾ.ಎಂ.ಮನೋಜ್ ಕುಮಾರ್, ಡಾ.ಮೂರ್ತಿ, ಅತಿಥಿ ಉಪನ್ಯಾಸಕರಾದ ಡಾ.ತಿಮ್ಮಯ್ಯ, ಡಾ.ದಿಲೀಪ್ ನರಸಯ್ಯ, ಡಾ.ಅರಣ್‌ಕುಮಾರ್ ಸೇರಿದಂತೆ ವಿದ್ಯಾರ್ಥಿಗಳು ಹಾಗೂ ಸಂಶೋಧನಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಇಂದು ವಿದ್ಯುತ್ ವ್ಯತ್ಯಯ

ಮೈಸೂರು: ವಿವಿ ಮೊಹಲ್ಲಾ ಉಪ ವಿಭಾಗ ವ್ಯಾಪ್ತಿಯ 11 ಕೆ.ವಿ ಮಯೂರ ಮತ್ತು 11 ಕೆ.ವಿ ಹೊಯ್ಸಳ ವಿದ್ಯುತ್ ಮಾರ್ಗಗಳಲ್ಲಿ ತುರ್ತು ಕಾಮಗಾರಿ ನಿಮಿತ್ತ ಫೆ.19ರಂದು ಬೆಳಗ್ಗೆ 10 ಗಂಟೆಯಿಂದ ಸಂಜೆ 5ರವರೆಗೆ ಹೆಬ್ಬಾಳ್ 2ನೇ ಹಂತ, 1ರಿಂದ 8ನೇ ಕ್ರಾಸ್, ನಿಸರ್ಗ ಲೇಔಟ್, ಚಿತ್ರ ರೆಸಿಡೆನ್ಸಿ ಸುತ್ತಮುತ್ತ, ಚೆನ್ನಮ್ಮ ಸರ್ಕಲ್ ಸುತ್ತಮುತ್ತ, ಯಜಮಾನ ಸರ್ಕಲ್, ಚಿತ್ರಾ ರೆಸಿಡೆನ್ಸಿ, ಲಕ್ಷ್ಮೀಕಾಂತನಗರ ಹಾಗೂ ಸುತ್ತಮುತ್ತ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಸೆಸ್ಕ್ ಪ್ರಕಟಣೆ ತಿಳಿಸಿದೆ.

ಫೆ.21, ಹಿರಿಯ ವಿದ್ಯಾರ್ಥಿಗಳ ಸಭೆ

ಮೈಸೂರು,ಫೆ.18–ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಕನ್ನಡ ಸ್ನಾತಕೋತ್ತರ ವಿಭಾಗ ಆರಂಭವಾಗಿ ನೂರು ವರ್ಷಗಳು ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಹಿರಿಯ ವಿದ್ಯಾರ್ಥಿಗಳ ಸಭೆಯನ್ನು ಫೆ.21ರಂದು ಮಧ್ಯಾಹ್ನ 3 ಗಂಟೆಗೆ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಬಿಎಂಶ್ರೀ ಸಭಾಂಗಣದಲ್ಲಿ ಏರ್ಪಡಿಸಲಾಗಿದೆ. ಸಂಸ್ಥೆಯ ಎಲ್ಲಾ ಹಿರಿಯ–ಕಿರಿಯ ವಿದ್ಯಾರ್ಥಿಗಳು ಮತ್ತು ಗುರುಗಳನ್ನು ಒಂದೆಡೆ ಸೇರಿಸಲು 'ಹಿರಿಯ ವಿದ್ಯಾರ್ಥಿಗಳ ವೇದಿಕೆ ಕಟ್ಟುವ ಉದ್ದೇಶದಿಂದ ಹಿರಿಯ ವಿದ್ಯಾರ್ಥಿಗಳ ಸಭೆ ಕರೆಯಲಾಗಿದೆ. ಸಭೆಗೆ ಎಲ್ಲಾ ಹಿರಿಯ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರು ಭಾಗವಹಿಸಬೇಕೆಂದು ಸಂಸ್ಥೆಯ ನಿರ್ದೇಶಕರು ಪ್ರಕಟಣೆಯಲ್ಲಿ ಕೋರಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಅಖಿಲ ಭಾರತೀಯ ಅಂಚೆ ಸಾಂಸ್ಕೃತಿಕ ಸಮ್ಮೇಳನ

ವಿವಿಧ ಸ್ಪರ್ಧೆಗಳಲ್ಲಿ ಕರ್ನಾಟಕ ಅಂಚೆ ವೃತ್ತ ಚಾಂಪಿಯನ್





ಮೈಸೂರು,ಫೆ.18– ಮೈಸೂರಿನಲ್ಲಿ ನಡೆಯುತ್ತಿರುವ 38ನೇ ಅಖಿಲ ಭಾರತೀಯ ಅಂಚೆ ಸಾಂಸ್ಕೃತಿಕ ಸಮ್ಮೇಳನದ 2ನೇ ದಿನದ ಸ್ಪರ್ಧೆಗಳಲ್ಲಿ 11 ಪ್ರಥಮ, 13 ದ್ವಿತೀಯ ಮತ್ತು 2 ತೃತೀಯ ಬಹುಮಾನಗಳನ್ನು ಗಳಿಸುವ ಮೂಲಕ ಕರ್ನಾಟಕ ಅಂಚೆ ವೃತ್ತ ಮೊದಲ ಸ್ಥಾನವನ್ನು, 14 ಪ್ರಥಮ, 4 ದ್ವಿತೀಯ ಮತ್ತು 1 ತೃತೀಯ ಬಹುಮಾನಗಳನ್ನು ಪಡೆಯುವ ಮೂಲಕ ಕೇರಳ ಅಂಚೆ ವೃತ್ತ ಎರಡನೇ ಸ್ಥಾನವನ್ನು, ಒಟ್ಟು 9 ಬಹುಮಾನಗಳನ್ನು ಪಡೆಯುವ ಮೂಲಕ ಒಡಿಶಾ ಅಂಚೆ ವೃತ್ತವು 3ನೇ ಸ್ಥಾನ ಕಾಪಾಡಿಕೊಂಡಿದೆ.

ಕರ್ನಾಟಕ ಅಂಚೆ ವೃತ್ತದ ಚಾರ್ಮಿ ಎಸ್, ಕಿರಿಯರ ವಿಭಾಗದ ಕರ್ನಾಟಕ ಶೈಲಿಯ ಜಾನಪದ ಗಾಯನದಲ್ಲಿ ಪ್ರಥಮ, ಒಡಿಸ್ಸಿ ನೃತ್ಯದಲ್ಲಿ ದ್ವಿತೀಯ ಬಹುಮಾನ, ಪಲ್ಲವಿ ಎಲ್ ಕೊಡಿಯ, ಹಿರಿಯರ ವಿಭಾಗದ ಕರ್ನಾಟಕ ಮತ್ತು ಹಿಂದೂಸ್ತಾನಿ ಶೈಲಿಯ ಜಾನಪದ ಗಾಯನದಲ್ಲಿ ಪ್ರಥಮ ಮತ್ತು ತೃತೀಯ ಬಹುಮಾನ, ಶಾಂಭವಿ ದೇಸಾಯಿ ಮತ್ತು ಅವರು ಕಿರಿಯರ ವಿಭಾಗದ ಹಿಂದೂಸ್ತಾನಿ ಶೈಲಿಯ ಜಾನಪದ ಗಾಯನದಲ್ಲಿ ಪ್ರಥಮ ಬಹುಮಾನ, ಪ್ರದ್ಯುಮ್ನ ಕೌಶಿಕ್ ಸಿ.ಜಿ. ಹಿರಿಯರ ವಿಭಾಗದ ಹಿಂದೂಸ್ತಾನಿ ಶೈಲಿಯ ಪಿಟೀಲು ವಾದನದಲ್ಲಿ ಪ್ರಥಮ ಬಹುಮಾನ, ಸ್ಪರ್ಶ ಹಿರಿಯರ ವಿಭಾಗದ ಭರತ ನಾಟ್ಯದಲ್ಲಿ ಪ್ರಥಮ, ಶೃತ್ವಿ ಕಿರಿಯರ ವಿಭಾಗದ ಸಾತ್ರಿಯ ನೃತ್ಯದಲ್ಲಿ ದ್ವಿತೀಯ, ಪೂಣ್ಯಶ್ರೀ ಡಿ ಎಂ ಕಿರಿಯರ ವಿಭಾಗದ ಮೋಹಿನಿ ಅಟ್ಟಂ ನೃತ್ಯದಲ್ಲಿ ದ್ವಿತೀಯ ಸೇರಿದಂತೆ ಹಲವರು ಬಹುಮಾನಗಳನ್ನು ಪಡೆದರು.

ಕೇರಳ ಅಂಚೆ ವೃತ್ತದ ನಿರಂಜನಾ ಕೆ.ಎಸ್.ಕಿರಿಯರ ವಿಭಾಗದ ಭರತ ನಾಟ್ಯಂನಲ್ಲಿ ಪ್ರಥಮ, ದುರ್ಗಾರಾಂ ಹಿರಿಯರ ವಿಭಾಗದ ಮೋಹಿನಿ ಅಟ್ಟಂನಲ್ಲಿ ಪ್ರಥಮ, ಗೌತಮ್ ಗಣೇಶ್ ಹಿರಿಯರ ವಿಭಾಗದ ಕಥಕಳಿ ನೃತ್ಯದಲ್ಲಿ ಪ್ರಥಮ, ನಯನ ವಾಸುದೇವ್ ಎನ್. ಹಿರಿಯರ ವಿಭಾಗದ ಕರ್ನಾಟಕ ಶೈಲಿ ಜಾನಪದ ಗಾಯನದಲ್ಲಿ ದ್ವಿತೀಯ ಬಹುಮಾನ, ಕೆ.ಎನ್.ಶಿವಾನಂದನ ಕಿರಿಯರ ವಿಭಾಗದ ಕರ್ನಾಟಕ ಶೈಲಿ ಜಾನಪದ ಗಾಯನದಲ್ಲಿ ದ್ವಿತೀಯ ಬಹುಮಾನ ಪಡೆದರು.

ಒಡಿಶಾ ಅಂಚೆ ವೃತ್ತದ ಬನಶ್ರೀ ಷಡ್ಯಂಗಿ ಹಿರಿಯರ ವಿಭಾಗದ ಕರ್ನಾಟಕ ಶೈಲಿ ಜಾನಪದ ಗಾಯನದಲ್ಲಿ ದ್ವಿತೀಯ ಬಹುಮಾನ, ವಿಶೇಷ ಬಹುಮಾನವನ್ನು ಲಕ್ಷ್ಮಣ್ ದಾಸ್, ಕಿರಿಯರ ವಿಭಾಗದ ತಬಲ ವಾದನದಲ್ಲಿ ಅಮನ್ ಕುಮಾರ್ ದಾಸ್ ಪ್ರಥಮ ಬಹುಮಾನ ಹಾಗೂ ಹಿರಿಯರ ವಿಭಾಗದಲ್ಲಿ ಪಡೆದರು.

ಕರ್ನಾಟಕ ಅಂಚೆ ವೃತ್ತವು ಆಯೋಜಿಸಿರುವ ಈ ಐದು ದಿನಗಳ ಸಾಂಸ್ಕೃತಿಕ ಹಬ್ಬದಲ್ಲಿ ಭಾರತದಾದ್ಯಂತ 21 ಅಂಚೆ ವೃತ್ತಗಳ 335 ಅಂಚೆ ನೌಕರರು ಭಾಗವಹಿಸಿದ್ದು, ಅಂಚೆ ನೌಕರರಲ್ಲಿ ಸಾಂಸ್ಕೃತಿಕ ವಿನಿಮಯ ಮತ್ತು ರಾಷ್ಟ್ರೀಯ ಏಕೀಕರಣವನ್ನು ಬಲಪಡಿಸುವ ಪ್ರಮುಖ ವೇದಿಕೆಯಾಗಿದೆ.

ಕಾಂಗ್ರೆಸ್ ಸರ್ಕಾರದಲ್ಲೀಗ ಶಾಸಕರ ಪ್ರವಾಸ 'ಪ್ರತಾಪ'

ಹೈಕಮಾಂಡ್ ಸಲಹೆ ಧಿಕ್ಕರಿಸಿ ವಿದೇಶಿ ವಿಹಾರಕ್ಕೆ ಮಾರುಹೋದ 'ಜನ'ಪ್ರತಿನಿಧಿಗಳು



ಬೆಂಗಳೂರು: ಕರ್ನಾಟಕ ಕಾಂಗ್ರೆಸ್‌ನಲ್ಲಿ ಅಧಿಕಾರ ಹಸ್ತಾಂತರದ ಬಗ್ಗೆ ನಾಯಕರ ಬಹಿರಂಗ ಹೇಳಿಕೆಗಳು ಹೆಚ್ಚುತ್ತಿರುವ ನಡುವೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ಬಣದ ಹನ್ನೊಂದು ಶಾಸಕರು ವಿದೇಶ ಪ್ರವಾಸಕ್ಕೆ ತೆರಳಿದ್ದಾರೆ.

ಕಳೆದ ಮಧ್ಯರಾತ್ರಿ 12.20ರ ವೇಳೆಗೆ ಮಲೇಷಿಯನ್ ಏರ್‌ಲೈನ್ಸ್‌ನ ಎಂಹೆಚ್ 193 ವಿಮಾನದಲ್ಲಿ ಶಾಸಕರು ಹಾಗೂ ಎಂಎಲ್‌ಸಿಗಳು ವಿದೇಶಕ್ಕೆ ಹಾರಿದ್ದಾರೆ. ಮೊದಲು ಸರ್ಕಾರಿ ಪ್ರಾಯೋಜಿತ ಪ್ರವಾಸ ಎಂದು ಹೇಳಲಾಗಿತ್ತಾದರೂ ಇದೀಗ ಅವರು ಸ್ವಂತ ಖರ್ಚಿನಲ್ಲಿ ತೆರಳಿದ್ದಾರೆ ಎನ್ನಲಾಗುತ್ತಿದೆ.

ಆಸ್ಟ್ರೇಲಿಯಾಗೆ ನೇರ ವಿಮಾನ ಇಲ್ಲದ ಕಾರಣ ಟ್ರಾನ್ಸಿಟ್ ಫ್ಲೈಟ್ ಮೂಲಕ ಬೆಂಗಳೂರಿನಿಂದ ಮಲೇಷ್ಯಾ ರಾಜಧಾನಿ ಕೌಲಾಲಂಪುರಕ್ಕೆ ತೆರಳಿ, ಅಲ್ಲಿಂದ ಪ್ರಯಾಣ ಮುಂದುವರೆಸಲಿದ್ದಾರೆ. ಆಸ್ಟ್ರೇಲಿಯಾ ಹಾಗೂ ನ್ಯೂಜಿಲೆಂಡ್ ಪ್ರವಾಸ ಕೈಗೊಂಡಿರುವ ಶಾಸಕರು ಮಾರ್ಚ್ 1ರವರೆಗೆ ಅಲ್ಲಿಯೇ ಉಳಿದುಕೊಳ್ಳಲಿದ್ದಾರೆ.

ಮತ್ತೊಂದೆಡೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಪತ್ನಿ ಹಾಗೂ ಸಂಬಂಧಿಕರೊಂದಿಗೆ ಕೊಲಂಬಿಯಾಗೆ ತೆರಳಿದ್ದಾರೆ. ನಿನ್ನೆ ಬೆಳಗ್ಗೆ 7 ಸ್ನೇಹಿತರು, ಸಂಬಂಧಿಕರು, ಪತ್ನಿ ಜೊತೆ ಮಲ್ಲಿಕಾರ್ಜುನ, ಕೆಂಪೇಗೌಡ ಏರ್‌ಪೋರ್ಟ್‌ನಿಂದ ಥೈಲ್ಯಾಂಡ್‌ನ ಪುಕೆಟ್ ನಗರಕ್ಕೆ ತೆರಳಿದ್ದು, ಅಲ್ಲಿಂದ ದಕ್ಷಿಣ ಅಮೆರಿಕಾದ ಕೊಲಂಬಿಯಾಗೆ ಪ್ರಯಾಣ ಬೆಳೆಸಿದ್ದಾರೆ.

ಶಾಸಕರ ವಿದೇಶ ಪ್ರವಾಸದ ಬಗ್ಗೆ ಪ್ರತಿಕ್ರಿಯೆ ನೀಡಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಯಾರು ಸ್ಪಾನ್ಸರ್ ಮಾಡುತ್ತಿದ್ದಾರೆ ಎಂಬ ಮಾಹಿತಿ ಇಲ್ಲ ಎನ್ನುವ ಮೂಲಕ ಪರೋಕ್ಷವಾಗಿ ಅಸಮಾಧಾನ ಹೊರಹಾಕಿದ್ದಾರೆ. ಆದರೆ, ಸಚಿವ ದಿನೇಶ್ ಗುಂಡೂರಾವ್, ಸ್ಪಾನ್ಸರ್ ಎಂಬುದು ಊಹಾಪೋಹ ಎಂದಿದ್ದಾರೆ.

ವಿದೇಶಕ್ಕೆ ಹಾರಿದ ಕೈ ಶಾಸಕರು: ಜಗಳೂರು ಶಾಸಕ ದೇವೇಂದ್ರಪ್ಪ, ಚಿಕ್ಕಮಗಳೂರು ಶಾಸಕ ಹೆಚ್.ಡಿ.ತಮ್ಮಯ್ಯ, ಸಿಂಧನೂರು ಶಾಸಕ ಹಂಪನಗೌಡ ಬಾದರ್ಲಿ, ಚಾಮರಾಜನಗರ ಶಾಸಕ ಪುಟ್ಟರಂಗಶೆಟ್ಟಿ, ಸಿರಗುಪ್ಪ ಶಾಸಕ ಬಿ.ಎಂ ನಾಗರಾಜ್, ಇಂಡಿ ಶಾಸಕ ಯಶವಂತ ರಾಯಗೌಡ ಪಾಟೀಲ, ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಎಂಎಲ್‌ಸಿಗಳಾದ ಡಾ.ಡಿ.ತಿಮಯ್ಯ, ಶರಣಗೌಡ ಬಯ್ಯಾಪುರ, ವಸಂತ್ ಕುಮಾರ್, ನಾಗರಾಜ್ ಯಾದವ್ ವಿದೇಶಕ್ಕೆ ಹಾರಿದ್ದಾರೆ.

ಎರಡು ತಂಡಗಳಲ್ಲಿ ವಿದೇಶಕ್ಕೆ ಹಾರುತ್ತಿರುವ ಸುಮಾರು 20ಕ್ಕೂ ಅಧಿಕ ಶಾಸಕರ ಮೇಲೆ ಡಿ.ಕೆ.ಶಿವಕುಮಾರ್ ಬಣವೂ ಕಣ್ಣಿಡುವ ಸಾಧ್ಯತೆಯನ್ನು ಅಲ್ಲಗಳೆಯುವಂತಿಲ್ಲ. ಡಿಕೆಶಿ, ಶಾಸಕರ ಪ್ರವಾಸದ ಬಗ್ಗೆ ನನಗೆ ತಿಳಿದಿಲ್ಲ, ಯಾರು ಕಳಿಸುತ್ತಿದ್ದಾರೋ ಎಂಬುವುದು ಗೊತ್ತಿಲ್ಲ ಎಂದಿದ್ದಾರೆ. ನಾವು ಸಿಎಂಗೇ ಹೇಳಿಲ್ಲ, ಇನ್ನು ಡಿಸಿಎಂಗೆ ಹೇಳಬೇಕಾದ ಪ್ರಮೇಯವಿಲ್ಲ ಎನ್ನುವ ಧಾಟಿಯಲ್ಲಿ ಕೆಲ ಶಾಸಕರು ಪ್ರತಿಕ್ರಿಯಿಸಿದ್ದಾರೆ.

ಕೆಪಿಸಿಸಿ ಅಧ್ಯಕ್ಷ ಎಂದಾದರೂ ಪ್ರವಾಸದ ಮಾಹಿತಿ ನೀಡಬಹುದಿತ್ತು ಎಂಬ ಭಾವನೆಯಲ್ಲಿರುವ ಡಿಕೆಶಿಯೂ ವಿದೇಶದಲ್ಲಿ ಹಾರಾಡುವ ಶಾಸಕರ ಮೇಲೆ ಕಣ್ಣಿಡುತ್ತಾರೆ ಎನ್ನುವುದು ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿದೆ.

ನಾಯಕತ್ವ ಬದಲಾವಣೆ ಚರ್ಚೆಗಳು ತೀವ್ರ ಸ್ವರೂಪ ಪಡೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಶಾಸಕರ ಪ್ರವಾಸ ಸಾಕಷ್ಟು ಕುತೂಹಲಕ್ಕೆ ಎಡೆಮಾಡಿಕೊಟ್ಟಿದೆ. ಪ್ರವಾಸಕ್ಕೆ ತೆರಳುತ್ತಿರುವ ಶಾಸಕರು ಒಂದೇ ಬಣದಲ್ಲಿ ಗುರುತಿಸಿಕೊಂಡ ಹಿನ್ನೆಲೆಯಲ್ಲಿ ಈ ಚರ್ಚೆಗೆ ಮಹತ್ವ ಬಂದಿದೆ. ಈ ನಡುವೆ ಶಾಸಕರ ವಿದೇಶ ಪ್ರವಾಸಕ್ಕೆ ಯಾರು ಪ್ರಾಯೋಜಕರು ಎಂಬ ಚರ್ಚೆಯೂ ಶುರುವಾಗಿದೆ. ಪ್ರವಾಸದ ಸಂದರ್ಭದಲ್ಲಿ ಡಿನ್ನರ್, ಲಂಚ್ ಹೆಸರಿನಲ್ಲಿ ಸಭೆ, ಗೌಪ್ಯ ಮಾತುಕತೆ, ಚರ್ಚೆಗಳು ನಡೆಯಬಹುದು ಎಂಬ ಮಾತುಗಳೂ ಕೇಳಿಬರುತ್ತಿವೆ.

ಹೈಕಮಾಂಡ್ ಕಣ್ಣು

ಶಾಸಕರ ವಿದೇಶ ಪ್ರವಾಸದ ಮೇಲೆ ಹೈಕಮಾಂಡ್ ಕಣ್ಣಿಟ್ಟಿದೆ. ಈಗಾಗಲೇ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ, ಕೆಲವು ಶಾಸಕರ ಜೊತೆಗೆ ಮಾತುಕತೆ ನಡೆಸಿ ಪ್ರವಾಸದ ಉದ್ದೇಶದ ಬಗ್ಗೆ ಮಾಹಿತಿ ಪಡೆದುಕೊಂಡಿದ್ದಾರೆ. ಕೆಲವರು ಯಾವುದೇ ಗೊಂದಲ ಆಗದಿರಲೆಂದು ತಾವೇ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ. ಆದರೂ ಶಾಸಕರ ಗುಂಪು ಪ್ರವಾಸದ ಬಗ್ಗೆ ಕಾಂಗ್ರೆಸ್ ವಲಯದಲ್ಲೇ ಸಾಕಷ್ಟು ಅನುಮಾನಗಳು ವ್ಯಕ್ತವಾಗುತ್ತಿವೆ. ಇದು ವೈಯಕ್ತಿಕ ಖರ್ಚು ವೆಚ್ಚದಿಂದ ಕುಟುಂಬದ ಸದಸ್ಯರ ಜೊತೆಗಿನ ಪ್ರವಾಸ ಎಂದು ಶಾಸಕರು ಪದೇ ಪದೆ ಹೇಳಿಕೊಳ್ಳುತ್ತಿದ್ದರೂ, ಅಸಲಿ ಉದ್ದೇಶ ಏನು ಎಂಬುದು ಮಾತ್ರ ಇನ್ನೂ ಬಹಿರಂಗಗೊಂಡಿಲ್ಲ.

ಜಾತಿ ನಿಂದನೆ, ಹಲ್ಲೆಗೊಳಗಾದ ಕುಟುಂಬ ಪರ ದಲಿತ ಸಂಘಟನೆಗಳ ಜಾಥಾಗೆ ತಡೆ

ಮೈಸೂರು,ಫೆ.18(ಎಂಕೆ)–ಜಾತಿ ನಿಂದನೆ ಮತ್ತು ಹಲ್ಲೆಗೊಳಗಾದ ಕುಟುಂಬಕ್ಕೆ ಧೈರ್ಯ ತುಂಬುವ ನಿಟ್ಟಿನಲ್ಲಿ ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಿಂದ ರಾಜೇಂದ್ರನಗರ ಕುರಿಮಂಡಿಯ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದವರೆಗೆ ದಲಿತ ಸಂಘಟನೆಗಳ ಸಾಮೂಹಿಕ ನಾಯಕತ್ವದಲ್ಲಿ ಹಮ್ಮಿಕೊಂಡಿದ್ದ ಕಾಲ್ನಡಿಗೆ ಜಾಥಾ ಆರಂಭವಾಗುತ್ತಿದ್ದಂತೆ ಮಧ್ಯಪ್ರವೇಶಿಸಿದ ಪೊಲೀಸರು, ಪ್ರತಿಭಟನಾಕಾರರನ್ನು ತಡೆದ ಘಟನೆ ಬುಧವಾರ ನಡೆಯಿತು.

ಕರ್ನಾಟಕ ಭೀಮ್ ಸೇನೆ, ದಲಿತ ಪ್ಯಾಂಥರ್ಸ್ ಸೇರಿದಂತೆ ವಿವಿಧ ದಲಿತ ಸಂಘಟನೆಗಳ ಮುಖಂಡರು ಪ್ರತಿಭಟನಾ ಬ್ಯಾನರ್ ಹಿಡಿದು ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದ ಬಳಿ ಜಮಾವಣೆಯಾಗುತ್ತಿದ್ದಂತೆ ಜ್ಞಾಪನ ಪತ್ರ ಹೊರಡಿಸಿದ ಎನ್.ಆರ್.ಠಾಣೆ ಪೊಲೀಸರು, ಕುರಿಮಂಡಿಯಲ್ಲಿ ಎಲ್ಲಾ ಜನಾಂಗದವರು ವಾಸವಾಗಿದ್ದಾರೆ. ಅಲ್ಲದೆ ಸೂಕ್ಷ್ಮ ಪ್ರದೇಶವಾಗಿದ್ದು, ಕೋಮು ಗಲಭೆ ಸೃಷ್ಟಿಯಾಗುವ ಸಾಧ್ಯತೆ ಇದೆ. ಅಲ್ಲದೆ ರಸ್ತೆ ಕೂಡ ಕಿರಿದಾಗಿದ್ದು, ಸಾರ್ವಜನಿಕರಿಗೆ ತೊಂದರೆಯಾಗಲಿದೆ ಎಂದು ಪ್ರತಿಭಟನಾಕಾರರನ್ನು ವಾಪಸ್ ಕಳುಹಿಸಿದರು.

ಈ ವೇಳೆ ಸ್ಥಳದಿಂದಲೇ ದೂರವಾಣಿ ಮೂಲಕ ಪ್ರತಿಭಟನಾಕಾರರೊಂದಿಗೆ ಮಾತನಾಡಿದ ಡಿಸಿಪಿ ಸುಂದರ್‌ರಾಜ್, ಜಾತಿ ನಿಂದನೆ ಮತ್ತು ಹಲ್ಲೆಗೊಳಗಾದವರಿಗೆ ನ್ಯಾಯ ದೊರಕಿಸಿಕೊಡಲಾಗುವುದು. ಗಲಾಟೆಗೆ ಕಾರಣರಾದ ಪೊಲೀಸರನ್ನು ವಿಚಾರಣೆ ನಡೆಸಲಾಗುವುದು ಎಂದು ಭರವಸೆ ನೀಡಿದರು. ಕರ್ನಾಟಕ ಭೀಮ್ ಸೇನೆ ಕಾರ್ಯದರ್ಶಿ ಮಂಜುನಾಥ್, ದಲಿತ ಪ್ಯಾಂಥರ್ಸ್‌ನ ಕಿರಣ್‌ಕುಮಾರ್, ದಸಂಸ ಮುಖಂಡ ಶಿವರಾಜ್, ಅಶೋಕಪುರಂ ಮುಖಂಡ ಪುಟ್ಟರಾಜು ಇದ್ದರು.



ಮೈಸೂರು ಗಾಂಧಿನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಕಾಲ್ನಡಿಗೆ ಜಾಥಾ ಆರಂಭಿಸಲು ಮುಂದಾದ ದಲಿತ ಸಂಘಟನೆಗಳ ಮುಖಂಡರನ್ನು ಕಾಣಬಹುದು.

ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘಕ್ಕೆ ಅವಿರೋಧ ಆಯ್ಕೆ

ಮೈಸೂರು, ಫೆ.18–ಮೈಸೂರಿನ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಗೆ 13 ಮಂದಿ ಸದಸ್ಯರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಗೃಹ ನಿರ್ಮಾಣ ಸಹಕಾರ ಸಂಘದ ಆಡಳಿತ ಮಂಡಳಿಯ ಸದಸ್ಯರಾಗಿ ಕೆಂಪರಾಜು.ಆರ್, ಗುರುಸ್ವಾಮಿ.ಎ.ಎಸ್, ಚನ್ನಪ್ಪ, ಚನ್ನಬಸಪ್ಪ ಎ.ಎಸ್, ನಾಗರಾಜು.ಟಿ.ಎಲ್, ನಾಗೇಂದ್ರಮೂರ್ತಿ.ಎನ್, ನಂಜುಂಡಪ್ಪ.ಎಂ, ವಾಟಾಳು ಬಿ.ಆನಂದ, ಸುಬ್ಬಪ್ಪ, ಷಣ್ಮುಖ, ಎಂ.ಎಂ.ಸ್ವಾಮಿ, ಡಾ.ಮಂಜುಳ.ಬಿ.ಪಿ, ನಾಗಜ್ಯೋತಿ.ಸಿ.ಎಂ ಅವರುಗಳು ಮುಂದಿನ 5 ವರ್ಷಗಳ ಅವಧಿಗೆ ಆಯ್ಕೆಯಾಗಿದ್ದಾರೆ ಎಂದು ಸಂಘದ ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸುತ್ತೂರು ಶ್ರೀಕ್ಷೇತ್ರದಲ್ಲಿ ಸಂಭ್ರಮದ ಮಹಾಶಿವರಾತ್ರಿ



ಸುತ್ತೂರು ಶ್ರೀಕ್ಷೇತ್ರದಲ್ಲಿ ಮಹಾಶಿವರಾತ್ರಿಯ ಅಂಗವಾಗಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಹೋರಾತ್ರಿ ವಿಶೇಷ ಪೂಜೆ ಹಾಗೂ ಜಾಗರಣೆ ಕಾರ್ಯಕ್ರಮಗಳು ಸಾಂಗವಾಗಿ ಜರುಗಿದವು.

ಸುತ್ತೂರು,ಫೆ.18–ಸುತ್ತೂರು ಶ್ರೀಕ್ಷೇತ್ರದಲ್ಲಿ ಮಹಾಶಿವರಾತ್ರಿಯ ಅಂಗವಾಗಿ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ಅಹೋರಾತ್ರಿ ವಿಶೇಷ ಪೂಜೆ ಹಾಗೂ ಜಾಗರಣೆ ಕಾರ್ಯಕ್ರಮಗಳು ಸಾಂಗವಾಗಿ ಜರುಗಿದವು.

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ಸೋಮೇಶ್ವರ, ಶ್ರೀ ವೀರಭದ್ರೇಶ್ವರ, ಶ್ರೀ ನಂಜುಂಡೇಶ್ವರ, ಶ್ರೀ ನಾರಾಯಣಸ್ವಾಮಿ ದೇವಾಲಯಗಳಲ್ಲಿ ರುದ್ರಾಭಿಷೇಕ, ಅಷ್ಟೋತ್ತರ, ಮಹಾ ಮಂಗಳಾರತಿ, ಬೆಳ್ಳಿರಥ ಪ್ರಾಕಾರೋತ್ಸವ, ವಿಶೇಷ ಪೂಜೆಗಳು ನೆರವೇರಿದವು.

ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ ವಿದ್ಯಾರ್ಥಿಗಳು ಭಕ್ತಿಭಾವಭರಿತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡಿದರು. ಮೈಸೂರಿನ ಶ್ರೀಮತಿ ಜೆ.ಆರ್. ಅನುಷಾ ಮತ್ತು ತಂಡದವರು ಭಕ್ತಿ ಗಾಯನ ಕಾರ್ಯಕ್ರಮ ನಡೆಸಿಕೊಟ್ಟರು. ಮೈಸೂರಿನ ಕೃಷ್ಣಮೂರ್ತಿಪುರಂನ ಶ್ರೀ ಲಲಿತಾ ಹುಳಿಯಾರುರವರು ಶಿವಕಥೆಯನ್ನು ನಡೆಸಿಕೊಟ್ಟರು. ಚಾಮರಾಜನಗರ ಜಿಲ್ಲೆಯ ರಾಮಸಮುದ್ರ ಗ್ರಾಮದ ಶ್ರೀ ಕಾಳಪ್ಪ ಮತ್ತು ತಂಡದವರು ನೀಲಗಾರರ ಮೇಳವನ್ನು ಮತ್ತು ಹೊರಳವಾಡಿಯ ಶ್ರೀ ಬಸವೇಶ್ವರ ಭಜನಾ ತಂಡದವರು ಭಜನೆ ನಡೆಸಿಕೊಟ್ಟರು.

ಚುಂಚನಹಳ್ಳಿ, ಚಾಮರಾಜನಗರದ ಕದಳಿ ಮಹಿಳಾ ವೇದಿಕೆ, ಹೂರದಹಳ್ಳಿ, ಸೋನಹಳ್ಳಿ, ಬದನವಾಳು, ಹೂಟಗಳ್ಳಿ, ಬಸಳ್ಳಿಹುಂಡಿ, ಸೋಮೇಶ್ವರಪುರ, ಆಲಹಳ್ಳಿ, ಭೋಗಯ್ಯನಹುಂಡಿ, ಉಡಿಗಾಲ, ಗೌರೀಶಂಕರನಗರ, ನಜರ್‌ಬಾದ್, ಜೆಎಸ್‌ಎಸ್ ಬಡಾವಣೆ, ದೇವರಾಜ ಮೊಹಲ್ಲಾ ಭಜನಾ ತಂಡದವರು ಶ್ರೀಮಠ, ಶ್ರೀ ಗದ್ದುಗೆ, ಶ್ರೀ ನಾರಾಯಣಸ್ವಾಮಿ ಹಾಗೂ ಶ್ರೀ ವೀರಭದ್ರಸ್ವಾಮಿ ದೇವಸ್ಥಾನದಲ್ಲಿ ಅಖಂಡ ಭಜನೆ ನಡೆಸಿಕೊಟ್ಟರು.

ರಾತ್ರಿ 90ಕ್ಕೂ ಹೆಚ್ಚು ವಟುಗಳು ಶಿವದೀಕ್ಷೆ ಸಂಸ್ಕಾರ ಪಡೆದುಕೊಂಡರು.

ಉದಯೋನ್ಮುಖ ಪ್ರತಿಭೆಗಳಿಂದ ಸುಮಧುರ ಗೀತೆಗಳ ಗಾಯನ

ಬಿ.ಎಲ್.ಸ್ವಾಮಿ ಸ್ವರಸಂಗಮ ಸಾಂಸ್ಕೃತಿಕ ಕಲಾತಂಡದ 3ನೇ ವಾರ್ಷಿಕೋತ್ಸವ




ಬಿ.ಎಲ್.ಸ್ವಾಮಿ ಸ್ವರಸಂಗಮ ಸಾಂಸ್ಕೃತಿಕ ಕಲಾತಂಡದ 3ನೇ ವಾರ್ಷಿಕೋತ್ಸವ ಅಂಗವಾಗಿ ರಂಗಕರ್ಮಿ ಆನಂದ್, ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಸ್ವಾಮಿ, ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್.ಲಕ್ಷ್ಮಣ್, ಕವಿ ಉಷಾರಾಣಿ ಹಾಗೂ ಕಲಾಪೋಷಕ ಅಭಯ್ ಕುಮಾರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.18– ನಗರದ ಬಿ.ಎಲ್. ಸ್ವಾಮಿ ಸ್ವರಸಂಗಮ ಸಾಂಸ್ಕೃತಿಕ ಕಲಾ ತಂಡದ 3ನೇ ವಾರ್ಷಿಕೋತ್ಸವವು ನಗರದ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಭಾಂಗಣದಲ್ಲಿ ಬುಧವಾರ ನಡೆಯಿತು. ಉದಯೋನ್ಮುಖ ಪ್ರತಿಭೆಗಳು ಸುಮಧುರ ಗೀತೆಗಳ ಗಾಯನ ಪ್ರಸ್ತುತಪಡಿಸಿದರು.

ಬಸವಲಿಂಗಸ್ವಾಮಿ, ಡಾ.ರೇಖಾ ಅರುಣ್, ಗುರುರಾಜ್, ಹಿತೈಷಿ ನಾಗಶ್ರೀ, ಪ್ರೇಮ್ ನಾದಮಯ. ಸಿ.ತನುಜಾ, ಮಂಜುನಾಥಮೂರ್ತಿ, ಜಾಂಸ್ ಪೀಟರ್, ತೇಜಾವತಿ ಹಾಡಿದರು. ಮೇಘಶ್ರೀ ಕಾರ್ಯಕ್ರಮ ನಿರೂಪಿಸಿದರು.

ಕರ್ನಾಟಕ ಸುಗಮ ಸಂಗೀತ ಮೈಸೂರು ಘಟಕದ ಅಧ್ಯಕ್ಷ ನಾಗರಾಜ ಬೈರಿ ಅಧ್ಯಕ್ಷತೆ ವಹಿಸಿದ್ದರು. ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಸಮಾಜ ಸೇವಕ ಕೆ.ರಘರಾಂ ವಾಜಪೇಯಿ, ಡಾ.ರೇಖಾ ಅರುಣ್, ಪ್ರಭಾಶಾಸ್ತ್ರಿ ಜೋಸ್ಯುಲ, ನೀರಾವರಿ ಇಲಾಖೆಯ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮಂಜುನಾಥ್ ಮೂರ್ತಿ ಮುಖ್ಯ ಅತಿಥಿಗಳಾಗಿದ್ದರು. ಆಯೋಜಕ ಬಸವಲಿಂಗಸ್ವಾಮಿ ಇದ್ದರು. ಇದೇ ವೇಳೆ ಕರ್ನಾಟಕ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಶಿವಸ್ವಾಮಿ, ಕಲಾಪೋಷಕ ಅಭಯ್ ಕುಮಾರ್, ಕವಿ ಉಷಾರಾಣಿ, ರಂಗಕರ್ಮಿ ಮಂಡ್ಯ ರಮೇಶ್ ಸಹೋದರ ಆನಂದ್, ಜನಚೈತನ್ಯ ಫೌಂಡೇಷನ್ ಅಧ್ಯಕ್ಷ ಆರ್. ಲಕ್ಷ್ಮಣ್ ಅವರನ್ನು ಸನ್ಮಾನಿಸಲಾಯಿತು.

ನಾಳೆ ಮೈಸೂರಲ್ಲಿ ಸಂತ ಕವಿ ಸರ್ವಜ್ಞ ಜಯಂತಿ



ಮೈಸೂರು,ಫೆ.18–ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸಂತ ಕವಿ ಸರ್ವಜ್ಞ ಜಯಂತಿಯನ್ನು ಫೆ.20ರಂದು ಬೆಳಗ್ಗೆ 11.30 ಗಂಟೆಗೆ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಕ್ಕು ಮತ್ತು ಕೈಗಾರಿಕ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಉಪಸ್ಥಿತಿಯಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ, ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಶಾಸಕ ಕೆ.ಹರೀಶ್ ಗೌಡ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವ ಕೆ.ವೆಂಕಟೇಶ್, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ನಿಗಮದ ಅಧ್ಯಕ್ಷರು ಹಾಗೂ ಹೆಚ್.ಡಿ ಕೋಟೆ ಕ್ಷೇತ್ರದ ಶಾಸಕ ಅನಿಲ್ ಕುಮಾರ್ ಸಿ., ಹಾಗೂ ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತದ ಅಧ್ಯಕ್ಷ ಎ.ಬಿ.ರಮೇಶ್ ಬಂಡಿಸಿದ್ದೇಗೌಡ ಗೌರವ ಉಪಸ್ಥಿತರಿರಲಿದ್ದಾರೆ.

ಮುಖ್ಯ ಅತಿಥಿಗಳಾಗಿ ಮೈಸೂರು–ಕೊಡಗು ಸಂಸದ ಯದುವೀರ್ ಒಡೆಯರ್, ಚಾಮರಾಜನಗರ ಸಂಸದ ಸುನೀಲ್ ಬೋಸ್, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ.ಮಾನಸ, ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷರಾದ ರಾಮಪ್ಪ ಎಂ, ಮೈಸೂರು ಪೇಂಟ್ಸ್ ಮತ್ತು ವಾರ್ನಿಷ್ ಲಿಮಿಟೆಡ್ ಅಧ್ಯಕ್ಷರಾದ ಹೆಚ್.ಡಿ.ಗಣೇಶ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ರಂಗಸ್ವಾಮಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಕರ್ನಾಟಕ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರನಾಥ್ ಆಗಮಿಸಲಿದ್ದಾರೆ. ಶಾಸಕರಾದ ತನ್ವೀರ್‌ಸೇಠ್, ಜಿ.ಟಿ.ದೇವೇಗೌಡ, ರವಿಶಂಕರ್, ಟಿ.ಎಸ್.ಶ್ರೀವತ್ಸ, ಜಿ.ಡಿ.ಹರೀಶ್‌ಗೌಡ, ದರ್ಶನ್ ಧ್ರುವನಾರಾಯಣ್, ಹೆಚ್.ವಿಶ್ವನಾಥ್, ಡಾ.ಡಿ.ತಿಮ್ಮಯ್ಯ, ಸಿ.ಎನ್. ಮಂಜೇಗೌಡ, ಮಧು ಜಿ.ಮಾದೇಗೌಡ, ಡಾ.ಯತೀಂದ್ರ ಎಸ್, ಕೆ.ವಿವೇಕಾನಂದ, ಕೆ.ಶಿವಕುಮಾರ್ ಇತರರು ಭಾಗವಹಿಸುವರು.

ಆರ್‌ಟಿಓ ಕಚೇರಿ ಪಶ್ಚಿಮ ಸ್ಥಳಾಂತರ

ಮೈಸೂರು.ಫೆ.18–ಮೈಸೂರಿನ ಚಾಮರಾಜಪುರಂನಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿ (ಮೈಸೂರು ಪಶ್ಚಿಮ)ಯಲ್ಲಿ ನಡೆಸಲಾಗುತ್ತಿದ್ದ ಸಾರಿಗೆ, ಸಾರಿಗೇತರ ವಾಹನಗಳ ಅರ್ಹತಾ ಪತ್ರ ನವೀಕರಣ, ವಾಹನಗಳ ಹೊಸ ನೋಂದಣಿ, ವಾಹನಗಳ ತಪಾಸಣಾ ಕೇಂದ್ರವನ್ನು ಮೈಸೂರಿನ ರಾಜೀವ್ ನಗರ 3ನೇ ಹಂತದಲ್ಲಿರುವ ಆರ್‌ಟಿಓ ಪೂರ್ವ ಕಚೇರಿಯ ಪಕ್ಕದ ಕಟ್ಟಡಕ್ಕೆ ಸ್ಥಳಾಂತರಗೊಳಿಸಲಾಗುತ್ತಿದೆ.

ಪ್ರಸ್ತುತ ಮೈಸೂರಿನ ಚಾಮರಾಜಪುರಂನಲ್ಲಿರುವ ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಚೇರಿಯ (ಆರ್‌ಟಿಓ ಪಶ್ಚಿಮ) ಮುಂಭಾಗದ ರಸ್ತೆಯಲ್ಲಿ ವಾಹನಗಳ ತಪಾಸಣೆ, ನೋಂದಣಿ, ನವೀಕರಣ, ಪರಿಶೀಲನೆ ನಡೆಸಲಾಗುತಿತ್ತು. ಈ ವೇಳೆ ರಸ್ತೆಯಲ್ಲಿ ಸಂಚಾರ ದಟ್ಟಣೆ ಸಮಸ್ಯೆ ಆಗುತಿತ್ತು. ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದ ಹಿನ್ನೆಲೆಯಲ್ಲಿ, 01–03–2026ರಿಂದ ಜಾರಿಗೆ ಬರುವಂತೆ ಆರ್‌ಟಿಓ ಪಶ್ಚಿಮ ಕಚೇರಿಯಲ್ಲಿ ನಡೆಯುತ್ತಿದ್ದ ಎಲ್ಲಾ ಸಾರಿಗೆ ಮತ್ತು ಸಾರಿಗೇತರ ವಾಹನಗಳ ಅರ್ಹತಾಪತ್ರ (ಎಫ್.ಸಿ), ನೋಂದಣಿ, ತಪಾಸಣೆಯನ್ನು ರಾಜೀವ್ ನಗರ 3ನೇ ಹಂತ, ದೇವನೂರು ಎಕ್ಸ್‌ಟೆನ್ಷನ್ ಬಳಿಯ ಮೈಸೂರು ಆರ್‌ಟಿಓ ಪೂರ್ವ ಕಚೇರಿಯ ಹತ್ತಿರ ನಡೆಸಲು ಇಲಾಖೆ ತೀರ್ಮಾನಿಸಿದೆ. ಹೆಚ್ಚಿನ ಮಾಹಿತಿಗೆ ಪರಮೇಶ್ ಅವರ ದೂರವಾಣಿ 9945537375 ಮೂಲಕ ಸಂಪರ್ಕಿಸಬಹುದು ಎಂದು ಪ್ರಾದೇಶಿಕ ಸಾರಿಗೆ ಇಲಾಖೆ ಕಚೇರಿ ಪ್ರಕಟಣೆಯಲ್ಲಿ ತಿಳಿಸಿದೆ.

ಫೆ.21 ಕಿರುರಂಗಮಂದಿರದಲ್ಲಿ 'ಗಾಂಪರ ಗುಂಪು' ನಾಟಕ

ಮೈಸೂರು,ಫೆ.18(ಜಿಎ)–ಬೆಂಗಳೂರು ಪ್ಲೇಯರ್ಸ್ ಥಿಯೇಟರ್ ಅಸೋಸಿಯೇಷನ್ ವತಿಯಿಂದ ಫೆ.21ರಂದು ಕಿರು ರಂಗಮಂದಿರದಲ್ಲಿ 'ಗಾಂಪರ ಗುಂಪು' ನಾಟಕ ಪ್ರದರ್ಶನ ಆಯೋಜಿಸಲಾಗಿದೆ. ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ನಾಟಕದ ನಿರ್ದೇಶಕ ಶ್ರೀಪಾದ ಎಸ್.ಶ್ರೀವತ್ಸ ಈ ವಿಷಯ ತಿಳಿಸಿ, ಅಂದು ಸಂಜೆ 5 ಗಂಟೆ ಮತ್ತು 7 ಗಂಟೆಗೆ ನಾಟಕ ಪ್ರದರ್ಶನಗೊಳ್ಳಲಿದೆ. ಈ ನಾಟಕ ಇದಕ್ಕು ಮುನ್ನ ದೂರದರ್ಶನ, ಮೈಸೂರು ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಪ್ರದರ್ಶನಗೊಂಡಿದೆ. ಇದು ಸಾಮಾಜಿಕ ಪ್ರಸ್ತುತತೆಯೊಂದಿಗೆ ಮನಮುಟ್ಟುವ ಕಥನ, ಪ್ರಭಾವಶಾಲಿ ಅಭಿನಯಕ್ಕೆ ಖ್ಯಾತಿಯಾಗಿದೆ ಎಂದು ವಿವರಿಸಿದರು. ಸುದ್ದಿಗೋಷ್ಠಿಯಲ್ಲಿ ತಂಡದ ಚೇತನ್ ಕಿಶೋರ್, ಶ್ರೀನಿಧಿ ಉಪಸ್ಥಿತರಿದ್ದರು.

ಹಳ್ಳಿಗಳಲ್ಲಿ ಬಾಕಿಯಿರುವ ತೆರಿಗೆಯನ್ನು ಇನ್ನು 15 ದಿನದೊಳಗೆ ವಸೂಲಿ ಮಾಡಲೇಬೇಕು

ಗ್ರಾಮಾಧಿಕಾರಿಗಳಿಗೆ ಜಿಲ್ಲಾ ಪಂಚಾಯತ್ ಸಿಇಓ ಯುಕೇಶ್‌ಕುಮಾರ್ ಕಟ್ಟಾಜ್ಞೆ

- ತೆರಿಗೆ ವಸೂಲಿ ಮಾಡದ ಅಧಿಕಾರಿಗಳಿಗೆ ತೀವ್ರ ತರಾಟೆ
- ನಿರೀಕ್ಷಿತ ಗುರಿ ಸಾಧಿಸದಿದ್ದರೆ ಕಠಿಣ ಕ್ರಮದ ಎಚ್ಚರಿಕೆ
- ಇನ್ನು ಮುಂದೆ ಯಾವುದೇ ಕುಂಟು ನೆಪ ಕೇಳಲ್ಲ
- ಪಿಡಿಓಗಳು ಜವಾಬ್ದಾರಿಯಿಂದ ನುಣುಚಿಕೊಳ್ಳಬಾರದು



ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಎಸ್.ಯುಕೇಶ್ ಕುಮಾರ್ ಅವರು ತಾಲೂಕು ಪಂಚಾಯತ್ ಇಓ ಹಾಗೂ ಪಿಡಿಓಗಳ ಜೊತೆ ವೀಡಿಯೋ ಕಾನ್ಫರೆನ್ಸ್ ನಡೆಸಿದರು.

ಮೈಸೂರು,ಫೆ.18(ಬಿಎಲ್‌ಯು)–ಹಲವು ವರ್ಷಗಳಿಂದ ಹಳ್ಳಿಗಳಲ್ಲಿ ಬಾಕಿ ಉಳಿಸಿಕೊಂಡಿರುವ ತೆರಿಗೆಯನ್ನು ಇನ್ನು 15 ದಿನದೊಳಗೆ ವಸೂಲಿ ಮಾಡಬೇಕು ಎಂದು ಮೈಸೂರು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಯುಕೇಶ್‌ಕುಮಾರ್ ಗ್ರಾಮ ಪಂಚಾಯತ್ ಅಧಿಕಾರಿಗಳಿಗೆ ಕಟ್ಟಾಜ್ಞೆ ಮಾಡಿದ್ದಾರೆ.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಬುಧವಾರ ಜಿಲ್ಲೆಯ ತಾಲೂಕು ಪಂಚಾಯತ್ ಕಾರ್ಯ ನಿರ್ವಾಹಕ ಅಧಿಕಾರಿಗಳು ಹಾಗೂ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು (ಪಿಡಿಓ) ಜೊತೆ ನಡೆಸಿದ ವೀಡಿಯೋ ಕಾನ್ಫರೆನ್ಸ್ ಸಭೆಯಲ್ಲಿ ಮಾತನಾಡಿದ ಅವರು, ತೆರಿಗೆ ಬಾಕಿ ವಸೂಲಿ ಮಾಡದ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು.

ಇನ್ನು 15 ದಿನದೊಳಗೆ ಶೇಕಡ 90ರಷ್ಟು ತೆರಿಗೆ ಬಾಕಿ ವಸೂಲಿ ಮಾಡಬೇಕು. ಇದರಲ್ಲಿ ನಿರೀಕ್ಷಿತ ಗುರಿ ಸಾಧಿಸದ ಅಧಿಕಾರಿಗಳ ವಿರುದ್ಧ ಯಾವುದೇ ಮುಲಾಜಿಲ್ಲದೆ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಯುಕೇಶ್ ಕುಮಾರ್ ಎಚ್ಚರಿಕೆ ನೀಡಿದರು.

ತೆರಿಗೆ ವಸೂಲಿಯಲ್ಲಿ ನಿರೀಕ್ಷಿತ ಗುರಿ ಸಾಧಿಸದಿದ್ದರೆ ಸಿಬ್ಬಂದಿಗಳಿಗೆ ವೇತನ ನೀಡಲು ಸಾಧ್ಯವಿಲ್ಲ, ಜೊತೆಗೆ ಅಭಿವೃದ್ಧಿ ಕೂಡ ಕುಂಠಿತವಾಗುತ್ತದೆ. ಇದರಿಂದ ಹಲವು ಸಮಸ್ಯೆಗಳು ಎದುರಾಗುತ್ತವೆ. ಈ ಹಿನ್ನೆಲೆಯಲ್ಲಿ ಮನೆ ಮನೆಗೆ ತೆರಳಿ ತೆರಿಗೆ ವಸೂಲಿ ಮಾಡಬೇಕು. ಇದು ಬಿಲ್ ಕಲೆಕ್ಟರ್‌ಗಳಿಗೆ ಮಾತ್ರ ವಹಿಸಿದ ಹೊಣೆಗಾರಿಕೆ ಎಂದು ಪಿಡಿಓಗಳು ಜವಾಬ್ದಾರಿಯಿಂದ ನುಣುಚಿಕೊಳ್ಳಬಾರದು. ಈ ವಿಚಾರದಲ್ಲಿ ನಿರ್ಲಕ್ಷ್ಯ ತೋರಿದರೆ ಪಿಡಿಓಗಳ ವಿರುದ್ಧ ಕೂಡ ಕ್ರಮ ಜರುಗಿಸಲಾಗುವುದು ಎಂದು ಮತ್ತೊಮ್ಮೆ ಎಚ್ಚರಿಕೆ ನೀಡಿದರು.

ತೆರಿಗೆ ವಸೂಲಿಯಲ್ಲಿ ಕೆ.ಆರ್.ನಗರ ತಾಲೂಕಿನಲ್ಲಿ ಶೇಕಡ 49 ರಷ್ಟು ಮಾತ್ರ ಗುರಿ ಸಾಧಿಸಲಾಗಿದೆ. ಮಾವತ್ತೂರು, ಚಂದಗಾಲು ಗ್ರಾಮ ತೆರಿಗೆ ವಸೂಲಿಯಲ್ಲಿ ತುಂಬಾ ಹಿಂದಿದೆ. ಇದಕ್ಕೆ ಕಾರಣವೇನು ಎಂದು ಪ್ರಶ್ನಿಸಿ ತರಾಟೆಗೆ ತೆಗೆದುಕೊಂಡರು.

ಈ ಸಂಬಂಧ ಸಭೆ ನಡೆಸಿ ತೆರಿಗೆ ವಸೂಲಿ ಮಾಡುವಂತೆ ಎಕ್ಸಿಕ್ಯೂಟಿವ್ ಆಫೀಸರ್‌ಗಳಿಗೆ ಸೂಚನೆ ನೀಡಲಾಗಿದೆ ಎಂದು ಅಧಿಕಾರಿಗಳು ಉತ್ತರಿಸಿದರು. ಇದಕ್ಕೆ ಅಸಮಾಧಾನ ವ್ಯಕ್ತಪಡಿಸಿದ ಯುಕೇಶ್‌ಕುಮಾರ್ ಅವರು, ಸಭೆ ನಡೆಸಿ ಸೂಚನೆ ನೀಡುವುದಕ್ಕೆ ಮಾತ್ರ ನಿಮ್ಮ ಜವಾಬ್ದಾರಿ ಸೀಮಿತವಾಗಬಾರದು. ಈ ವಿಚಾರದಲ್ಲಿ ಪ್ರಗತಿ ಸಾಧಿಸಬೇಕು ಎಂದು ತಾಕೀತು ಮಾಡಿದರು.

ತಿ.ನರಸೀಪುರ ತಾಲೂಕಿನ ಹೊಳೆಸಾಲು, ಮೂಗೂರು, ಸೋಸಲೆ ಸೇರಿದಂತೆ ಇತರೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ತೆರಿಗೆ ವಸೂಲಿ ಕಡಿಮೆ ಇದೆ. ಅಲ್ಲದೆ ಇ–ಸ್ವತ್ತು ಕೂಡ ಕೆಲಸ ಮಾಡುತ್ತಿಲ್ಲ. ಹೀಗಾದರೆ ಸಿಬ್ಬಂದಿಗಳಿಗೆ ವೇತನ ನೀಡಲು ಏನು ಮಾಡುವುದು ಎಂದು ಪ್ರಶ್ನಿಸಿದ ಯುಕೇಶ್ ಕುಮಾರ್, ಇನ್ನು ಮುಂದೆ ತೆರಿಗೆ ವಸೂಲಿ ವಿಚಾರದಲ್ಲಿ ಕುಂಟು ನೆಪ ಹೇಳಿದರೆ ನಾನು ಕೇಳುವುದಿಲ್ಲ ಎಂದು ಹೇಳಿದರು.

ಹೆಚ್.ಡಿ.ಕೋಟೆ ತಾಲೂಕಿನಲ್ಲಿ ಹೆಚ್ಚಾಗಿ ಗಿರಿಜನರ ಹಾಡಿಗಳಿವೆ. ಇದರಿಂದ ತೆರಿಗೆ ವಸೂಲಿಯಲ್ಲಿ ಗುರಿ ಸಾಧಿಸಲು ಸಾಧ್ಯವಾಗುತ್ತಿಲ್ಲ ಎಂದು ಅಲ್ಲಿನ ಅಧಿಕಾರಿಗಳು ಕಾರಣ ಹೇಳಿದರು. ಅಲ್ಲಾ ರೀ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೂಡ ಗಿರಿಜನರ ಹಾಡಿಗಳು ಹೆಚ್ಚಾಗಿವೆ. ಅಲ್ಲಿ ಮಾತ್ರ ತೆರಿಗೆ ವಸೂಲಿಯಲ್ಲಿ ನಿರೀಕ್ಷಿತ ಗುರಿ ಸಾಧಿಸಿದ್ದಾರೆ, ಇಲ್ಲೇಕೆ ಸಾಧ್ಯವಾಗುತ್ತಿಲ್ಲ ಎಂದು ಪ್ರಶ್ನಿಸಿದರು.

ಜಿಪಂ ಉಪ ಕಾರ್ಯದರ್ಶಿ ಬಿ.ಎಂ. ಸವಿತಾ, ಭೀಮೇಶ್, ಮುಖ್ಯ ಯೋಜನಾಧಿಕಾರಿ ಕೆ.ಬಿ.ಪ್ರಭುಸ್ವಾಮಿ ಸಭೆಯಲ್ಲಿದ್ದರು.

ಬೇಸಿಗೆಯಲ್ಲಿ ನೀರಿನ ಸಮಸ್ಯೆ ಬಾರದಂತೆ ಮುಂಜಾಗ್ರತಾ ಕ್ರಮ ವಹಿಸಿ

ಪತ್ರಿಕೆಗಳಲ್ಲಿ ಬಂದ ನಂತರ ಕ್ರಮ ಕೈಗೊಂಡರೆ ಕಠಿಣ ಕ್ರಮ

ಬೇಸಿಗೆ ಕಾಲ ಆರಂಭವಾಗುತ್ತಿದ್ದು ಕುಡಿಯುವ ನೀರಿಗೆ ಯಾವುದೇ ತೊಂದರೆ ಆಗದಂತೆ ಎಲ್ಲಾ ರೀತಿಯ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಅದು ಬಿಟ್ಟು ಪತ್ರಿಕೆಗಳಲ್ಲಿ ಬಂದ ನಂತರ ಕ್ರಮಕ್ಕೆ ಮುಂದಾದರೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಯಕೇಶ್‌ಕುಮಾರ್ ಎಚ್ಚರಿಸಿದರು. ಕುಡಿಯುವ ನೀರಿನ ಸಮಸ್ಯೆ ಇರುವ ಸ್ಥಳಗಳನ್ನು ಮೊದಲು ಪಟ್ಟಿ ಮಾಡಿಕೊಳ್ಳಬೇಕು. ಅನುದಾನದ ಕೊರತೆ ಇದ್ದರೆ ತಾಲೂಕು ಪಂಚಾಯತ್ ಅನುದಾನ ಬಳಕೆ ಮಾಡಿಕೊಳ್ಳಬೇಕು. ಅವಶ್ಯವಿದ್ದ ಕಡೆ ಬೋರ್‌ವೆಲ್ ತೋಡಿಸಬೇಕು, ಪ್ರತಿ 15 ದಿನಕ್ಕೊಮ್ಮೆ ಕುಡಿಯುವ ನೀರಿನ ಮಾದರಿಯನ್ನು ಪರೀಕ್ಷೆಗೊಳಪಡಿಸಬೇಕು ಎಂದು ತಾಕೀತು ಮಾಡಿದರು.

ಒಟ್ಟಾರೆ ಜಿಲ್ಲಾ ವ್ಯಾಪ್ತಿಯಲ್ಲಿ ಅಧಿಕಾರಿಗಳು ಶ್ರಮ ವಹಿಸಿ ಜವಾಬ್ದಾರಿಯಿಂದ ಕೆಲಸ ಮಾಡಬೇಕೆಂದು ಯುಕೇಶ್‌ಕುಮಾರ್ ಚುರುಕು ಮುಟ್ಟಿಸಿದರು.

ಜೀತ ಪದ್ಧತಿ ಆಚರಿಸುತ್ತಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ

ಅಧಿಕಾರಿಗಳಿಗೆ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಆದೇಶ

ಮಂಡ್ಯ, ಫೆ.18– ಜೀತ ಪದ್ಧತಿಯನ್ನು ಆಚರಿಸುತ್ತಿರುವವರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಿ ಎಂದು ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಜೆ.ಎನ್.ಸುಬ್ರಹ್ಮಣ್ಯ ಅಧಿಕಾರಿಗಳಿಗೆ ಆದೇಶಿಸಿದ್ದಾರೆ.

ಜಿಲ್ಲಾ ಪಂಚಾಯತ್ ಕಾವೇರಿ ಸಭಾಂಗಣದಲ್ಲಿ ಜೀತ ಪದ್ಧತಿ ರದ್ದತಿ ಕಾಯ್ದೆ ಬಗ್ಗೆ ಆಯೋಜಿಸಲಾಗಿದ್ದ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಎಲ್ಲಿ ಬರಗಾಲ, ಪ್ರವಾಹ ಉಂಟಾಗುತ್ತದೆ ಅಲ್ಲಿ ಆಹಾರದ ಸಮಸ್ಯೆಯಿಂದ ಹಾಗೂ ಖಾಸಗಿ ಲೇವಾದೇವಿ ವ್ಯವಹಾರ ಮಾಡುವ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಜೀತ ಪದ್ಧತಿ ಜೀವಂತವಾಗಿ ಇರುವುದು ಗಮನಕ್ಕೆ ಬಂದಿದೆ. ಜೀತ ಪದ್ಧತಿ ಜೀವಂತವಾಗಿಟ್ಟವರನ್ನು ಕೃಷ್ಣನ ಜನ್ಮಸ್ಥಳಕ್ಕೆ ಕಳುಹಿಸಿದರೆ ಉಳಿದವರಿಗೆ ಎಚ್ಚರಿಕೆ ನೀಡಿದಂತಾಗುತ್ತದೆ ಎಂದರು.

ಜೀತ ಪದ್ಧತಿ ಆಚರಿಸುವವರು ಹಾಗೂ ಜೀತ ಪದ್ಧತಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರಚೋದನೆ ನೀಡುವವರ ವಿರುದ್ಧ ಯಾವುದೇ ರೀತಿಯ ದಯೆ ದಾಕ್ಷಿಣ್ಯ ಇಲ್ಲದೆ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸುವ ಮೂಲಕ ಜಾಗೃತಿ ಜೀತ ಪದ್ಧತಿ ನಿರ್ಮೂಲನೆಗೆ ಅರಿವು ಮೂಡಿಸಬೇಕು ಎಂದು ತಿಳಿಸಿದರು.



ಜೀತ ಪದ್ಧತಿ ರದ್ದತಿ ಕಾಯ್ದೆ ಕಾರ್ಯಕ್ರಮದಲ್ಲಿ ಗಣ್ಯರು ಉಪಸ್ಥಿತರಿದ್ದರು

ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧಿಕಾರಿ ಡಾ.ಕುಮಾರ ಮಾತನಾಡಿ, ಜೀತ ಪದ್ಧತಿ ನಿರ್ಮೂಲನೆ ಸಾಮಾಜಿಕ ಜವಾಬ್ದಾರಿಯಾಗಿದೆ ಈ ನಿಟ್ಟಿನಲ್ಲಿ ಎಲ್ಲರೂ ಜೀತಪದ್ಧತಿಯನ್ನು ನಿರ್ಮೂಲನೆ ಮಾಡಲು ಪಣ ತೊಡಬೇಕು. ಸ್ವಾತಂತ್ರ್ಯ ಬಂದ ನಂತರ ಭಾರತದಲ್ಲಿ ಅನಕ್ಷರತೆ, ಮೂಢ ನಂಬಿಕೆ, ಬಡತನ, ಮೌಢ್ಯತೆ ಭಾರತದಲ್ಲಿ ಹೆಚ್ಚಿತ್ತು, ಅಂತಹ ಸಂದರ್ಭದಲ್ಲಿ ಜೀತ ಪದ್ಧತಿಯೂ ಕೂಡ ಹೆಚ್ಚಿತು ಆದರೆ ಇಂದು ದೇಶದಲ್ಲಿ ಸಾಕ್ಷರತೆ ಹೆಚ್ಚಿದರೂ ಸಹ ಭಾರತದಿಂದ ಜೀತ ಪದ್ಧತಿ ನಿರ್ಮೂಲನೆಯಾಗಿಲ್ಲ ಇದು ನಾಗರೀಕ ಸಮಾಜ ತಲೆತಗ್ಗಿಸುವ ಸಂಗಾತಿಯಾಗಿದೆ ಎಂದು ಹೇಳಿದರು.

ಜೀತ ಪದ್ಧತಿಗೆ ಪರೋಕ್ಷವಾಗಿ ಪ್ರಚೋದನೆ ನೀಡುವವರ ವಿರುದ್ಧ ಅಗತ್ಯ ಕ್ರಮ ಕೈಗೊಳ್ಳಬೇಕು. ಜೀತ ಪದ್ಧತಿಯ ಕುರಿತು ಅರಿವು ಮೂಡಿಸಬೇಕು. ಒಬ್ಬ ವ್ಯಕ್ತಿಯ ಬಡತನ, ಅನಕ್ಷರತೆ ಇನ್ನೊಬ್ಬರಿಗೆ ಬಂಡವಾಳ ಆಗಬಾರದು. ಸ್ವಾತಂತ್ರ್ಯದ ನಂತರ ಬಂದ ಸರ್ಕಾರಗಳು ದೇಶದ ಜನರನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿಪಡಿಸಲು ಅನೇಕ ಯೋಜನೆಗಳನ್ನು ರೂಪಿಸಿದೆ ಎಂದು ಹೇಳಿದರು.

ಜಿ.ಪಂ. ಸಿಇಓ ಕೆ.ಆರ್.ನಂದಿನಿ ಮಾತನಾಡಿ, ಜೀತ ಪದ್ಧತಿಗೆ ಒಳಗಾದವರನ್ನು ಸಮಾಜದ ಮುಖ್ಯವಾಹಿನಿಗೆ ತರಬೇಕು ಹಾಗೂ ಆರ್ಥಿಕವಾಗಿ ಸ್ವಾವಲಂಬಿಗಳಾಗಿ ಮಾಡಬೇಕೆಂದರೆ ಮೊದಲು ಅವರಿಗೆ ಅರಿವು ಮೂಡಿಸುವ ಕೆಲಸವಾಗಬೇಕು. ಜಿಲ್ಲೆಯ ಎಲ್ಲಾ ಇಲಾಖೆಗಳ ಅಧಿಕಾರಿಗಳು ಕಾರ್ಯಪ್ರವೃತ್ತರಾಗಿ ಜಿಲ್ಲೆಯಲ್ಲಿ ಜೀತ ಪದ್ಧತಿಗೆ ಒಳಗಾದ 84ಜನರಿಗೆ ಸರ್ಕಾರಿ ಸೌಲಭ್ಯಗಳನ್ನು ತಲುಪಿಸಲು ಸಹಕರಿಸಿದ್ದರಿಂದ "ನನ್ನ ಗುರುತು" ಯೋಜನೆ ಯಶಸ್ವಿಯಾಗಿದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಂ. ಆನಂದ್ ಸಮಾಲೋಚನ ಮನಶಾಸ್ತ್ರ ತಜ್ಞರಾದ ಪ್ರಥಮ್ ಮತ್ತಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಸರ್ಕಾರದ ಅಭಿವೃದ್ಧಿ ಶೂನ್ಯ : ಶಾಸಕ ಮಂಜು ಆರೋಪ



ಕಾಂಗ್ರೆಸ್ ತೊರೆದು ಜಾ.ದಳಕ್ಕೆ ಸೇರಿದವರನ್ನು ಶಾಸಕ ಹೆಚ್.ಟಿ.ಮಂಜು ಅವರು ಪಕ್ಷದ ಶಾಲು ಮತ್ತು ಹಾರವನ್ನು ಹಾಕುವ ಮೂಲಕ ಸ್ವಾಗತಿಸಿದರು.

ಕೆ.ಆರ್.ಪೇಟೆ: ರಾಜ್ಯ ಕಾಂಗ್ರೆಸ್ ಸರ್ಕಾರವು ಅಸ್ತಿತ್ವಕ್ಕೆ ಬಂದು ಮೂರು ವರ್ಷಗಳಾಗುತ್ತಿದ್ದರೂ ಕೇವಲ ಗ್ಯಾರಂಟಿ ಯೋಜನೆಗಳಲ್ಲಿಯೇ ಮುಳುಗಿದ್ದು, ಇತರೆ ಅಭಿವೃದ್ಧಿ ಶೂನ್ಯವಾಗಿದೆ ಎಂದು ಶಾಸಕ ಹೆಚ್.ಟಿ.ಮಂಜು ಆರೋಪಿಸಿದ್ದಾರೆ.

ಪಟ್ಟಣದ ಬಸವೇಶ್ವರನಗರದಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಕಾಂಗ್ರೆಸನ್ನು ತೊರೆದು ಜೆಡಿಎಸ್‌ಗೆ ಸೇರ್ಪಡೆಯಾದವರನ್ನು ಪಕ್ಷದ ಶಾಲು ಹೊದಿಸಿ, ಬಾವುಟ ನೀಡಿ ಬರಮಾಡಿಕೊಂಡ ಸಮಾರಂಭದಲ್ಲಿ ರಾಜ್ಯ ಕಾಂಗ್ರೆಸ್ ಸರ್ಕಾರದ ಜನವಿರೋಧಿ ಆಡಳಿತವನ್ನು ತೀವ್ರವಾಗಿ ಟೀಕಿಸಿದರು.

ಕಾಂಗ್ರೆಸ್ ಪಕ್ಷವು ದಲಿತರಿಗೆ ಮೀಸಲಿಟ್ಟ ಸುಮಾರು 20ಸಾವಿರ ಕೋಟಿ ರೂ.ಗಳನ್ನು ಗ್ಯಾರಂಟಿ ಯೋಜನೆಗೆ ಬಳಸಿಕೊಂಡಿದೆ. ಗ್ರಾ.ಪಂಗಳಿಗೆ ಒಂದೇ ಒಂದು ಆಶ್ರಯ ಮನೆ ನೀಡಿಲ್ಲ. ಇದರಿಂದಾಗಿ ಸದಸ್ಯರು ಸರ್ಕಾರದ ವಿರುದ್ಧ ಹಿಡಿಶಾಪ ಹಾಕುತ್ತಿದ್ದಾರೆ ಎಂದು ಆಕ್ರೋಶಿಸಿದರು.

ಗ್ರಾಪಂಗಳಿಗೆ ಕೇಂದ್ರದ ಅನುದಾನ ಇಲ್ಲದೆ ಇದ್ದಿದ್ದರೆ ಗ್ರಾಪಂಗಳು ಬಾಗಿಲು ಮುಚ್ಚುವ ಸ್ಥಿತಿ ಉಂಟಾಗುತ್ತಿತ್ತು. ಇದನ್ನು ಮನಗಂಡು ತಾಲೂಕಿನ ಹಲವಾರು ಗ್ರಾಮಗಳಲ್ಲಿನ ಕಾಂಗ್ರೆಸ್ ಕಾರ್ಯಕರ್ತರು ಜೆಡಿಎಸ್ ಪಕ್ಷ ಸೇರ್ಪಡೆಗೆ ಮುಂದೆ ಬರುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಮ್ಮ ಶೀಳನೆರೆ ಹೋಬಳಿಯ ವಸಂತಪುರ ಗ್ರಾಮದ ಹಲವಾರು ಕಾಂಗ್ರೆಸ್ ಮುಖಂಡರು ಪಕ್ಷ ತೊರೆದು ಜೆಡಿಎಸ್ ಪಕ್ಷವನ್ನು ಸೇರ್ಪಡೆಯಾಗಿದ್ದಾರೆ ನಮ್ಮನ್ನು ನಂಬಿ ಬಂದಿರುವ ಮುಖಂಡರನ್ನು ಗೌರವಯುತವಾಗಿ ನಡೆಸಿಕೊಳ್ಳಲಾಗುವುದು ಎಂದು ಶಾಸಕರು ಭರವಸೆ ನೀಡಿದರು.

ಮುಖಂಡರಾದ ವಸಂತಪುರ ಗ್ರಾಮದ ರಮೇಶ್, ಉದ್ಯಮಿ ರಾಮಣ್ಣ, ಸತೀಶ್, ಶಿವಣ್ಣ, ಮಂಜುನಾಥ್, ಪ್ರದೀಪ್, ಮಹೇಶ್, ಕೆಂಪೇಗೌಡ, ಬೋರೇಗೌಡ, ರಮೇಶ್, ರವಿ, ಕುಮಾರ್, ಅವಿನಾಶ್, ಯೋಗೇಶ್ ಇತರರು ಪಕ್ಷಕ್ಕೆ ಸೇರ್ಪಡೆಗೊಂಡರು. ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಮಹಾ ದೇವೇಗೌಡ, ತಾಲೂಕು ರೈತ ಮೋರ್ಚಾ ಅಧ್ಯಕ್ಷ ಹೆಳವೇಗೌಡ, ಟಿಎಪಿಸಿಎಂಎಸ್ ಅಧ್ಯಕ್ಷ ಬಲದೇವ್, ನಿರ್ದೇಶಕ ಹೆಚ್.ಟಿ.ಲೋಕೇಶ್ ಉಪಸ್ಥಿತರಿದ್ದರು.

ಹೈಟೆಕ್ ಗಾರ್ಮೆಂಟ್‌ಗೆ ಭೂಮಿಪೂಜೆ



ಹೈಟೆಕ್ ದನದ ಕೊಟ್ಟಿಗೆ ನಿರ್ಮಾಣಕ್ಕೆ ಸುನೀತ ಪುಟ್ಟಣ್ಣಯ್ಯ ಚಾಲನೆ ನೀಡಿದರು.

ಪಾಂಡವಪುರ, ಫೆ.18–ರೈತನಾಯಕ ಕೆ.ಎಸ್.ಪುಟ್ಟಣ್ಣಯ್ಯ ಪುಣ್ಯಸ್ಮರಣೆಯ ಅಂಗವಾಗಿ ಪುಟ್ಟಣ್ಣಯ್ಯ ಫೌಂಡೇಷನ್ ಹಾಗೂ ಸೆಲ್ಕೋ ಫೌಂಡೇಷನ್ ಸಹಯೋಗದಲ್ಲಿ ತಾಲೂಕಿನ ಬಳೇಅತ್ತಿಗುಪ್ಪೆ ಗ್ರಾಮದಲ್ಲಿ 11ಲಕ್ಷ ವೆಚ್ಚದಲ್ಲಿ ಸೋಲಾರ್ ಆಧಾರಿತ ಹೈಟೆಕ್ ದನದಕೊಟ್ಟಿಗೆ ಹಾಗೂ ಚಿಕ್ಕಾಡೆ ಗ್ರಾಮದಲ್ಲಿ 22 ಲಕ್ಷದಲ್ಲಿ ಹೈಟೆಕ್ ಮಾದರಿ ಗಾರ್ಮೆಂಟ್ ಆಧುನೀಕರಣ ಕಾಮಗಾರಿಗೆ ರೈತನಾಯಕಿ ಸುನೀತ ಪುಟ್ಟಣ್ಣಯ್ಯ ಭೂಮಿಪೂಜೆ ನೆರವೇರಿಸಿದರು.

ರೈತರು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಬೇಕು ಎಂಬ ಉದ್ದೇಶದಿಂದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಪುಟ್ಟಣ್ಣಯ್ಯ ಫೌಂಡೇಶನ್‌ನಿಂದ ಪ್ರಾಯೋಗಿಕವಾಗಿ ಹೈಟೆಕ್ ಮಾದರಿಯಲ್ಲಿ ದನದ ಕೊಟ್ಟಿಗೆ ನಿರ್ಮಿಸಲಾಗುತ್ತಿದೆ. ಇದಕ್ಕೆ ರೈತರು ಶೇ.60 ರಷ್ಟು ಹಣ ಭರಿಸಿದರೆ ಉಳಿದ ಶೇ.40 ರಷ್ಟನ್ನು ಪುಟ್ಟಣ್ಣಯ್ಯ ಹಾಗೂ ಸೆಲ್ಕೋ ಫೌಂಡೇಶನ್‌ನಿಂದ ನೀಡಲಾಗುವುದು ಎಂದರು.

ಕಾರ್ಯಕ್ರಮದಲ್ಲಿ ಸೆಲ್ಕೋ ಫೌಂಡೇಶನ ಪ್ರೋಗ್ರಾಂ ಮ್ಯಾನೇಜರ್ ಪ್ರಕಾಶ್ ಮೇಟಿ, ಸ್ವರೂಪ್, ರಾಘವ ಪ್ರಕಾಶ್, ರಂಜಿತ್, ವಿಜಯಕುಮಾರ್, ಮುಖಂಡ ಕೆ.ಟಿ. ಗೋವಿಂದೇಗೌಡ, ಕೈಲಾಸ್, ಚಿಕ್ಕಾಡೆ ಹರೀಶ್, ವಿಜಯಕುಮಾರ್ ಹಾಜರಿದ್ದರು.

ಆ್ಯಸಿಡ್ ದಾಳಿ ನಾಟಕವಾಡಿ ಪೊಲೀಸರ ಅತಿಥಿಯಾದ ಜುವೆಲ್ಲರಿ ಮಾಲೀಕ

ಮಂಡ್ಯ, ಫೆ.18–ಯಾರೋ ದುಷ್ಕರ್ಮಿಗಳು ಮುಖಕ್ಕೆ ಆ್ಯಸಿಡ್ ದಾಳಿ ಮಾಡಿ ಚಿನ್ನಾಭರಣ ದೋಚಿದ್ದಾರೆ ಎಂದು ಜುವೆಲ್ಲರಿ ಮಾಲೀಕನೊಬ್ಬನ ಡ್ರಾಮಾ ಮಾಡಿ ಕೊನೆಗೆ ತಾನೇ ಪೊಲೀಸರ ಅತಿಥಿಯಾದ ಪ್ರಕರಣವೊಂದು ಜಿಲ್ಲೆಯಲ್ಲಿ ನಡೆದಿದೆ.

ಪಾಂಡವಪುರ ತಾಲೂಕಿನ ಕ್ಯಾತನಹಳ್ಳಿ ಗ್ರಾಮದ ಮಹಾಲಕ್ಷ್ಮಿ ಜುವೆಲ್ಲರಿ ಅಂಗಡಿ ಮಾಲೀಕ ಜಿತೇಂದ್ರ ಸಿರ್ವಿ ಸಾಲಗಾರರ ಕಾಟದಿಂದ ಪಾರಾಗಲು ತಾನೇ ಸೃಷ್ಟಿಸಿ ಕೊಂಡ ಆ್ಯಸಿಡ್ ದಾಳಿ ಕಥೆ ಆತನಿಗೆ ತಿರುಗು ಬಾಣವಾಗಿ ಪರಿಣಮಿಸಿದೆ. ಫೆ.10ರಂದು ಅಂಗಡಿಯಲ್ಲಿದ್ದಾಗ ಯಾರೋ ದುಷ್ಕರ್ಮಿ ಬಂದು ನನ್ನ ಮುಖಕ್ಕೆ ಆ್ಯಸಿಡ್ ದಾಳಿ ಮಾಡಿ ಅಂಗಡಿಯಲ್ಲಿದ್ದ 170ಗ್ರಾಂ ಚಿನ್ನಾಭರಣ ಹಾಗೂ 8 ಕೆಜಿ ಬೆಳ್ಳಿ ಆಭರಣವನ್ನು ದೋಚಿಕೊಂಡು ಹೋಗಿದ್ದಾನೆ ಎಂದು ಕ್ಯಾತನಹಳ್ಳಿ ಠಾಣೆಗೆ ದೂರು ನೀಡಿದ್ದನು. ದೂರು ದಾಖಲಿಸಿಕೊಂಡ ಪೊಲೀಸರು ತನಿಖೆ ಕೈಗೊಂಡಿದ್ದಾರೆ.



ಚಿನ್ನಕ್ಕೆ ಬಳಸುವ ರಾಸಾಯನಿಕವನ್ನು ಮುಖಕ್ಕೆ ಬಳಿದುಕೊಂಡು ಆ್ಯಸಿಡ್ ದಾಳಿ ಎಂದು ಬಿಂಬಿಸಿದ್ದನು. ತನಿಖೆ ನಡೆಸಿದ ಪೊಲೀಸರು ಜಿತೇಂದ್ರ ಸಿರ್ವಿಯನ್ನು ಕರೆದು ಆ್ಯಸಿಡ್ ದಾಳಿ ವಿಚಾರಣೆ ನಡೆಸಿದಾಗ ಸತ್ಯಾಂಶ ಹೊರಬಂದಿದೆ.


ಜಿತೇಂದ್ರ ಸಿರ್ವಿ ಮೂಲತಃ ರಾಜಸ್ಥಾನದವನಾಗಿದ್ದು, ಕೆಲಕಾಲ ಮೈಸೂರಲ್ಲಿ ವಾಸವಾಗಿದ್ದು, ಕ್ಯಾತನಹಳ್ಳಿ ಗ್ರಾಮದಲ್ಲಿ ಚಿನ್ನದ ಅಂಗಡಿ ತೆರೆದು ವ್ಯಾಪಾರ ಮಾಡಿಕೊಂಡಿದ್ದನು. ಆತ ಚಿನ್ನ ಖರೀದಿಗೆ ಪಡೆದಿದ್ದ ಸಾಲ ಹಾಗೂ ಚಿನ್ನ ಅಡವಿಟ್ಟವರಿಂದ ತಪ್ಪಿಸಿಕೊಂಡು ಕೆಲವು ದಿನಗಳ ಬಳಿಕ ಅಂಗಡಿ ಮುಚ್ಚಿಕೊಂಡು ರಾಜಸ್ಥಾನಕ್ಕೆ ತೆರಳುವ ಪ್ಲಾನ್ ಮಾಡಿದ್ದನು.

ಸಾಲಗಾರರು ಮತ್ತು ಗ್ರಾಹಕರಿಗೆ ಅಂಗಡಿಯಲ್ಲಿ ಚಿನ್ನಾಭರಣ ಕಳ್ಳತನವಾಗಿದೆ ಎಂದು ಸಬೂಬು ಹೇಳಿಕೊಂಡು ಬರುತ್ತಿದ್ದನು. ಇದೀಗ ಆತನೇ ಸೂತ್ರಧಾರನಾಗಿ ರೂಪಿಸಿಕೊಂಡಿದ್ದ ನಾಟಕಕ್ಕೆ ಪೊಲೀಸರು ಬಂಧನದ ಮೂಲಕ ತೆರೆ ಎಳೆದಿದ್ದಾರೆ

ಮೇಲುಕೋಟೆ ದೇವಾಲಯ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರ ಆಯ್ಕೆ

ಮೇಲುಕೋಟೆ, ಫೆ.18–ರಾಜ್ಯದ ಅತ್ಯಂತ ಪ್ರಸಿದ್ಧವಾದ ಶ್ರೀಚೆಲುವನಾರಾಯಣ ಸ್ವಾಮಿ ಸಮೂಹ ದೇವಾಲಯಗಳಿಗೆ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷರಾಗಿ ಸಮಾಜಸೇವಕ ಕನಗೋನಹಳ್ಳಿ ಪರಮೇಶಗೌಡ ಸರ್ವಾನುಮತದಿಂದ ಆಯ್ಕೆಯಾಗುವ ಮೂಲಕ 12 ವರ್ಷಗಳ ನಂತರ ಸಮಿತಿ ಅಸ್ತಿತ್ವಕ್ಕೆ ಬಂದಂತಾಗಿದೆ.

ವಜ್ರಾಂಗಿ ಅವ್ಯವಹಾರದ ಪ್ರಕರಣದಲ್ಲಿ ವಜಾಗೊಂಡಿದ್ದ ವ್ಯವಸ್ಥಾಪನಾ ಸಮಿತಿ 12 ವರ್ಷಗಳ ನಂತರ ಅಸ್ತಿತ್ವಕ್ಕೆ ಬಂದಂತಾಗಿದೆ. ಆಡಳಿತ ಕಚೇರಿಯಲ್ಲಿ ಸಭೆ ಸೇರಿದ್ದ ವ್ಯವಸ್ಥಾಪನಾಸಮಿತಿಯ ಸದಸ್ಯರು ದೇವಾಲಯದ ಅಭಿವೃದ್ಧಿಯ ದೃಷ್ಟಿಯಿಂದ ಶಾಸಕ ದರ್ಶನ್ ಪುಟ್ಟಣ್ಣಯ್ಯ ನೀಡಿದ ಸಲಹೆಯಂತೆ ಸಮಾಜ ಸೇವಕ ಪರಮೇಶ್‌ಗೌಡರನ್ನು ಆಯ್ಕೆ ಮಾಡಿದರು. 8 ಮಂದಿ ಸದಸ್ಯ ಬಲದ ವ್ಯವಸ್ಥಾಪನಾ ಸಮಿತಿಯ ಸಭೆಯಲ್ಲಿ ಸದಸ್ಯ ಡಾ. ವೆಂಕಟರಾಮೇಗೌಡರು ಪರಮೇಶ್ ಗೌಡರ ಹೆಸರನ್ನು ಅಧ್ಯಕ್ಷ ಸ್ಥಾನಕ್ಕೆ ಸೂಚಿಸಿದರು. ಮತ್ತೋರ್ವ ಸದಸ್ಯೆ ಮೈಸೂರಿನ ಡಾ. ಪ್ರೀತಿ ಮಹದೇವ್ ಅನುಮೋದಿಸಿ ದಾಗ ಉಳಿದ ಎಲ್ಲಾ ಸದಸ್ಯರು ಪರಮೇಶ್ ಗೌಡರ ಆಯ್ಕೆಗೆ ಸರ್ವಾನುಮತದ ಒಪ್ಪಿಗೆ ನೀಡಿದರು



ಪರಮೇಶಗೌಡ

ಅಧ್ಯಕ್ಷರ ಆಯ್ಕೆ ಸಭೆಯಲ್ಲಿ ಸದಸ್ಯರಾದ ಬಳಿಘಟ್ಟ ಗ್ರಾಮದ ವೆಂಕಟೇಶ್ ಕಾಡೇನಹಳ್ಳಿಯ ವಕೀಲರಾದ ಸತೀಶ್, ಜಕ್ಕನಹಳ್ಳಿಯ ಕೆ.ಎಚ್. ಪುಟ್ಟಸ್ವಾಮಿ, ಬ್ರಹ್ಮದೇವರಹಳ್ಳಿಯ ರಾಜು ಭಾಗವಹಿಸಿ ಪರಮೇಶಗೌಡರ ಆಯ್ಕೆಗೆ ಒಪ್ಪಿಗೆ ಸೂಚಿಸಿದರು. ಈಹಿಂದೆ ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾಗಿದ್ದ ಡಾ.ವೆಂಕಟರಾಮೇಗೌಡರು ತಮ್ಮ ನಿಲುವಿನಿಂದ ಹಿಂದೆ ಸರಿದು ತಮ್ಮ ಶಿಷ್ಯರಿಗೆ ಅವಕಾಶ ಮಾಡಿಕೊಟ್ಟಿದ್ದು ವಿಶೇಷವಾಗಿತ್ತು. ದೇವಾಲಯದ ಸಿಇಓ ಶೀಲಾ ಅಧ್ಯಕ್ಷರ ಆಯ್ಕೆ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುವುದಾಗಿ ಮಾಹಿತಿ ನೀಡಿದರು

ಒಂದನೇ ಪುಟದಿಂದ

ಸಫಾರಿ ಪುನರಾರಂಭ

ತಜ್ಞರ ಸಮಿತಿ ವರದಿ: ಜ.2ರಂದು ಮುಖ್ಯಮಂತ್ರಿಗಳ ನೇತೃತ್ವದಲ್ಲಿ ನಡೆದ ಕರ್ನಾಟಕ ವನ್ಯಜೀವಿ ಮಂಡಳಿಯ 20ನೇ ಸಭೆಯಲ್ಲಿ ಸಫಾರಿ ಪುನರಾರಂಭ ಕುರಿತು ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಅಧ್ಯಯನ ವರದಿಯ ಆಧಾರದಲ್ಲಿ ಹಂತ ಹಂತವಾಗಿ ಸಫಾರಿ ಆರಂಭಿಸುವ ನಿರ್ಧಾರ ಕೈಗೊಳ್ಳಲಾಗಿತ್ತು. ಅದರಂತೆ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ನೇತೃತ್ವದಲ್ಲಿ ಅರಣ್ಯ ಇಲಾಖೆಯ ಇತರೆ ಅಧಿಕಾರಿಗಳು, ಭಾರತೀಯ ವನ್ಯಜೀವಿ ಸಂಸ್ಥೆ, ಡೆಹ್ರಾಡೂನ್(ಡಬ್ಲ್ಯುಐಐ) ವಿಜ್ಞಾನಿ, ಭಾರತೀಯ ಅರಣ್ಯ ನಿರ್ವಹಣಾ ಸಂಸ್ಥೆ, ಭೋಪಾಲ್ (ಐಐಎಫ್‌ಎಂ) ಪ್ರಾಧ್ಯಾಪಕರನ್ನು ಒಳಗೊಂಡ ತಾಂತ್ರಿಕ ಸಮಿತಿ ರಚಿಸಲಾಗಿತ್ತು. ಈ ಸಮಿತಿ ನೀಡಿದ ಮಧ್ಯಂತರ ವರದಿಯ ಬಗ್ಗೆ ಇಂದು ಕೂಲಂಕಷವಾಗಿ ಚರ್ಚಿಸಿ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದರು.

ಸಫಾರಿ ಆದಾಯದಲ್ಲಿ ಸ್ಥಳೀಯ ಅಭಿವೃದ್ಧಿ: ಪರಿಸರ ಪ್ರವಾಸೋದ್ಯಮದ ಭಾಗವಾದ ಸಫಾರಿಯಿಂದ ಬರುವ ಒಟ್ಟು ಆದಾಯದ ಮೂರನೇ ಒಂದು ಭಾಗವನ್ನು ಅರಣ್ಯದಂಚಿನ ಗ್ರಾಮಗಳ ಸ್ಥಳೀಯ ಸಮುದಾಯದವರಿಗೆ ಕೌಶಲ್ಯ ಅಭಿವೃದ್ಧಿ, ಜಾನುವಾರುಗಳ ಮೇವು ಬೆಳೆಸಲು ಮತ್ತು ಪರಿಸರ ಅಭಿವೃದ್ಧಿ ಕಾಮಗಾರಿಗಳಿಗೆ ಬಳಸುವ ಷರತ್ತಿನೊಂದಿಗೆ ಆರಂಭಿಸಲು ಮತ್ತು ವನ್ಯಜೀವಿ–ಮಾನವ ಸಂಘರ್ಷ ತಡೆಯಲು ಸೂಕ್ತ ಸಿಬ್ಬಂದಿಯನ್ನು ಸೂಕ್ಷ್ಮ ಪ್ರದೇಶಗಳಲ್ಲಿ ನಿಯೋಜಿಸುವ ಷರತ್ತಿನೊಂದಿಗೆ ಆರಂಭಿಸಲು ಸಮ್ಮತಿಸಲಾಗಿದೆ ಎಂದು ತಿಳಿಸಿದರು.

ಜಿಪಿಎಸ್, ಡ್ಯಾಷ್ ಬೋರ್ಡ್ ಕ್ಯಾಮರಾ ಅಳವಡಿಕೆ: ಸಫಾರಿ ವಾಹನಗಳನ್ನು ಕತ್ತಲಾದ ಬಳಿಕ ಓಡಿಸುವುದು, ಹೆಚ್ಚುವರಿ ಅವಧಿಗೆ ಓಡಿಸುವುದು ಸೇರಿದಂತೆ ದುರ್ಬಳಕೆ ತಡೆಗಟ್ಟಲು ಮುಂದಿನ 2 ತಿಂಗಳೊಳಗೆ ಕಡ್ಡಾಯವಾಗಿ ಎಲ್ಲ ಸಫಾರಿ ವಾಹನಗಳಿಗೆ ಎಂಜಿನ್ ಸಂಪರ್ಕಿತ ಜಿಪಿಎಸ್ ಮತ್ತು ಡ್ಯಾಷ್ ಕ್ಯಾಮ್ ಅಳವಡಿಸಬೇಕು ಎಂದು ಸೂಚನೆ ನೀಡಲಾಗಿದೆ ಎಂದರು.

ಹಿಂದಿನ ಮುಖ್ಯ ವನ್ಯಜೀವಿ ಪರಿಪಾಲಕರು ಕಳೆದ ಡಿ.28ರಂದು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಹೆಡಿಯಾಲ, ಸರಗೂರು ಗಡಿ ಪ್ರದೇಶಗಳಲ್ಲಿ ಸ್ಥಾಪಿಸಿರುವ ಮಾನವ–ವನ್ಯಜೀವಿ ನಿರ್ವಹಣಾ ಶಿಬಿರಗಳಿಗೂ ಭೇಟಿ ನೀಡಿ ಪರಿಶೀಲಿಸಿದ್ದು, ಸಫಾರಿ ಸ್ಥಗಿತಗೊಳಿಸಿದ ಬಳಿಕ ಹೆಚ್ಚುವರಿ ಮುಂಜಾಗರೂಕತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಕಳೆದ 2 ತಿಂಗಳಲ್ಲಿ ಯಾವುದೇ ಪ್ರಮುಖ ಅಹಿತಕರ ಘಟನೆಗಳು ನಡೆಯದಿರುವ ಹಿನ್ನೆಲೆಯಲ್ಲಿ ಹಂತಹಂತವಾಗಿ ಸಫಾರಿ ಪುನಾರಂಭಿಸಬಹುದು ಎಂದು ಶಿಫಾರಸ್ಸು ಮಾಡಿದ್ದರು ಎಂದರು.

ಹುಲಿ ಹೊರಗೆ ಬರಲು ಸಫಾರಿ ಕಾರಣವಲ್ಲ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಒಟ್ಟು ವಿಸ್ತೀರ್ಣ 1036 ಚದರ ಕಿಲೋಮೀಟರ್ ಇದ್ದು, ಇದರಲ್ಲಿ ಪ್ರವಾಸೋದ್ಯಮ ವಲಯ ಕೇವಲ 80 ಚದರ ಕಿ.ಮೀ ಆಗಿದೆ. ನಾಗರಹೊಳೆಯ ಒಟ್ಟು ವಿಸ್ತೀರ್ಣ 844 ಚದರ ಕಿ.ಮಿ ಆಗಿದ್ದು, ಪರಿಸರ ಪ್ರವಾಸೋದ್ಯಮ ವಲಯ ಕೇವಲ 63 ಚದರ ಕಿ.ಮಿ ಮಾತ್ರವಿದೆ. ಹೀಗಾಗಿ ಹುಲಿಗಳು ಕಾಡಿನಿಂದ ನಾಡಿಗೆ ಬರುತ್ತಿರುವುದಕ್ಕೆ ಸಫಾರಿ ಕಾರಣ ಎಂದು ಹೇಳಲು ಯಾವುದೇ ವೈಜ್ಞಾನಿಕ ಆಧಾರ ಇಲ್ಲ ಎಂದು ಹಿರಿಯ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಶೇ.50ರಷ್ಟು ಸಫಾರಿ ವಾಹನ ಬಳಕೆ: ಬಂಡೀಪುರ, ಬಿಆರ್‌ಟಿ, ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ ಮತ್ತು ಮಲೆ ಮಹದೇಶ್ವರ ವನ್ಯಜೀವಿ ಧಾಮದಲ್ಲಿ ಮುಂಚೂಣಿ ಸಿಬ್ಬಂದಿ ಕೊರತೆ ಮತ್ತು ವಾಹನಗಳ ಅಗತ್ಯದ ಬಗ್ಗೆ ಚರ್ಚಿಸಲಾಗಿದ್ದು, ನವೆಂಬರ್ 7ಕ್ಕೆ ಮುನ್ನ ಸಫಾರಿಯಲ್ಲಿ ಬಳಕೆ ಆಗುತ್ತಿದ್ದ ವಾಹನಗಳಲ್ಲಿ ಪ್ರಥಮ ಹಂತದಲ್ಲಿ ಶೇ.50ರಷ್ಟು ವಾಹನಗಳನ್ನು ಮಾತ್ರವೇ ಬಳಕೆ ಮಾಡಲು ನಿರ್ಧರಿಸಲಾಗಿದ್ದು, ಉಳಿದ 50ರಷ್ಟು ವಾಹನ ಮತ್ತು ಸಿಬ್ಬಂದಿಯನ್ನು ಅರಣ್ಯದಂಚಿನ ಗ್ರಾಮಗಳ ಬಳಿ ಗಸ್ತು ಹೆಚ್ಚಿಸಲು ಬಳಸುವ ಮೂಲಕ ವನ್ಯ ಮೃಗಗಳು ನಾಡಿಗೆ ಬಾರದಂತೆ ತಡೆಯಲು ಸೂಚಿಸಲಾಗಿದೆ. ಬಂಡೀಪುರ ಮತ್ತು ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಕೇವಲ ಶೇ.50ರಷ್ಟು ವಾಹನ ಬಳಕೆ ಮಾಡಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಅರಣ್ಯ ಪಡೆ ಮುಖ್ಯಸ್ಥೆ ಮೀನಾಕ್ಷಿ ನೇಗಿ, ಪ್ರಧಾನ ಕಾರ್ಯದರ್ಶಿ ಮನೋಜ್ ಕುಮಾರ್, ಎಪಿಸಿಸಿಎಫ್ ಬಿಸ್ವಜಿತ್ ಮಿಶ್ರಾ ಮತ್ತಿತರರು ಪಾಲ್ಗೊಂಡಿದ್ದರು.

ಹೋರಾಟದ ಎಚ್ಚರಿಕೆ

ಸ್ವರೂಪವನ್ನು ಪಡೆದುಕೊಳ್ಳಲಿದೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಒತ್ತಡಕ್ಕೆ ಮಣಿದ ಸರ್ಕಾರ: ಅರಣ್ಯದ ಅಂಚಿನಲ್ಲಿ ವಾಸ ಮಾಡುವ ಗ್ರಾಮಗಳ ರೈತರ ಕಷ್ಟ ಅರಿತಿಲ್ಲ. ಕಾಡು ಪ್ರಾಣಿಗಳು ಜನರ ಪ್ರಾಣ ಹಾನಿ ಮಾಡುತ್ತಿದ್ದರು ಲೆಕ್ಕಿಸದೆ ಬಂಡವಾಳ ಶಾಹಿ ರೆಸಾರ್ಟ್ ಮಾಲೀಕರ ಒತ್ತಡಕ್ಕೆ ಮಣಿದು ಸಫಾರಿ ಆರಂಭಕ್ಕೆ ಸರ್ಕಾರ ಅನುಮತಿ ನೀಡಿರುವುದು ಖಂಡನೀಯ. ಕೂಡಲೇ ನಿರ್ಧಾರ ವಾಪಾಸ್ ಪಡೆಯಬೇಕು ಇಲ್ಲದಿದ್ದರೆ ರೈತ ಸಂಘಟನೆಗಳು ಬೀದಿಗೆ ಇಳಿದು ಉಗ್ರ ಹೋರಾಟ ನಡೆಸಲಾಗುವುದು ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಫಾರಿ ಭೀತಿಯಿಂದ ಕಾಡು ಪ್ರಾಣಿಗಳು ಹೊರಬಂದು ಮನುಷ್ಯರ ಮೇಲೆ ದಾಳಿ ಮಾಡುವ ಜೊತೆಗೆ, ರೈತರ ಬೆಳೆಗಳನ್ನು ನಾಶ ಮಾಡುತ್ತಿವೆ. ಇದು ಸರ್ಕಾರಕ್ಕೆ ತಿಳಿದಿದ್ದರು ಒತ್ತಡಕ್ಕೆ ಮಣಿದು ಸಫಾರಿಗೆ ಅನುಮತಿ ನೀಡಿದೆ. ಪ್ರಾಣಿಗಳ ಸಂಖ್ಯೆ ಏರಿಕೆಯಾಗಿದೆ ಕಾಡು ಪ್ರದೇಶ ಕಡಿಮೆಯಾಗಿದೆ ಎಂಬುದನ್ನ ಸರ್ಕಾರವೇ ಹೇಳುತ್ತದೆ. ಈ ರೀತಿ ಆದರೆ ಪ್ರಾಣಿಗಳ ಸ್ವೇಚ್ಛ ವರ್ತನೆಯ ಓಡಾಟಕ್ಕೆ ಕಷ್ಟವಾಗಿ ಹೊರಗೆ ಬರುತ್ತಿವೆ ಎಂಬುದನ್ನು ಸರ್ಕಾರ ಅರಿತಿದೆ. ಸರ್ಕಾರಕ್ಕೆ ಬರುವ ಆದಾಯ ಮುಖ್ಯವಾಗಬಾರದು. ಜನ ಬದುಕು ಮುಖ್ಯವಾಗಿರಬೇಕು ಎಂಬುದನ್ನು ಅರಿಯಬೇಕು ಅರಣ್ಯ ಸಚಿವರು ಯಾವುದೇ ಒತ್ತಡಕ್ಕೆ ಮಣಿಯದೆ ನಿರ್ಧಾರ ವಾಪಸ್ ಪಡೆಯಲಿ ಎಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಒತ್ತಾಯಿಸಿದ್ದಾರೆ.

ಅಶ್ವಿನ್‌ಕುಮಾರ್ ಬಂಧನ

ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಇದರನ್ವಯ ಎಫ್‌ಐಆರ್ ದಾಖಲಿಸಿದ್ದ ಪೊಲೀಸರು ತನಿಖೆ ಆರಂಭಿಸಿದ್ದರು. ಗ್ರಾಹಕರು ಚಿನ್ನಾಭರಣ ಅಡವಿಡುವಾಗ ಈತ ತೂಕ ಮಾಡಿದ ನಂತರದಲ್ಲಿ ಅವುಗಳ ಸೂಕ್ಷ್ಮವಾಗಿರುವ ಲಿಂಕ್‌ಗಳನ್ನು ಕಟ್ಟು ಮಾಡಿ ತನ್ನಲ್ಲಿಟ್ಟುಕೊಳ್ಳುತ್ತಿದ್ದ. ಈತನ ಮೇಲೆ ಅನುಮಾನಗೊಂಡು ಬ್ಯಾಂಕಿನ ಎಜಿಎಂ ಅವರು ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಾಗಿತ್ತು. ಪ್ರಕರಣ ದಾಖಲಾಗುತ್ತಿದ್ದಂತೆ ಅಶ್ವಿನ್‌ಕುಮಾರ್ ಬ್ಯಾಂಕಾಕ್‌ಗೆ ಪರಾರಿಯಾಗಿ ಅಲ್ಲಿ ತಲೆಮರೆಸಿಕೊಂಡಿದ್ದ.

ಸ್ವದೇಶಕ್ಕೆ ಮರಳಿದ ಈತನನ್ನು ಸೋಮವಾರ ಬೆಂಗಳೂರು ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಯಿತು. ವಿಮಾನ ನಿಲ್ದಾಣದ ಪೊಲೀಸರ ಸಹಕಾರದಲ್ಲಿ ಆತನನ್ನು ಬಂಧಿಸಿ, ನ್ಯಾಯಾಲಯದಲ್ಲಿ ಹಾಜರುಪಡಿಸಿ ಎರಡು ದಿನಗಳ ಕಾಲ ವಶಕ್ಕೆ ಪಡೆದಿದ್ದೆವು. ಬುಧವಾರ ಮತ್ತೆ ನ್ಯಾಯಾಲಯಕ್ಕೆ ಹಾಜರುಪಡಿಸಿದಾಗ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ವಿಜಯನಗರ ಪೊಲೀಸರು ತಿಳಿಸಿದ್ದಾರೆ.

ನೌಕರರ ಬೆಂಗಳೂರು ಚಲೋ

ಗ್ರಾಮಾಂತರ ಬಸ್ ನಿಲ್ದಾಣದಿಂದ ಸೇವೆ: ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಿಂದ ಸಾರಿಗೆ ಸಂಸ್ಥೆ ಬಸ್ ಸಂಚಾರ ಎಂದಿನಂತೆ ಮುಂದುವರೆಯಲಿದೆ. ಮೈಸೂರಿಂದ ಬೆಂಗಳೂರು, ಮಂಗಳೂರು, ಶಿವಮೊಗ್ಗ, ಮಡಿಕೇರಿ. ಹಾಸನ, ಬೀದರ್, ಗುಲ್ಬರ್ಗ ಸೇರಿದಂತೆ ರಾಜ್ಯದ ವಿವಿಧ ನಗರಗಳಿಗೆ ಬಸ್ ಸಂಚರಿಸಲಿದೆ. ಅಲ್ಲದೆ, ಕೇರಳ, ತಮಿಳುನಾಡು, ಆಂಧ್ರ, ಗೋವಾಗೆ ತೆರಳುವ ಬಸ್‌ಗಳು ಸಂಚರಿಸಲಿವೆ. ಈ ಕುರಿತು ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ಗ್ರಾಮಾಂತರ ವಿಭಾಗದಲ್ಲಿ ಒಟ್ಟು 675 ಬಸ್‌ಗಳಿದ್ದು, ಪ್ರತಿದಿನ 2300ಕ್ಕೂ ಹೆಚ್ಚು ಟ್ರಿಪ್ ಸಂಚರಿಸಲಿವೆ. 75 ಟ್ರಿಪ್ ಅಂತರ ರಾಜ್ಯಗಳ ನಗರಗಳಿಗೆ ಸಾರಿಗೆ ಬಸ್ ಸಂಚರಿಸಲಿವೆ. ಗುರುವಾರ ಬಸ್ ಸಂಚಾರದಲ್ಲಿ ಯಾವುದೇ ಅಡಚಣೆ ಯಾಗುವುದಿಲ್ಲ. ಎಲ್ಲಾ ನೌಕರರು ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾ ಗುವಂತೆ ಸೂಚನೆ ನೀಡಲಾಗಿದೆ. ಆ ಕಾರಣದಿಂದ ಎಲ್ಲಾ ಸಿಬ್ಬಂದಿಗಳು ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ಬೆಂಗಳೂರು ಚಲೋದಲ್ಲಿ ಸಾರಿಗೆ ನೌಕರರ ಸಂಘದ ಮುಖಂಡರು ಮಾತ್ರ ಪಾಲ್ಗೊಳ್ಳುತ್ತಿರುವುದಾಗಿ ತಿಳಿಸಿರುವುದರಿಂದ ಸಾರಿಗೆ ಬಸ್‌ಗಳ ಸಂಚಾರಕ್ಕೆ ಸಮಸ್ಯೆ ಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದರು.

ನಗರ ವಿಭಾಗದಲ್ಲಿ: ಮೈಸೂರು ನಗರದ ವಿವಿಧ ಬಡಾವಣೆ ಸೇರಿದಂತೆ ತಾಲೂಕಿನ ಗ್ರಾಮಗಳಿಗೆ ಸಂಚರಿಸುವ ನಗರ ವಿಭಾಗದ ಬಸ್‌ಗಳ ಸಂಚಾರ ನಾಳೆ ಎಂದಿನಂತೆ ಮುಂದುವರೆಯಲಿದೆ. ನಗರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್ ಮಾತನಾಡಿ, ನಗರ ವಿಭಾಗದ ನಾಲ್ಕು ಡಿಪೋಗಳಿಂದ 540 ಬಸ್‌ಗಳಿದ್ದು, ಪ್ರತಿದಿನ 2266 ಟ್ರಿಪ್ ಸಂಚರಿಸುತ್ತವೆ. ಈಗಾಗಲೇ ಎಲ್ಲಾ ಡಿಪೋಗಳಲ್ಲೂ ಸಂಸ್ಥೆಯ ಚಾಲಕರು, ನಿರ್ವಾಹಕರೊಂದಿಗೆ ಮಾತನಾಡಿದ್ದು, ಕರ್ತವ್ಯಕ್ಕೆ ಹಾಜರಾಗುವಂತೆ ಕೋರಲಾಗಿದೆ. ಅದಕ್ಕೆ ಎಲ್ಲಾ ಸಿಬ್ಬಂದಿ ಸ್ಪಂದಿಸಿದ್ದು, ಗುರುವಾರ ಕರ್ತವ್ಯಕ್ಕೆ ಹಾಜರಾಗಲಿದ್ದಾರೆ. ಅಲ್ಲದೆ, ಮುಂಜಾಗ್ರತಾ ಕ್ರಮವಾಗಿ ಸಾರಿಗೆ ಬಸ್‌ಗಳ ಸುಗಮ ಸಂಚಾರಕ್ಕೆ ಭದ್ರತೆ ಒದಗಿಸುವಂತೆ ಪೊಲೀಸರಿಗೆ ಪತ್ರ ಬರೆಯಲಾಗಿದೆ ಎಂದರು.

ಜಿಪ್‌ಲೈನ್ ನಿರ್ಮಾಣ

ಜಿಪ್‌ಲೈನ್ ಲಲಿತಮಹಲ್ ರಸ್ತೆಗೆ ಹೊಂದಿಕೊಂಡಂತೆ ಕಾರಂಜಿಕೆರೆಯ ಮುಖ್ಯ ದ್ವಾರದ ಬಳಿ ಕೊನೆಗೊಳ್ಳಲಿದೆ. ಕೆರೆ ಮಧ್ಯೆ 18 ಮೀಟರ್ ಎತ್ತರದಲ್ಲಿ ರೋಪ್ ಅಳವಡಿಸಲಾಗುತ್ತದೆ. ಇದರಿಂದ ಸಾಹಸಿ ಪ್ರವಾಸಿಗರಿಗೆ ಒಳ್ಳೆ ಅನುಭವ ನೀಡಲಿದೆ.

ವರ್ಷಾಂತ್ಯಕ್ಕೆ ಪೂರ್ಣ: ಕೇಂದ್ರ ಸರ್ಕಾರದ ಸ್ವದೇಶಿ ದರ್ಶನ್ ಯೋಜನೆಯಡಿ ಜಿಪ್‌ಲೈನ್ ನಿರ್ಮಾಣ ಕಾಮಗಾರಿಯ ಗುತ್ತಿಗೆಯನ್ನು ಬೆಂಗಳೂರು ಮೂಲದ ಕಂಪನಿಯೊಂದು ಪಡೆದು ಕೆಲಸ ಆರಂಭಿಸಿದೆ. 9 ತಿಂಗಳೊಳಗಾಗಿ ಜಿಪ್‌ಲೈನ್ ಅಳವಡಿಕೆ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಕಾಮಗಾರಿಯ ಗುಣಮಟ್ಟ ಪರಿಶೀಲಿಸಲು ಪ್ರವಾಸೋದ್ಯಮ ಇಲಾಖೆ ಅಧಿಕಾರಿಗಳಿಂದ ಮೇಲ್ವಿಚಾರಣೆ ನಡೆಸಲಾಗುತ್ತಿದ್ದು, ನಿಗದಿತ ಸಮಯದೊಳಗೆ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚನೆ ನೀಡಲಾಗಿದೆ.

ಯಾವುದೇ ಅಡೆ–ತಡೆಯಿಲ್ಲದೆ ಕಾಮಗಾರಿ ಪೂರ್ಣಗೊಂಡರೆ ವರ್ಷಾಂತ್ಯದ ವೇಳೆಗೆ ಜಿಪ್‌ಲೈನ್ ಪ್ರವಾಸಿಗರ ಬಳಕೆಗೆ ಲಭ್ಯವಾಗಲಿದೆ. ಇಷ್ಟು ದೊಡ್ಡ ಜಿಪ್‌ಲೈನ್ ಸುತ್ತಮುತ್ತಲಿನ ಜಿಲ್ಲೆಗಳಲ್ಲಿ ಇಲ್ಲದ ಕಾರಣ, ಮೈಸೂರಿನ ಕಾರಂಜಿಕೆರೆಯ ಜಿಪ್‌ಲೈನ್‌ಗೆ ಬೇಡಿಕೆ ಹೆಚ್ಚಾಗುವ ಸಾಧ್ಯತೆ ಇದೆ.

ಜೀವ ವೈವಿಧ್ಯತೆ: ಕಾರಂಜಿಕೆರೆ ಜೀವವೈವಿಧ್ಯತೆ ಹೊಂದಿರುವ ನೈಸರ್ಗಿಕ ತಾಣವಾಗಿದೆ. ಪ್ರಸ್ತುತ ಕೆರೆ ಪರಿಸರದಲ್ಲಿ ವಿವಿಧ ಬಗೆಯ ಪಕ್ಷಿ ಸಂಕುಲ, ವಿವಿಧ ಬಗೆಯ ಚಿಟ್ಟೆ ಸಂತತಿ, ದೋಣಿ ವಿಹಾರವೂ ಲಭ್ಯವಿದೆ. ಇದೀಗ ಜಿಪ್‌ಲೈನ್ ಮೂಲಕ ರೋಪ್‌ನಲ್ಲಿ ಕೆರೆ ಪರಿಸರ ವೀಕ್ಷಣೆಯ ಸದವಕಾಶವೂ ದೊರೆಯುತ್ತಿರುವುದರಿಂದ ಮೈಸೂರಿನ ಪ್ರವಾಸೋದ್ಯಮಕ್ಕೆ ಮತ್ತೊಂದು ಗರಿ ಸೇರಿದಂತಾಗಲಿದೆ.

ಕಳೆದ ವರ್ಷ 18 ಕೋಟಿಯ ಯೋಜನೆ ನಿರಾಕರಿಸಿದ್ದ ಮೃಗಾಲಯ

ಕಳೆದ ವರ್ಷ ಪ್ರವಾಸೋದ್ಯಮ ಇಲಾಖೆ ಕಾರಂಜಿಕೆರೆಯಲ್ಲಿ 18 ಕೋಟಿ ರೂ. ವೆಚ್ಚದಲ್ಲಿ ಜಿಪ್‌ಲೈನ್, ಫ್ಲೈಓವರ್ ಫುಟ್‌ಪಾತ್, ಕಾರಂಜಿಕೆರೆಯಿಂದ ಮೃಗಾಲಯಕ್ಕೆ ಆಂತರಿಕ ಸಂಪರ್ಕ ಮಾರ್ಗ ಸೇರಿದಂತೆ ಇನ್ನಿತರ ಅಭಿವೃದ್ಧಿ ಕಾಮಗಾರಿಗೆ ನೀಲನಕ್ಷೆ ತಯಾರಿಸಿ ಯೋಜನೆ ಅನುಷ್ಠಾನಕ್ಕೆ ಮುಂದಾಗಿತ್ತು. ಆದರೆ, ಆ 18 ಕೋಟಿ ರೂ. ಯೋಜನೆಯನ್ನು ಈ ಹಿಂದೆ ಮೈಸೂರು ಮೃಗಾಲಯ ತಿರಸ್ಕರಿಸಿ, ಅದರ ಬದಲು ಹಲವು ವರ್ಷದಿಂದ ನೆನೆಗುದಿಗೆ ಬಿದ್ದಿರುವ ಅಕ್ವೇರಿಯಂ ಕಾಮಗಾರಿ ಪೂರ್ಣಗೊಳಿಸಲು ಆರ್ಥಿಕ ನೆರವು ನೀಡುವಂತೆ ಕೋರಿತ್ತು.

ಡಿಸಿಎಂ ಡಿಕೆಶಿ ಮತ್ತೆ ದೆಹಲಿ ಪ್ರವಾಸ

- ಮೂರು ದಿನ ರಾಜಧಾನಿಯಲ್ಲೇ ಬಿಡಾರ
- ಕಾವೇರುತ್ತಿದೆ ಕಾಂಗ್ರೆಸ್ ಒಳ ಬೇಗುದಿ!!



ಬೆಂಗಳೂರು, ಫೆ.18(ಕೆಎಂಶಿ)– ಅಧಿಕಾರ ಹಂಚಿಕೆ ಗೊಂದಲ ಬಗೆಹರಿಯದ ಹಿನ್ನೆಲೆಯಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತೆ ದೆಹಲಿ ಪ್ರವಾಸ ಕೈಗೊಂಡಿದ್ದಾರೆ.

ಅಸ್ಸಾಂ ವಿಧಾನಸಭಾ ಚುನಾವಣಾ ತಂತ್ರಗಾರಿಕೆ ಕುರಿತು ಪಕ್ಷದ ಸಭೆಯಲ್ಲಿ ಭಾಗವಹಿಸಲು ಗುರುವಾರ ದೆಹಲಿಗೆ ತೆರಳಲಿರುವ ಶಿವಕುಮಾರ್ ಮೂರು ದಿನ ಅಲ್ಲಿಯೇ ಬಿಡಾರ ಹೂಡಲಿದ್ದಾರೆ. ಚುನಾವಣೆಗೆ ಸಂಬಂಧಿಸಿದಂತೆ ಇಂದೇ ದೆಹಲಿಗೆ ತೆರಳಬೇಕಿತ್ತು. ಆದರೆ, ಇದರಿಂದ ದೂರ ಉಳಿಯುವ ಪ್ರಯತ್ನ ಮಾಡಿದ್ದರು.

ಪಕ್ಷದ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಉಪಮುಖ್ಯಮಂತ್ರಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ ದೆಹಲಿಗೆ ಬರುವಂತೆ ಆಹ್ವಾನ ನೀಡಿದ ನಂತರ ತಮ್ಮ ನಿಲುವು ಬದಲಿಸಿದ ಶಿವಕುಮಾರ್ ನಾಳೆಯಿಂದ ಪ್ರವಾಸ ಕೈಗೊಳ್ಳಲಿದ್ದಾರೆ. ಚುನಾವಣಾ ಕಾರ್ಯಗಳಿಗೆ ಸಂಬಂಧಿಸಿದಂತೆ 10–12 ದಿನಗಳ ಹಿಂದೆ ದೆಹಲಿ ಸಭೆಯಲ್ಲಿ ಭಾಗವಹಿಸಲು ತೆರಳಿದ್ದ ಅವರು, ಅಧಿಕಾರ ಹಂಚಿಕೆಗೆ ಸಂಬಂಧಿಸಿದಂತೆ ಸ್ಪಷ್ಟ ನಿರ್ಣಯ ಕೈಗೊಳ್ಳುವಂತೆ ಪಕ್ಷದ ಹಿರಿಯ ನಾಯಕರಾದ ಸೋನಿಯಾ ಗಾಂಧಿ ಮತ್ತು ರಾಹುಲ್ ಗಾಂಧಿ ಅವರುಗಳಿಗೆ ಮನವಿ ಮಾಡಿಕೊಂಡಿದ್ದರು.

ಇದಕ್ಕೆ ಸ್ಪಂದಿಸಿದ್ದ ರಾಹುಲ್ ಎರಡು–ಮೂರು ದಿನದಲ್ಲಿ ಮುಖ್ಯಮಂತ್ರಿ ಹಾಗೂ ತಮ್ಮನ್ನು ದೆಹಲಿಗೆ ಕರೆಸುವುದಾಗಿ ಆಶ್ವಾಸನೆ ನೀಡಿದ್ದರು. ರಾಹುಲ್ ಆಶ್ವಾಸನೆ ನಂತರವೂ ಮುಖ್ಯಮಂತ್ರಿಯನ್ನಾಗಲಿ, ತಮ್ಮನ್ನಾಗಲಿ ಮಾತುಕತೆಗೆ ಕರೆಸದಿರುವುದರಿಂದ ಶಿವಕುಮಾರ್ ಕೆರಳಿದ್ದಾರೆ.

ಇದೇ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಬೆಂಬಲಿಗ ಶಾಸಕರನ್ನು ವಿದೇಶ ಪ್ರವಾಸಕ್ಕೆ ಹಂತ ಹಂತವಾಗಿ ಕಳುಹಿಸಿ ವರಿಷ್ಠರ ಮೇಲೆ ಒತ್ತಡ ಹೇರುತ್ತಿದ್ದಾರೆ ಎಂಬ ಭಾವನೆ ಮೂಡಿದೆ. ಬಜೆಟ್ ಅಧಿವೇಶನಕ್ಕೂ ಮುನ್ನವೇ ಅಧಿಕಾರ ಪಡೆಯಲೇಬೇಕೆಂಬ ಪಟ್ಟು ಹಿಡಿದಿರುವ ಶಿವಕುಮಾರ್ ಈ ಬಾರಿ ವರಿಷ್ಠರಿಂದ ಸ್ಪಷ್ಟ ಸಂದೇಶ ದೊರೆಯದಿದ್ದರೆ, ಸಿದ್ದರಾಮಯ್ಯ ಹಾದಿಯನ್ನೇ ತಾವೂ ತುಳಿಯಲು ಹೊರಟಿದ್ದಾರೆ ಎಂದು ಅವರ ಆಪ್ತ ವಲಯಗಳು ತಿಳಿಸಿವೆ.

ಬ್ಲಾಕ್‌ಮೇಲ್‌ಗೆ ಬಗ್ಗಲ್ಲ: ಶಾಸಕರ ಮನೆ ಮುಂದೆ ಕಸ ಸುರಿಸುತ್ತೇನೆ

ಕಸ ವಿಲೇವಾರಿ ಸಂಬಂಧ ಬಿಜೆಪಿ ಶಾಸಕರೊಂದಿಗೆ ಸ್ವಪಕ್ಷೀಯರಿಗೂ ಎಚ್ಚರಿಕೆ ಕೊಟ್ಟರೆ ಡಿಸಿಎಂ!

ಬೆಂಗಳೂರು, ಫೆ.18(ಕೆಎಂಶಿ)–ವಿಧಾನಸಭಾ ಸದಸ್ಯರ ಬ್ಲಾಕ್ ಮೇಲ್‌ಗಳಿಗೆ ಬಗ್ಗುವುದಿಲ್ಲ. ಗೌರವದಿಂದ ಇದ್ದರೆ ಸರಿ ಎನ್ನುವ ಮೂಲಕ ವರಿಷ್ಠರ ಆದೇಶ ಉಲ್ಲಂಘಿಸಿ ವಿದೇಶ ಪ್ರವಾಸ ಕೈಗೊಂಡಿರುವ ಶಾಸಕರೂ ಸೇರಿದಂತೆ ಎಲ್ಲ ಶಾಸಕರಿಗೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಇಂದಿಲ್ಲಿ ಪರೋಕ್ಷ ಎಚ್ಚರಿಕೆ ನೀಡಿದ್ದಾರೆ.

ಬೆಂಗಳೂರಿನ ಕಸ ವಿಲೇವಾರಿ ಸಮಸ್ಯೆಗೆ ಸಂಬಂಧಿಸಿದಂತೆ, ಶಾಸಕರ ಬ್ಲಾಕ್‌ಮೇಲ್‌ಗೆ ಹೆದರಲ್ಲ, ಗೌರವದಿಂದ ಇರದಿದ್ದರೆ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದು ಎಚ್ಚರಿಸಿದ್ದಾರೆ. ಪ್ರಾರಂಭದಲ್ಲಿ ಶಾಸಕರಿಗೆ ಎಚ್ಚರಿಕೆ ನೀಡಿದ ಶಿವಕುಮಾರ್, ನಂತರ ಬೆಂಗಳೂರಿನ ಕಸ ವಿಲೇವಾರಿ ವಿಷಯದಲ್ಲಿ ಬಿಜೆಪಿ ಶಾಸಕರಾದ ಅರವಿಂದ ಲಿಂಬಾವಳಿ, ಧೀರಜ್ ಮುನಿರಾಜು ಸೇರಿದಂತೆ ಕೆಲವರು ಕಸ ವಿಲೇವಾರಿಗೆ ಅಡ್ಡಿ ಮಾಡುತ್ತಿದ್ದಾರೆ.

ಎಲ್ಲಾ ಎಂಎಲ್‌ಎಗಳ ಬೆದರಿಕೆಗೆ ಜಗ್ಗಲ್ಲ, ಕಸವನ್ನು ಇವರುಗಳ ಮನೆ ಮುಂದೆ ಸುರಿಸುತ್ತೇನೆ. ಹಿಂದೆ ಇಲ್ಲದ್ದು ಈಗೇತಕ್ಕೆ, ಕ್ಷೇತ್ರಗಳಿಗೆ ಅನುದಾನ ದೊರೆತಿಲ್ಲ ಎಂದು ಈ ರೀತಿ ಸಿಟ್ಟು ಮತ್ತು ಸೇಡು ತೀರಿಸಿಕೊಳ್ಳಲು ಹೊರಟಿದ್ದಾರೆ. ಇದಕ್ಕೆಲ್ಲಾ ಶಿವಕುಮಾರ್ ಬಗ್ಗಲ್ಲ. ಕಸವನ್ನು ಅಶೋಕ್ ಮತ್ತು ವಿಜಯೇಂದ್ರ ಮನೆ ಮುಂದೆ ಸುರಿಯಬೇಕೆ, ಮೊದಲಿಂದಲೂ ಏನು ನಡೆಯುತ್ತಿದೆಯೋ ಅದೇ ನಡೆಯುತ್ತೆ ನೀವು ಇಲ್ಲಿ ರಾಜಕೀಯ ಮಾಡಲು ಬಂದರೆ, ನಾವೂ ಮಾಡುತ್ತೇವೆ ಎಂದು ಎಚ್ಚರಿಸಿದರು.

ಗುತ್ತಿಗೆದಾರರ ಬೆದರಿಕೆಗೆ ಬಗ್ಗಲ್ಲ: ಇನ್ನು ಗುತ್ತಿಗೆದಾರರ ಬೆದರಿಕೆಗೂ ಬಗ್ಗಲ್ಲ. ಬಿಜೆಪಿ ಆಡಳಿತದಲ್ಲಿ ಹಣ ಇಲ್ಲವೆಂದರೂ 30,000 ಕೋಟಿ ರೂ. ಕೆಲಸ ಮಾಡಿ, ಈಗ ನಮ್ಮನ್ನು ಕೊಡಿ ಎಂದರೆ, ಎಲ್ಲಿಂದ ಕೊಡೋದು. ಎರಡು ಸಾವಿರ ಕೋಟಿ ರೂ. ಇದ್ದರೆ, 30,000 ಕೋಟಿ ರೂ. ಕೆಲಸ ಮಾಡಿದ್ದಾರೆ, ಈ ಹಣವನ್ನು ಸರಿದೂಗಿಸಬೇಕಿದೆ. ಯಾವುದೇ ಗುತ್ತಿಗೆ ಕಾಮಗಾರಿ ಮಾಡುವುದಿಲ್ಲ ಎನ್ನುವುದಾದರೆ, ಬೇಡ, ಬಿಡಿ ಎಂದು ಗುತ್ತಿಗೆದಾರರ ಸಂಘಕ್ಕೆ ಎಚ್ಚರಿಸಿದರು.

ಅಸ್ಸಾಂ ಚುನಾವಣೆಗೆ ಸಂಬಂಧಿಸಿದಂತೆ ನಡೆಯುವ ಉನ್ನತ ಮಟ್ಟದ ಸಭೆಯಲ್ಲಿ ಭಾಗವಹಿಸಲು ನಾನು ಇಂದೇ ದೆಹಲಿಗೆ ಹೋಗಬೇಕಿತ್ತು. ಆದರೆ ನಾಳೆ ಹೋಗುತ್ತಿದ್ದೇನೆ. ಪಕ್ಷದ ಕೆಲವು ಶಾಸಕರ ವಿದೇಶ ಪ್ರವಾಸ ಹಾಗೂ ಅಧಿಕಾರ ಹಸ್ತಾಂತರ ಕುರಿತು ಎದುರಾದ ಪ್ರಶ್ನೆಗಳಿಗೆ ಉತ್ತರಿಸಲಿಲ್ಲ.

ಮೈಸೂರು ಮಿತ್ರ

ಮಾದಕ ವಸ್ತು ಹಾವಳಿ ಬೆನ್ನತ್ತಿರುವ ಡ್ರೋನ್‌ಗಳು!

ಮೈಸೂರಿನೆಲ್ಲೆಡೆ ಪೊಲೀಸರ ವ್ಯಾಪಕ ತಪಾಸಣೆ



ಕೈಲಾಸಪುರಂನಲ್ಲಿ ಪ್ರಾಯೋಗಿಕ ಡ್ರೋನ್ ಕಾರ್ಯಾಚರಣೆ ನಡೆಸಲಾಯಿತು.



ಡ್ರೋನ್ ಕಾರ್ಯಾಚರಣೆಯಲ್ಲಿ ಸೆರೆಯಾಗಿರುವ ದೃಶ್ಯ.

ಮಾದಕ ವಸ್ತುಗಳ ಬಳಕೆ, ಪೂರೈಕೆ ಇನ್ನಿತರೆ ಅಕ್ರಮ ಚಟುವಟಿಕೆಗಳಿಗೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಜಿಪಿಎಸ್ ಡ್ರೋನ್ ಕಾರ್ಯಾಚರಣೆ ಆರಂಭಿಸಲಾಗಿದೆ. ಮಂಡಿ ಮೊಹಲ್ಲಾ, ಎನ್.ಆರ್.ಮೊಹಲ್ಲಾ, ಅನುಮಾನಾಸ್ಪದ ಪ್ರದೇಶಗಳು ಸೇರಿದಂತೆ ನಗರದೆಲ್ಲೆಡೆ ಡ್ರೋನ್ ಮೂಲಕ ತಪಾಸಣೆ ನಡೆಸಲಾಗುವುದು.
–ಸೀಮಾ ಲಾಟ್ಕರ್, ಆಯುಕ್ತರು, ನಗರ ಪೊಲೀಸ್

ಮೈಸೂರು, ಫೆ.18(ಎಂಕೆ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಆತಂಕ ಸೃಷ್ಟಿಸಿರುವ ಡ್ರಗ್ಸ್(ಮಾದಕ ವಸ್ತುಗಳು) ಹಾವಳಿ ನಿಯಂತ್ರಣಕ್ಕೆ ನಗರದೆಲ್ಲೆಡೆ ವ್ಯಾಪಕ ತಪಾಸಣೆ ನಡೆಸುತ್ತಿರುವ ಪೊಲೀಸರು, ಮೊದಲ ಬಾರಿಗೆ ಜಿಪಿಎಸ್ ಡ್ರೋನ್ ಕಾರ್ಯಾಚರಣೆ ಆರಂಭಿಸಿದ್ದಾರೆ.

ಮಾದಕ ದ್ರವ್ಯಗಳು ಮತ್ತು ಮನೋ ವಿಕೃತ ವಸ್ತುಗಳ ಕಾಯ್ದೆ(ಎನ್‌ಡಿಪಿಎಸ್) ಅಡಿ ಮಾದಕ ವಸ್ತುಗಳ ಉತ್ಪಾದನೆ, ದಾಸ್ತಾನು, ಬಳಕೆ ಮತ್ತು ಮಾರಾಟ ಜಾಲ ಪತ್ತೆಗೆ ತೀವ್ರ ಕಾರ್ಯಾಚರಣೆ ನಡೆಸುತ್ತಿರುವ ಮೈಸೂರು ನಗರ ಪೊಲೀಸರು, ನಗರದ ಸೂಕ್ಷ್ಮ ಪ್ರದೇಶಗಳಲ್ಲಿ ಜಿಪಿಎಸ್ ಡ್ರೋನ್ ಕ್ಯಾಮರಾ ಬಳಕೆಗೆ ಮುಂದಾಗಿದ್ದಾರೆ.

ಈ ಹಿಂದೆ ಭದ್ರತೆ ದೃಷ್ಟಿಯಿಂದ ಜಿಪಿಎಸ್ ಡ್ರೋನ್ ಬಳಕೆ ಮಾಡಿದ್ದ ನಗರ ಪೊಲೀಸರು, ಪತ್ತೆ ಕಾರ್ಯಾಚರಣೆಯನ್ನು ಇನ್ನಷ್ಟು ಪರಿಣಾಮಕಾರಿಯನ್ನಾಗಿಸುವ ದೃಷ್ಟಿಯಿಂದ ಕಟ್ಟಡಗಳ ಮೇಲಿಂದ ಅನುಮಾನಾಸ್ಪದ ಸ್ಥಳಗಳು ಮತ್ತು ವ್ಯಕ್ತಿಗಳ ಪತ್ತೆಗೆ ಮಂಡಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಡ್ರೋನ್ ಕ್ಯಾಮರಾ ಕಾರ್ಯಾಚರಣೆ ಆರಂಭಿಸಲಾಗಿದೆ.

ಮಂಡಿ ಮೊಹಲ್ಲಾದ ಕೈಲಾಸಪುರಂ ಸರ್ಕಾರಿ ಶಾಲೆ ಹಿಂಭಾಗ ಮಂಗಳವಾರ ಡ್ರೋನ್ ಪ್ರಾಯೋಗಿಕ ಕಾರ್ಯಾಚರಣೆ ನಡೆಸಿದ ಮಂಡಿ ಠಾಣೆ ಪೊಲೀಸರು, ಮಂಡಿ ಮೊಹಲ್ಲಾದ 3ನೇ ಮುಖ್ಯ ರಸ್ತೆ, ಸುನ್ನಿ ಚೌಕ ಸುತ್ತಮುತ್ತ ಇರುವ ಅಂಗಡಿ ಮಳಿಗೆಗಳು, ಮನೆಗಳನ್ನು ಡ್ರೋನ್ ಕ್ಯಾಮರಾ ಮೂಲಕ ಪರಿಶೀಲಿಸಿದರು.

ಡ್ರೋನ್ ಕ್ಯಾಮರಾ ಕಣ್ಗಾವಲಲ್ಲಿ ಪೊಲೀಸ್ ಸಿಬ್ಬಂದಿ ಸಹ ಡ್ರೋನ್ ಹಾರಾಟದ ಆಸು–ಪಾಸಿನಲ್ಲಿರುವ ಅಂಗಡಿ–ಮಳಿಗೆಗಳ ತಪಾಸಣೆ ನಡೆಸಿದರಲ್ಲದೆ ಮಳಿಗೆಗಳಲ್ಲಿ ತಯಾರಾಗುವ ಮತ್ತು ಮಾರಾಟ ಮಾಡುವ ವಸ್ತುಗಳ ಬಗ್ಗೆ ಮಾಹಿತಿ ಪಡೆದರು.

ಈ ವೇಳೆ ಎನ್‌ಆರ್ ವಿಭಾಗದ ಎಸಿಪಿ ವ್ಯಾಥ್ಯೂ ಥಾಮಸ್ ಮಾತನಾಡಿ, ಡ್ರೋನ್ ಕ್ಯಾಮರಾದಲ್ಲಿ ಸೆರೆಯಾಗುವ ದೃಶ್ಯಗಳನ್ನು ವೀಕ್ಷಣೆ ಮಾಡಿ, ಅನುಮಾನ ವಿದ್ದಲ್ಲಿ ಕೂಡಲೇ ಸ್ಥಳ ಪರಿಶೀಲನೆ ನಡೆಸಲಾಗುವುದು. ಇದರಿಂದ ಕಿರಿದಾದ ರಸ್ತೆಗಳಿರುವ ಹಾಗೂ ಸೂಕ್ಷ್ಮ ಪ್ರದೇಶಗಳಲ್ಲಿ ಅನುಮಾನಾಸ್ಪದ ಸ್ಥಳ ಮತ್ತು ವ್ಯಕ್ತಿಗಳನ್ನು ಪತ್ತೆ ಮಾಡಲು ಅನುಕೂಲವಾಗಲಿದೆ ಎಂದು ತಿಳಿಸಿದರು.

ಡ್ರೋನ್ ಹಾರಾಟದ ಸ್ಥಳದಿಂದ 500 ಮೀಟರ್ ವ್ಯಾಪ್ತಿಯ ಪ್ರದೇಶವನ್ನು ವೀಕ್ಷಣೆ ಮಾಡಬಹುದು. ಮುಖ್ಯವಾಗಿ ಎನ್‌ಡಿಪಿಎಸ್ ಸಂಬಂಧಿತ ಅಪರಾಧ ಕೃತ್ಯಗಳ ಪತ್ತೆಗೆ ಡ್ರೋನ್ ಕಾರ್ಯಾಚರಣೆ ಆರಂಭಿಸಲಾಗಿದೆ. ಪ್ರತಿನಿತ್ಯ ಸೂಕ್ಷ್ಮ ಪ್ರದೇಶಗಳಲ್ಲಿ ರಾತ್ರಿ ಮತ್ತು ಹಗಲು ಡ್ರೋನ್ ಕಾರ್ಯಾಚರಣೆ ನಡೆಯಲಿದೆ ಎಂದು ಹೇಳಿದರು.

ಜೈಲಿನೊಳಗೆ ಎಸೆಯುತ್ತಾರೆಂಬ ಮಾಹಿತಿ!: ಮೈಸೂರು ಕೇಂದ್ರ ಕಾರಾಗೃಹದ ಹಿಂಭಾಗದ ಗೋಡೆ ಮೇಲಿಂದ ಕೆಲ ವಸ್ತುಗಳನ್ನು ಎಸೆಯುತ್ತಾರೆ ಎಂಬ ಮಾಹಿತಿ ಮೇರೆಗೆ ಮಂಡಿ ಮೊಹಲ್ಲಾದ ಕೈಲಾಸಪುರಂ ಭಾಗದಲ್ಲಿ ಡ್ರೋನ್ ಕಾರ್ಯಾಚರಣೆ ಆರಂಭಿಸಲಾಗಿದೆ. ಅಲ್ಲದೆ ಠಾಣಾ ವ್ಯಾಪ್ತಿಯಲ್ಲಿರುವ ಎಲ್ಲಾ ಸೂಕ್ಷ್ಮ ಪ್ರದೇಶ ಹಾಗೂ ಅನುಮಾನಾಸ್ಪದ ಸ್ಥಳಗಳಲ್ಲಿ ಪರಿಶೀಲಿಸಲು ಡ್ರೋನ್ ಸಹಕಾರಿಯಾಗಲಿದೆ ಎಂದು ಮಂಡಿ ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ದಿವಾಕರ್ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಪ್ರಾಯೋಗಿಕ ಹಾರಾಟ: ಸುಮಾರು 40 ನಿಮಿಷಗಳ ಕಾಲ ಪ್ರಾಯೋಗಿಕವಾಗಿ ನಡೆದ ಡ್ರೋನ್ ಕಾರ್ಯಾಚರಣೆಯಲ್ಲಿ ಮಹಿಳಾ ಪೊಲೀಸ್ ಧನ್ಯಶ್ರೀ ಡ್ರೋನ್ ನಿರ್ವಹಿಸಿದರು. ಸಬ್‌ಇನ್ಸ್‌ಪೆಕ್ಟರ್ ರಾಜು ಕೊನಕೇರಿ, ಸಿಬ್ಬಂದಿಗಳಾದ ಜಿ.ಎನ್.ರವಿ, ಹಾಲೇಶ್ ಮತ್ತಿತರರಿದ್ದರು.

ಇ–ಖಾತಾ ತಾಂತ್ರಿಕ ದೋಷದಿಂದ ರಿಯಲ್ ಎಸ್ಟೇಟ್ ಉದ್ಯಮ, ಆಸ್ತಿ ಮಾಲೀಕರಿಗೆ ತೊಂದರೆ

ಸಮಸ್ಯೆ ಬಗೆಹರಿಸುವಂತೆ ಕ್ರೆಡೈ ಅಧ್ಯಕ್ಷ ಹರೀಶ್ ಶೆಣೈ ಆಗ್ರಹ

ಮೈಸೂರು,ಫೆ.18(ಜಿಎ)–ಇ–ಖಾತಾ ತಾಂತ್ರಿಕ ದೋಷ ಹಾಗೂ ಇತರೆ ಸಮಸ್ಯೆಗಳಿಂದ ರಿಯಲ್ ಎಸ್ಟೇಟ್ ಉದ್ಯಮ ಹಾಗೂ ಆಸ್ತಿ ಮಾಲೀಕರಿಗೆ ತೊಂದರೆಯಾಗುತ್ತಿದೆ. ಹೀಗಾಗಿ ಸರ್ಕಾರ ಇದನ್ನು ಶೀಘ್ರ ಬಗೆಹರಿಸಬೇಕೆಂದು ಕ್ರೆಡೈ ಮೈಸೂರು ಅಧ್ಯಕ್ಷ ಹರೀಶ್ ಶೆಣೈ ಆಗ್ರಹಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರ ಆಸ್ತಿಗಳ ನೋಂದಣಿ, ಖಾತೆಯನ್ನು ಡಿಜಿಟಲೀಕರಣ ಮಾಡಲು ಕೈಗೊಂಡಿರುವ ಕ್ರಮ ಸ್ವಾಗತಾರ್ಹ. ಆದರೆ ಈ ವೇಳೆಯ ತಾಂತ್ರಿಕ ತೊಂದರೆಗಳಿಂದಾಗಿ ಯಾವುದೇ ವಹಿವಾಟುಗಳು ನಡೆಯುತ್ತಿಲ್ಲ. ಇ– ಖಾತೆ ಅನುಷ್ಠಾನದಲ್ಲಿ ತಾಂತ್ರಿಕ ತೊಂದರೆ ಎದುರಾಗುತ್ತಿವೆ ಎಂದರು.

ನೋಂದಣಿಗೆ ಹೋದ ವೇಳೆ ಸರ್ವರ್ ಸಮಸ್ಯೆ ಎಂದು ಮತ್ತೊಂದು ದಿನಾಂಕ ನೀಡುತ್ತಾರೆ. ಆಗಲೂ ಸಹಾ ಸರ್ವರ್ ಇಲ್ಲ ಎಂಬ ಮಾತು ಸಾಮಾನ್ಯವಾಗಿ ಕೇಳಿ ಬರುತ್ತಿದೆ. ಇದಲ್ಲದೆ ಸ್ಥಳೀಯ ದತ್ತಾಂಶಗಳ ಕೊರತೆಯಿಂದಾಗಿ ಸಾವಿರಾರು ಅರ್ಜಿಗಳು ಬಾಕಿ ಉಳಿದಿವೆ. ಹೀಗಾಗಿ ತಾಂತ್ರಿಕ ದೋಷ ಕೂಡಲೇ ಸರಿಪಡಿಸಬೇಕು, ಇ–ಖಾತೆ ನೀಡಲು ಕಾಲಮಿತಿ ನಿಗದಿಗೊಳಿಸಬೇಕು, ವ್ಯವಸ್ಥೆ ಪೂರ್ಣ ಪ್ರಮಾಣದಲ್ಲಿ ಸರಿ ಹೋಗುವವರೆಗೂ ಹಳೇ ಪದ್ಧತಿ ಮುಂದುವರಿಸಬೇಕೆಂದು ಒತ್ತಾಯಿಸಿದರು.

ಮತ್ತೊಂದೆಡೆ ಹೊಸ ಬಡಾವಣೆಗಳಿಗೆ ದರ ನಿಗದಿಪಡಿಸಲು ಕೇಂದ್ರ ಮೌಲ್ಯಮಾಪನ ಸಮಿತಿ ಇದೆ. ಆದರೆ ಇದರ ನಿಯಮವನ್ನು ಹಳೇ ಬಡಾವಣೆಗಳಿಗೂ ಅನ್ವಯಿಸುವುದು ಸರಿಯಲ್ಲ. ಇದು ಅವೈಜ್ಞಾನಿಕ ಮಾತ್ರವಲ್ಲ, ಭ್ರಷ್ಟಾಚಾರ, ಆಡಳಿತಾತ್ಮಕ ವಿಳಂಬಕ್ಕೂ ಕಾರಣವಾಗುತ್ತಿದೆ. ಹೀಗಾಗಿ ಹಳೆ ಬಡಾವಣೆಗಳಿಗೆ ಈ ಸಮಿತಿ ವ್ಯಾಪ್ತಿಯಿಂದ ಕೈಬಿಡಬೇಕು. ಕೇವಲ ಉಪ ನೋಂದಣಾಧಿಕಾರಿಗಳ ಮಾರ್ಗಸೂಚಿ ದರದ ಆಧಾರದ ಮೇಲೆ ಸರಳವಾಗಿ ನೋಂದಣಿ ಪ್ರಕ್ರಿಯೆ ನಡೆಸಬೇಕು ಎಂದರು.

ಉದ್ಯಮಿ ಶ್ರೀಹರಿ ಮಾತನಾಡಿ, ಪ್ರತಿ ವ್ಯವಹಾರಕ್ಕೂ ಜಿಪಿಎ ನೋಂದಣಿ ವೇಳೆ ಜೀವಂತ ಪ್ರಮಾಣಪತ್ರ ಕಡ್ಡಾಯ ಮಾಡಿರುವುದು ಸರಿಯಲ್ಲ. ಇದರಿಂದ ಹಿರಿಯ ನಾಗರೀಕರು ಹಾಗೂ ಅನಿವಾಸಿ ಭಾರತೀಯರಿಗೆ ಸಮಸ್ಯೆಯುಂಟಾಗುತ್ತಿದೆ. ಸ್ವತಃ ತಾವೇ ವ್ಯವಹಾರ ನಡೆಸಲು ಸಾಧ್ಯವಾಗದ ಹಿನ್ನೆಲೆ ಜಿಪಿಎ ಮೊರೆ ಹೋಗುತ್ತಾರೆ. ಆದರೆ ಪ್ರತಿ ವ್ಯವಹಾರಕ್ಕೂ ಹೊಸದಾಗಿ ಜೀವಂತ ಪ್ರಮಾಣ ಪತ್ರ ಅಗತ್ಯ ಎಂಬ ನಿಯಮ ಕೈಬಿಡಬೇಕು ಎಂದು ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗೌರವ ಕಾರ್ಯದರ್ಶಿ ನಾಗರಾಜ್ ವಿ.ಬೈರಿ, ಅನಿಲ್, ಅರಣ್ ಪಂಡಿತ್, ಅನಿಲ್ ಉಪಸ್ಥಿತರಿದ್ದರು.

ಕಾಂಗ್ರೆಸ್ ಶಾಸಕರು, ಮುಖಂಡರನ್ನು ನಾಯಿಗೆ ಹೋಲಿಸಿರುವುದು ಮಹದೇವಪ್ಪಗೆ ಶೋಭೆ ತರದು

ಮೈಸೂರು,ಫೆ.18(ಜಿಎ)–ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಕಾಂಗ್ರೆಸ್ ಶಾಸಕರು ಹಾಗೂ ಮುಖಂಡರನ್ನು ಬೀದಿನಾಯಿಗಳಿಗೆ ಹೋಲಿಸಿರುವುದು ಸರಿಯಲ್ಲ. ಇದು ಅವರಿಗೆ ಶೋಭೆ ತರುವ ಮಾತಲ್ಲ ಎಂದು ನಗರ ಕಾಂಗ್ರೆಸ್ ಸಮಿತಿ ಮಾಧ್ಯಮ ವಕ್ತಾರ ಟಿ.ಶ್ರೀನಿವಾಸ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಾ.ಹೆಚ್.ಸಿ.ಮಹದೇವಪ್ಪ ಜನತಾದಳದಲ್ಲಿದ್ದವರಾಗಿದ್ದು, ಕಾಂಗ್ರೆಸ್‌ಗೆ ಸೇರ್ಪಡೆಗೊಂಡು ಸಚಿವರೂ ಆಗಿದ್ದಾರೆ. ಹೀಗಿದ್ದರೂ ಅವರು ಈ ರೀತಿ ಮಾತನಾಡಿರುವುದು ಸರಿಯಲ್ಲ. ಪಕ್ಷದ ಹಿರಿಯ ನಾಯಕರು ಈ ರೀತಿ ಹಗುರವಾಗಿ ಮಾತನಾಡುವುದು ಶೋಭೆ ತರುವುದಿಲ್ಲ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರ ನೇತೃತ್ವದಲ್ಲಿ ಕಾಂಗ್ರೆಸ್ ಈ ಬಾರಿ ಹೆಚ್ಚು ಶಾಸಕರು ಗೆದ್ದಿದ್ದಾರೆ. ಶಾಸಕರು ಆಯ್ಕೆಯಾಗಲು ಶ್ರಮಿಸಿದ್ದಾರೆ. ಅವರೇ ಹೇಳಿರುವಂತೆ ಮುಂದಿನ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೆ ಅಧಿಕಾರಕ್ಕೆ ಬರಲು ಹಾಗೂ ಸುಮಾರು 140 ಸ್ಥಾನ ತನ್ನದಾಗಿಸಿಕೊಳ್ಳಲು ಅವರ ಸಂಘಟನಾ ಚತುರತೆ ಅಗತ್ಯವಿದೆ. ಹೀಗಾಗಿ ಈ ಅವಧಿಯಲ್ಲಿಯೇ ಶಿವಕುಮಾರ್ ಅವರನ್ನು ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಬೇಕು. ಅವರು ಮುಖ್ಯಮಂತ್ರಿ ಆದ ದಿನ ಚಾಮುಂಡಿ ಬೆಟ್ಟದಲ್ಲಿ ತೆಂಗಿನಕಾಯಿ ಹೊಡೆಯುತ್ತೇನೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ದಿನೇಶ್ ಉಪಸ್ಥಿತರಿದ್ದರು.

ಯುವ ನಿಧಿ ಯೋಜನೆಗೆ ನೋಂದಣಿ

ಮೈಸೂರು,ಫೆ.18–ಯುವ ನಿಧಿ ಯೋಜನೆಯ ನೋಂದಣಿ ಪ್ರಕ್ರಿಯೆಯಲ್ಲಿದ್ದು, ಯುವನಿಧಿಯ ಫಲಾನುಭವಿಗಳು ಪ್ರತಿ ಮಾಹೆಯ 1ನೇ ದಿನಾಂಕದಿಂದ 25ನೇ ದಿನಾಂಕದೊಳಗಾಗಿ ಸೆಲ್ಫ್ ಡಿಕ್ಲರೇಷನ್ ಸಲ್ಲಿಸುವುದು ಕಡ್ಡಾಯ. 2025ನೇ ಸಾಲಿನಲ್ಲಿ ಪಾಸಾದ ಪದವಿ, ಡಿಪ್ಲೋಮಾ ಉತ್ತೀರ್ಣರಾದ ವಿದ್ಯಾರ್ಥಿಗಳು, ಪದವಿ, ಡಿಪ್ಲೋಮಾ ಸ್ನಾತಕೋತ್ತರ ನಂತರ ಕನಿಷ್ಠ 6 ತಿಂಗಳ ಅವಧಿಯವರೆಗೆ ಸರ್ಕಾರಿ, ಖಾಸಗಿ ಉದ್ಯೋಗ ಹೊಂದಿಲ್ಲ ದವರು, ಸ್ವಯಂ ಉದ್ಯೋಗ ಹೊಂದಿಲ್ಲದವರು, ಉನ್ನತ ವಿದ್ಯಾಭ್ಯಾಸ ಮುಂದು ವರೆಸದೇ ಇರುವವರು ಇದರ ಪ್ರಯೋಜನವನ್ನು ಪಡೆಯಬಹುದು. ನೋಂದಣಿ ಅಗತ್ಯವಿರುವ ದಾಖಲಾತಿಗಳು, ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿ, ಡಿಪ್ಲೋಮಾ ಪ್ರಮಾಣಪತ್ರ, ಅಭ್ಯರ್ಥಿಗಳು ನೋಂದಾಯಿಸಿಕೊಳ್ಳಲು ಸೇವಾ ಸಿಂಧು ಪೋರ್ಟಲ್ https://sevasindhugs.karnataka.gov.inಗೆ ಭೇಟಿ ನೀಡಿ ಉಚಿತವಾಗಿ ಕರ್ನಾಟಕ ಒನ್, ಬೆಂಗಳೂರು ಒನ್, ಗ್ರಾಮ ಒನ್ ಮತ್ತು ಬಾಪೂಜಿ ಸೇವಾ ಕೇಂದ್ರಗಳಲ್ಲಿ ಕೂಡ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗೆ ಹೆಲ್ಪ್ ಲೈನ್ 1800 599 9918, 8748984360, 9036356862, 9113982513, 8217485689 ಅನ್ನು ಸಂಪರ್ಕಿಸಿ.

ಅರಸು ಮಂಡಳಿ ಸಹಕಾರ ಸಂಘದ ನೂತನ ಪದಾಧಿಕಾರಿಗಳು

ಮೈಸೂರು, ಫೆ. 18–ಮೈಸೂರಿನ ಅರಸು ಮಂಡಳಿ ಸಹಕಾರ ಸಂಘದ ನೂತನ ನಿರ್ದೇಶಕರಾಗಿ ಎ.ಆರ್.ಮಲ್ಲರಾಜೇ ಅರಸ್, ಶ್ರೀಮತಿ ಸುಚಿತಾ, ಎ.ಎಂ.ಮಲ್ಲರಾಜೇ ಅರಸ್ (ಗಿರೀಶ್), ಎಂ.ಸಿ. ಸುರೇಶ್, ಬಿ.ರವಿ, ಶ್ರೀಮತಿ ಎ.ವಿ.ವಿದ್ಯಾ, ಎ.ಆರ್.ನಿರಂಜನರಾಜೇ ಅರಸ್ (ನಂದೀಶ್), ಕೆ.ಎಸ್. ಮಲ್ಲರಾಜೇ ಅರಸ್ (ಕಡಜೆಟ್ಟಿ), ಟಿ.ಎಲ್.ಅರವಿಂದರಾಜೇ ಅರಸ್ (ಅಜಿತ್), ಕಿರಣ್ ಜಿ.ಎಸ್. ಅರಸ್, ಪಿ.ಕೆ.ಚಿದಾನಂದರಾಜೇ ಅರಸ್, ಶ್ರೀಮತಿ ಇಂದ್ರಾಣಿ, ಜಿ.ಕೀರ್ತಿ ಪ್ರಕಾಶ್, ಚೂಡಚಂದ್ರರಾಜೇ ಅರಸ್, ಎಂ.ಕೆ.ಫಣಿನಂಜರಾಜೇ ಅರಸ್, ಎನ್.ಎಸ್.ದಾಸರಾಜೇ ಅರಸ್ (ಉದಯ್) ಅವರನ್ನು ಅವಿರೋಧವಾಗಿ ಆಯ್ಕೆ ಮಾಡಲಾಯಿತು.

ಫೆ.22 ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮೈಸೂರು: ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವತಿಯಿಂದ ಫೆ.22ರಂದು ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಬೆಳಿಗ್ಗೆ 11 ಗಂಟೆಗೆ ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಸಭಾಂಗಣದಲ್ಲಿ ಜಿಲ್ಲಾಧ್ಯಕ್ಷ ಡಾ. ಅರುಣಕುಮಾರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ವ್ಯಾಪ್ತಿಯ ಸದಸ್ಯರು ತಪ್ಪದೇ ಸಭೆಗೆ ಹಾಜರಾಗಬೇಕೆಂದು ಪ್ರಕಟಣೆ ತಿಳಿಸಿದೆ.

ಸ್ವಚ್ಛ ಶೌಚಾಲಯ ಅಭಿಯಾನಕ್ಕೆ ಚಾಲನೆ



'ಸ್ವಚ್ಛ ಶೌಚಾಲಯ ಅಭಿಯಾನ'ಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಮೈಸೂರು, ಫೆ.18(ಎಂಕೆ)– ಮೈಸೂರಿನ ಟೌನ್‌ಹಾಲ್ ಆವರಣದಲ್ಲಿ 'ಸ್ವಚ್ಛತೆಯಲ್ಲಿ ಸಾರ್ವಜನಿಕರ ಸಹಭಾಗಿತ್ವ' ಧ್ಯೇಯವಾಕ್ಯದೊಂದಿಗೆ ಮೈಸೂರು ನಗರಪಾಲಿಕೆ ವತಿಯಿಂದ ಸ್ವಚ್ಛ ಭಾರತ್ 2.0 ಅಂಗವಾಗಿ ಹಮ್ಮಿಕೊಂಡಿರುವ 'ಸ್ವಚ್ಛ ಶೌಚಾಲಯ ಅಭಿಯಾನ'ಕ್ಕೆ ಬುಧವಾರ ಚಾಲನೆ ನೀಡಲಾಯಿತು.

ಸಫಾಯಿ ಮಿತ್ರ ಸುರಕ್ಷತೆ ಮತ್ತು ನಗರದ ಒಳಚರಂಡಿ ವ್ಯವಸ್ಥೆ ನಿರ್ವಹಣೆ ಹಾಗೂ ಯಾಂತ್ರೀಕೃತ ಸುರಕ್ಷಿತ ಸ್ವಚ್ಛತೆ ಹಿನ್ನಲೆಯಲ್ಲಿ ಮ್ಯಾನ್‌ಹೋಲ್ ಸ್ವಚ್ಛತಾ ಯಂತ್ರವನ್ನು ಆನ್ ಮಾಡುವ ಮೂಲಕ ಸ್ವಚ್ಛ ಶೌಚಾಲಯ ಅಭಿಯಾನ ಹಾಗೂ ಸ್ವಚ್ಛತಾ ಕಿಟ್ ವಿತರಣೆ ಕಾರ್ಯಕ್ರಮಕ್ಕೆ ನಗರಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್ ಚಾಲನೆ ನೀಡಿದರು.

ಬಳಿಕ ನಗರಪಾಲಿಕೆ ವ್ಯಾಪ್ತಿಯ ಸಾರ್ವಜನಿಕ ಶೌಚಾಲಯ ನಿರ್ವಹಣೆ ಮಾಡುತ್ತಿರುವ ಕಾರ್ಮಿಕರಿಗೆ 'ಹೈಜಿನ್ ಕಿಟ್'ಗಳನ್ನು ನೀಡಿ, ಆರೋಗ್ಯ ಮತ್ತು ಸುರಕ್ಷತೆಗೆ ಆದ್ಯತೆ ನೀಡುವಂತೆ ತಿಳಿಸಲಾಯಿತು. ನಂತರ ನೂರಾರು ವಿದ್ಯಾರ್ಥಿಗಳು ಸ್ವಚ್ಛ ಶೌಚಾಲಯ ಕುರಿತಾದ ಜಾಗೃತಿ ಸಂದೇಶವುಳ್ಳ ನಾಮ ಫಲಕಗಳನ್ನಿಡಿದು ಗಾಂಧಿವೃತ್ತದಿಂದ ಅರಮನೆ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಿಂದ ವಾಪಸ್ ಟೌನ್‌ಹಾಲ್‌ವರೆಗೆ ಕಾಲ್ನಡಿಗೆ ಜಾಥಾ ನಡೆಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು.

ಬೀದಿ ನಾಟಕ: ಗಾಂಧಿ ವೃತ್ತದಲ್ಲಿ ಸಾರ್ವಜನಿಕ ಹಾಗೂ ಮನೆಯ ಶೌಚಾಲಯಗಳ ಸ್ವಚ್ಛತೆ ಕುರಿತು ನಾಟಕ ಪ್ರದರ್ಶನ ನೀಡಿದ ಕಲಾವಿದರು, ಸಾರ್ವಜನಿಕ ಶೌಚಾಲಯಗಳ ನೈರ್ಮಲ್ಯದಿಂದಾಗುವ ತೊಂದರೆಗಳ ಕುರಿತು ನೋಡುಗರಲ್ಲಿ ಮನವರಿಕೆ ಮಾಡಿದರು.

ನಗರಪಾಲಿಕೆ ವಾಣಿ ವಿಲಾಸ ವಾಟರ್ ವರ್ಕ್ಸ್‌ನ ಕಾರ್ಯಪಾಲಕ ಇಂಜಿನಿಯರ್‌ಗಳಾದ ಶಿಲ್ಪಾ, ಅಶ್ವಿನ್, ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳಾದ ಮೊಹಮ್ಮದ್ ಮುಸ್ತಫಾ, ಸುಶ್ರುತ್, ಧನುಷ್, ನಾಗರಾಜೇಗೌಡ ಮತ್ತು ರವಿಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಶ್ರೀ ರಾಮಕೃಷ್ಣ ಪರಮಹಂಸರ 191ನೇ ಜಯಂತಿ ಆಚರಣೆ



ಚಾಮುಂಡೇಶ್ವರಿ ಯುವ ಬಳಗದ ವತಿಯಿಂದ ಅದ್ವೈತ ಸಿದ್ಧಾಂತ ಬೋಧಿಸಿದ ಮಹಾನ್ ಸಂತ, ಮಹಾನ್ ಚಿಂತಕ, ಶ್ರೀ ರಾಮಕೃಷ್ಣ ಪರಮಹಂಸರ 191ನೇ ಜಯಂತಿ ಅಂಗವಾಗಿ ರಾಮಕೃಷ್ಣ ಪರಮಹಂಸ ವೃತ್ತದಲ್ಲಿ ಪರಮಹಂಸರ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿ, ಸಿಹಿ ವಿತರಿಸಲಾಯಿತು. ಈ ವೇಳೆ ಕೆಪಿಸಿಸಿ ಸದಸ್ಯ ನಜರ್‌ಬಾದ್ ನಟರಾಜ್, ಜಿ.ರಾಘವೇಂದ್ರ ಅಖಿಲ ಕರ್ನಾಟಕ ಸಿದ್ದರಾಮಯ್ಯ ಬ್ರಿಗೇಡ್ ಅಧ್ಯಕ್ಷ ಹಿನ್‌ಕಲ್ ಉದಯ್, ಕಾಂಗ್ರೆಸ್ ಅಲ್ಪಸಂಖ್ಯಾತರ ಘಟಕದ ಅಧ್ಯಕ್ಷ ಆರಿಫ್ ಪಾಷಾ, ಪ್ರಜ್ಞಾವಂತ ನಾಗರಿಕ ವೇದಿಕೆ ಅಧ್ಯಕ್ಷ ಕಡಕೋಳ ಜಗದೀಶ್, ಚಂದ್ರು, ಎಸ್.ಎನ್.ರಾಜೇಶ್, ಹರೀಶ್‌ಗೌಡ, ರಾಕೇಶ್, ಆನಂದ, ರವಿಚಂದ್ರ, ಲೋಕೇಶ್, ನಿತೇಶ್, ಡೈರಿ ವೆಂಕಟೇಶ್, ಮಂಜುನಾಥ್ ಇದ್ದರು.

ಫೆ.22, ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ

ಮೈಸೂರು, ಫೆ. 18–ಎನ್.ಜೆ.ಎಸ್. ಚಾರಿಟಬಲ್ ಟ್ರಸ್ಟ್, ಮೈಸೂರು ವೀರಶೈವ ಸಜ್ಜನ ಸಂಘ ಹಾಗೂ ಅರವಿಂದ ಕಣ್ಣಿನ ಆಸ್ಪತ್ರೆ, ಕೊಯಮತ್ತೂರು ಸಂಯುಕ್ತ ಆಶ್ರಯದಲ್ಲಿ ಫೆ.22ರಂದು ಬೆಳಗ್ಗೆ 8ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಮಂಡಿ ಮೊಹಲ್ಲಾ, ಕಬೀರ್ ರಸ್ತೆ, ಮಂಡಿ ಪೊಲೀಸ್ ಸ್ಟೇಷನ್ ಹತ್ತಿರದ ಕಂಠಿ ಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಉಚಿತ ಕಣ್ಣಿನ ಶಸ್ತ್ರ ಚಿಕಿತ್ಸಾ ಶಿಬಿರ ಆಯೋಜಿಸಲಾಗಿದೆ. ಮಾಹಿತಿಗೆ ಮೊ. 94487 53597, 99161 55453, 9448738657 ಸಂಪರ್ಕಿಸಿ.

ಬೃಂದಾವನ, ಯಾದವಗಿರಿಯಲ್ಲಿ 5.55 ಕೋಟಿ ಅಭಿವೃದ್ಧಿ ಕಾಮಗಾರಿಗೆ ಚಾಲನೆ



ಬೃಂದಾವನ ಬಡಾವಣೆ, ಯಾದವಗಿರಿ ವ್ಯಾಪ್ತಿಯ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು, ಫೆ.18(ಎಂಕೆ)– ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಬೃಂದಾವನ ಬಡಾವಣೆ ಹಾಗೂ ಯಾದವಗಿರಿಯ ವ್ಯಾಪ್ತಿಯಲ್ಲಿ 5.55 ಕೋಟಿ ರೂ.ವೆಚ್ಚದ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರಿಶ್‌ಗೌಡ ಬುಧವಾರ ಗುದ್ದಲಿ ಪೂಜೆ ನೆರವೇರಿಸಿದರು.

ಲೋಕೋಪಯೋಗಿ ಇಲಾಖೆ ಅನುದಾನದಡಿ ಬೃಂದಾವನ ಬಡಾವಣೆಯ ಅಡ್ಡ ರಸ್ತೆಗಳು, ಗುರುದ್ವಾರ ರಸ್ತೆ ಹಿಂಭಾಗದ 2ನೇ ಹಂತದ ಅಡ್ಡ ರಸ್ತೆಗಳು, ಕೆಐಎಡಿಬಿ ಕ್ಯಾಂಟೀನ್ ರಸ್ತೆ, ಕೆಎಸ್‌ಆರ್‌ಟಿಸಿ ಕ್ವಾಟ್ರಸ್ ಮುಂಭಾಗದ ರಸ್ತೆ ಸೇರಿದಂತೆ ವಿವಿಧ ರಸ್ತೆಗಳ ಅಭಿವೃದ್ಧಿಗೆ ಬೃಂದಾವನ ಮುಖ್ಯ ರಸ್ತೆಯ ನಂದಿನಿ ಹಾಲಿನ ಬೂತ್ ಮುಂಭಾಗ ಗುದ್ದಲಿ ಪೂಜೆ ಮಾಡಿ, ಕಾಮಗಾರಿಗೆ ಚಾಲನೆ ನೀಡಲಾಯಿತು.

ಈ ವೇಳೆ ಚಾಮರಾಜ ವಿಧಾನಸಭಾ ಕ್ಷೇತ್ರದ ಇಂದಿರಾ ಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಅಧ್ಯಕ್ಷ ಡಿ.ನಾಗಭೂಷಣ್, ವಾರ್ಡ್ ಅಧ್ಯಕ್ಷ ದಿನೇಶ್, ಮುಖಂಡರಾದ ಟೆಂಟ್ ಶ್ರೀನಿವಾಸ್, ಪ್ರವೀಣ್‌ಶೆಟ್ಟಿ, ಸುಶೀಲ ಮರೀಗೌಡ, ಗಿರಿಜಾಂಬ, ಮಂಜುನಾಥ್, ಜೀವನ್ ಪ್ರಕಾಶ್, ಮೈಸೂರು ವಿವಿ ಸಿಂಡಿಕೇಟ್ ಸದಸ್ಯ ಮಹದೇಶ್, ಆಶ್ರಯ ಸಮಿತಿ ಸದಸ್ಯರಾದ ಮಂಜುನಾಥ್, ಇಬ್ರಾಹಿಂ ಮತ್ತಿತರರಿದ್ದರು.

ಫೆ.22, ಮೈಸೂರು ಸಾಹಿತ್ಯ ಸಂಭ್ರಮ

ಮೈಸೂರು, ಫೆ. 18– ಮೈಸೂರು ಲಿಟರರಿ ಅಸೋಸಿಯೇಷನ್ ವತಿಯಿಂದ ಫೆ. 22ರಂದು ಬೆಳಗ್ಗೆ 10 ಗಂಟೆಗೆ ಮಹಾರಾಜ ಕಾಲೇಜು ಶತಮಾನೋತ್ಸವ ಭವನದಲ್ಲಿ ಮೈಸೂರು ಸಾಹಿತ್ಯ ಸಂಭ್ರಮ ಏರ್ಪಡಿಸಲಾಗಿದೆ.

ಕಾರ್ಯಕ್ರಮವನ್ನು ಖ್ಯಾತ ಶಿಕ್ಷಣ ತಜ್ಞ ಡಾ. ಗುರುರಾಜ್ ಕರಜಗಿ ಮತ್ತು ರಾಜೀವ್ ಗಾಂಧಿ ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿ ಪ್ರೊ. ಕೆ.ಸಿ.ಬೆಳ್ಳಿಯಪ್ಪ ಉದ್ಘಾಟಿಸಲಿದ್ದಾರೆ.

ಕೇರಳ ವಿಶ್ವವಿದ್ಯಾನಿಲಯದ ಹಿರಿಯ ಇಂಗ್ಲಿಷ್ ಪ್ರಾಧ್ಯಾಪಕ ಡಾ.ಬಿ. ಹರಿಹರನ್, ಲೇಖಕರಾದ ಪ್ರೀತಿ ಶೆಣೈ, ಚಿತ್ರ ವಿಮರ್ಶಕ ಹಾಗೂ ಬರಹಗಾರ ಎಂ.ಕೆ.ರಾಘವೇಂದ್ರ ಮತ್ತು ವಿದ್ಯಾಶಿಲ್ಪಿ ವಿಶ್ವವಿದ್ಯಾನಿಲಯದ ಸ್ಕೂಲ್ ಆಫ್ ಲಿಬರಲ್ ಆರ್ಟ್ಸ್ ಡೀನ್ ಡಾ. ಚಂದನ್‌ಗೌಡ ಭಾಗವಹಿಸಲಿದ್ದಾರೆ.

ದೇಶ - ವಿದೇಶ

ಎಂಎ ಓದಿ ಚಿನ್ನದ ಪದಕ ಗೆದ್ದ 78ರ ಅಜ್ಜಿ



ಇಂದೋರ್: ದೇವಿ ಅಹಲ್ಯಾ ವಿಶ್ವವಿದ್ಯಾನಿಲಯದ ಮರಾಠಿ ಎಂ.ಎ ಕೋರ್ಸ್‌ನಲ್ಲಿ 78 ವರ್ಷ ವಯಸ್ಸಿನ ಸುಷ್ಮಾ ಮೋಘೆ ಚಿನ್ನದ ಪದಕ ಗೆದ್ದಿದ್ದಾರೆ. ನಿವೃತ್ತಿ ನಂತರ ತಮ್ಮ ಶೈಕ್ಷಣಿಕ ಪ್ರಯಾಣ ಮುಂದುವರಿಸಿದ್ದ ಅವರು, ಸಾಧನೆಗೆ ವಯಸ್ಸು ಮುಖ್ಯವಲ್ಲ ಎಂಬುದನ್ನು ಸಾಧಿಸಿ ತೋರಿದ್ದಾರೆ. ಸುಷ್ಮಾ ಅವರಿಗೆ ಮಧ್ಯಪ್ರದೇಶದ ರಾಜ್ಯಪಾಲ ಮಂಗುಭಾಯಿ ಪಟೇಲ್ ಅವರು, ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಚಿನ್ನದ ಪದಕವನ್ನು ಪ್ರದಾನ ಮಾಡಿದರು. ಈ ವಯಸ್ಸಿನಲ್ಲೂ ಮರಾಠಿ ಎಂ.ಎ ಪಡೆಯಬಹುದು ಎಂದು ತಿಳಿದ ನಂತರ, ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡೆ. ಪದವಿ ಪಡೆಯುವುದಕ್ಕಿಂತ, ಪದವಿಗೆ ದಾಖಲಾಗುವ ವಿಚಾರವೆ ನನಗೆ ದೊಡ್ಡದಾಗಿತ್ತು. ಮಾತೃಭಾಷೆ ಮರಾಠಿ ಯಾವಾಗಲೂ ನನ್ನ ಹೃದಯಕ್ಕೆ ಹತ್ತಿರವಾದ ವಿಷಯ ಎಂದು ಸುಷ್ಮಾ ಹೇಳಿದರು. ತನ್ನ ಶಿಕ್ಷಕರಿಗೆ ಕೃತಜ್ಞತೆ ವ್ಯಕ್ತಪಡಿಸಿದ ಅವರು, ನನ್ನ ಪ್ರಾಧ್ಯಾಪಕರು ನನ್ನನ್ನು ಸಂಪೂರ್ಣವಾಗಿ ಬೆಂಬಲಿಸಿ, ಆಫ್‌ಲೈನ್ ಮತ್ತು ಆನ್‌ಲೈನ್ ಎರಡರಲ್ಲೂ ಕಲಿಸಿದರು ಎಂದರು. ನಿವೃತ್ತಿಯ ನಂತರ ಶೂನ್ಯ ಆವರಿಸಿದ್ದ ಬದುಕು, ಶೈಕ್ಷಣಿಕ ಕ್ಷೇತ್ರಕ್ಕೆ ಮರಳಿದ ನಂತರ ದಿಸೆಯನ್ನೆ ಬದಲಾಯಿಸಿದೆ ಎನ್ನುವ ಅವರು, ಪ್ರಸ್ತುತ ಪ್ರಸಿದ್ಧ ಹಿಂದಿ ಲೇಖಕರ ಕೃತಿಗಳನ್ನು ಮರಾಠಿಗೆ ಅನುವಾದ ಮಾಡುತ್ತಾ, ಸಾಹಿತ್ಯ ಕೃಷಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಅಮೆರಿಕಾದಲ್ಲಿ 2.9 ಕೋಟಿ ಸಂಬಳ ಬಿಟ್ಟು ತವರಿಗೆ ಬರಲು ನಿರ್ಧರಿಸಿದ ಅನಿವಾಸಿ ಭಾರತೀಯ

ಅಮೆರಿಕಾ: ಅಮೆರಿಕದಲ್ಲಿ ಕಳೆದ 12 ವರ್ಷಗಳಿಂದ ನೆಲೆಸಿರುವ 36 ವರ್ಷದ ಅನಿವಾಸಿ ಭಾರತೀಯರೊಬ್ಬರು ಮಕ್ಕಳು, ಅಜ್ಜ–ಅಜ್ಜಿಯೊಂದಿಗೆ ಇರಬೇಕೆಂಬ ಕಾರಣಕ್ಕೆ ಕೈತುಂಬಾ ಸಂಬಳದ ಕೆಲಸ ಬಿಟ್ಟು ಮರಳಿ ಭಾರತದ ನವಿ ಮುಂಬೈಗೆ ಬರಲು ನಿರ್ಧರಿಸಿದ್ದಾರೆ.

ನನ್ನ ಪೋಷಕರು ಹೈದರಾಬಾದ್‌ನಲ್ಲಿದ್ದಾರೆ. ನಾವು ನವಿ ಮುಂಬೈಗೆ ಸ್ಥಳಾಂತರವಾಗಲು ನಿರ್ಧರಿಸಿದ್ದೇವೆ. ನಮ್ಮ ಮೂವರು ಮಕ್ಕಳು, ಅಜ್ಜ–ಅಜ್ಜಿ ಮತ್ತು ಸಂಬಂಧಿಕರ ಜೊತೆ ಬೆಳೆಯಬೇಕೆಂಬುದು ನಮ್ಮ ಆಸೆ. ಆದರೆ, ಅಮೆರಿಕದ ಐಷಾರಾಮಿ ಜೀವನ ಮತ್ತು ಇಷ್ಟೊಂದು ದೊಡ್ಡ ಸಂಬಳ ಬಿಟ್ಟು ಬರುವುದು ಸರಿಯಾದ ನಿರ್ಧಾರವೇ ಎಂದು ಸಾಮಾಜಿಕ ಜಾಲತಾಣವಾದ ರೆಡ್ಡಿಟ್‌ನಲ್ಲಿ ನೆಟ್ಟಿಗರ ಸಲಹೆ ಕೇಳಿದ್ದಾರೆ. ಅಮೆರಿಕಾದಲ್ಲಿ ವಾರ್ಷಿಕ 2.9 ಕೋಟಿ ವೇತನವಿದ್ದು, ಭಾರತದಲ್ಲಿ 1.5 ಕೋಟಿ ರೂ. ವೇತನದ ಆಫರ್ ಬಂದಿರುವ ಮಾಹಿತಿಯನ್ನೂ ಹಂಚಿಕೊಂಡಿದ್ದಾರೆ.

ಈ ಪೋಸ್ಟ್ ವೈರಲ್ ಆಗಿದ್ದು, ಬಹುತೇಕರು ಆ ಅನಿವಾಸಿ ಭಾರತೀಯನ ನಿರ್ಧಾರವನ್ನು ಶ್ಲಾಘಿಸಿದ್ದಾರೆ. ಭಾರತದಲ್ಲಿ 1.5 ಕೋಟಿ ಹಣದಲ್ಲಿ ಅಮೆರಿಕಕ್ಕಿಂತಲೂ ಅತ್ಯುತ್ತಮವಾಗಿ ಬದುಕಬಹುದು. ಭಾರತದಲ್ಲಿ ನಿಮ್ಮ ಸಂಬಳದ ಶೇ.50ಕ್ಕಿಂತ ಹೆಚ್ಚು ಹಣ ಉಳಿಸಬಹುದು. ಪೋಷಕರ ಜೊತೆಗಿರುವ ಸುಖ ಯಾವುದಕ್ಕೂ ಸಾಟಿಯಿಲ್ಲ. ಮಕ್ಕಳಿಗೆ ಸಂಸ್ಕಾರ ನೀಡಲು ಭಾರತಕ್ಕೆ ಬರುತ್ತಿರುವುದು ನಿಜವಾದ ಶ್ರೀಮಂತಿಕೆ ಎಂದು ನೆಟ್ಟಿಗರು ಸಲಹೆ ನೀಡಿದ್ದಾರೆ.

ಪಾಕಿಸ್ತಾನಕ್ಕೆ ಸಿಂಧೂ ನಂತರ ರಾವಿ ಜಲಾಘಾತ



ನವದೆಹಲಿ: ಸಿಂಧೂ ಜಲ ಒಪ್ಪಂದ ರದ್ದತಿ ಮೂಲಕ ಪಾಕಿಸ್ತಾನಕ್ಕೆ ಭಾರೀ ಹೊಡೆತ ನೀಡಿರುವ ಭಾರತ, ಬೇಸಿಗೆ ಆರಂಭವಾಗುತ್ತಿದ್ದಂತೇ ರಾವಿ ನದಿಯಿಂದ ಪಾಕಿಸ್ತಾನಕ್ಕೆ ಹೆಚ್ಚುವರಿ ನೀರು ಹರಿಯುವುದನ್ನು ಸ್ಥಗಿತಗೊಳಿಸಲು ಮುಂದಾಗಿದೆ. ಈಗಾಗಲೇ ಸಿಂಧೂ ಜಲ ಒಪ್ಪಂದ ರದ್ದತಿ ನಿರ್ಧಾರ ಹಿಂಪಡೆಯುವಂತೆ ಭಾರತವನ್ನು ಗೋಗರೆಯುತ್ತಿರುವ ಪಾಕಿಸ್ತಾನ, ರಾವಿ ನದಿ ಹೆಚ್ಚುವರಿ ನೀರಿನ ಅಲಭ್ಯತೆಯಿಂದ ಮತ್ತಷ್ಟು ಕಂಗಾಲಾಗಲಿದೆ. ಸಿಂಧೂ ಜಲ ಒಪ್ಪಂದ ರದ್ದತಿಯು ಪಂಜಾಬ್–ಜಮ್ಮು–ಕಾಶ್ಮೀರ ಗಡಿಯಲ್ಲಿರುವ ಶಹಪುರ್ ಕಂಡಿ ಅಣೆಕಟ್ಟಿನ ಕೆಲಸವನ್ನು ವೇಗಗೊಳಿಸಲು ನೆರವಾಗಿದೆ. ಈ ಯೋಜನೆ ಪೂರ್ಣಗೊಳ್ಳುವ ಹಂತದಲ್ಲಿದೆ ಎಂದು ಜಮ್ಮು–ಕಾಶ್ಮೀರ ಸಚಿವ ಜಾವೇದ್ ಅಹ್ಮದ್ ರಾಣಾ ಹೇಳಿದ್ದಾರೆ.

ನಮ್ಮ ಕಥುವಾ ಮತ್ತು ಸಾಂಬಾ ಜಿಲ್ಲೆಗಳು ಬರ ಪೀಡಿತ ಪ್ರದೇಶಗಳಾಗಿದ್ದು, ಪಾಕಿಸ್ತಾನಕ್ಕೆ ರಾವಿ ನದಿ ನೀರಿನ ಹೆಚ್ಚುವರಿ ಹರಿವನ್ನು ನಿಲ್ಲಿಸಬೇಕಿದೆ. ಹೀಗಾಗಿ ಶಹಪರ್ ಕಂಡಿ ಅಣೆಕಟ್ಟು ಯೋಜನೆ ನಮ್ಮ ಪ್ರಾಥಮಿಕ ಆದ್ಯತೆಯಾಗಿದ್ದು, ಮಾರ್ಚ್‌ನಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಪಹಲ್ಗಾಮ್‌ನಲ್ಲಿ ಉಗ್ರರು ಭೀಕರ ದಾಳಿ ನಡೆಸಿದ ಬಳಿಕ ಸಿಂಧೂ ನದಿ ಒಪ್ಪಂದ ರದ್ದುಗೊಳಿಸಿದ್ದು, ಆ ವೇಳೆ ನೀರು ಮತ್ತು ರಕ್ತ ಒಟ್ಟಿಗೆ ಹರಿಯಲ್ಲ ಎಂದು ಮೋದಿ ಪಾಕಿಸ್ತಾನಕ್ಕೆ ಎಚ್ಚರಿಸಿದ್ದರು.

ತಾರ್ಕಿಕ ಅಂತ್ಯ ಕಾಣದ ಅಮೆರಿಕಾ–ಇರಾನ್ ಮಾತುಕತೆ; ಯುದ್ಧ ಭೀತಿ



ವಾಷಿಂಗ್ಟನ್: ಅಮೆರಿಕಾ ಹಾಗೂ ಇರಾನ್ ನಡುವಿನ ಉದ್ವಿಗ್ನತೆ ಶಮನಗೊಳಿಸುವ ಸಂಬಂಧ ಜಿನಿವಾದಲ್ಲಿ ನಡೆದ ಉಭಯ ದೇಶಗಳ ಮಾತುಕತೆ ತಾರ್ಕಿತ ಅಂತ್ಯ ಕಾಣದೆ ಮುಕ್ತಾಯವಾಗಿದ್ದು, ಇದರಿಂದಾಗಿ ಮಧ್ಯಪ್ರಾಚ್ಯದಲ್ಲಿ ಯುದ್ಧದ ವಾತಾವರಣ ಮತ್ತಷ್ಟು ಹೆಚ್ಚಾಗಿದೆ. ಇರಾನ್ ನಡೆಸುತ್ತಿರುವ ಪರಮಾಣು ಕಾರ್ಯಚರಣೆಗಳನ್ನು ಸ್ಥಗಿತಗೊಳಿಸುವುದು ಮಾತುಕತೆಯ ಪ್ರಮುಖ ಉದ್ದೇಶವಾಗಿತ್ತು. ಆದರೆ ಟ್ರಂಪ್ ಹಾಕಿದ್ದ ಎಲ್ಲಾ ಷರತ್ತುಗಳನ್ನು ಇರಾನ್ ಒಪ್ಪಿಕೊಂಡಿಲ್ಲ ಎಂದು ಯುಎಸ್ ಉಪಾಧ್ಯಕ್ಷ ಜೆ.ಡಿ.ವ್ಯಾನ್ಸ್ ತಿಳಿಸಿದ್ದಾರೆ. ಈ ರಾಜತಾಂತ್ರಿಕ ಮಾತುಕತೆಗಳನ್ನು ನಾವು ಮುಂದುವರೆಸಲಿದ್ದೇವೆ. ಈ ಮಾತುಕತೆಗಳು ಯಾವಾಗ ತನ್ನ ನಿರೀಕ್ಷಿತ ಗುರಿ ತಲುಪಲಿದೆ ಎಂಬುದನ್ನು ಅಧ್ಯಕ್ಷರು ನಿರ್ಧರಿಸಲಿದ್ದಾರೆ ಎಂದು ಮಾತುಕತೆಗಳಲ್ಲಿನ ಕಠಿಣತೆಯನ್ನು ವಿವರಿಸಿದ್ದಾರೆ. ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಘ್ಚಿ ಹೇಳಿಕೆ ನೀಡಿ, ಇಂದಿನ ಮಾತುಕತೆಗಳಲ್ಲಿ ಕೊಂಚ ಮಟ್ಟಿಗೆ ಪ್ರಗತಿ ಸಾಧಿಸಿದ್ದರೂ, ಉಭಯ ದೇಶಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಸಮಯ ತೆಗೆದುಕೊಳ್ಳುತ್ತದೆ. ಈ ಬೆನ್ನಲ್ಲೇ ಅಮೆರಿಕಾ ಮತ್ತೆ ಮಧ್ಯಪ್ರಾಚ್ಯದಲ್ಲಿ ಇರಾನ್ ಸಮೀಪದಲ್ಲಿ ವಾಯು ಮತ್ತು ನೌಕಾ ಆಸ್ತಿಗಳ ವ್ಯಾಪಕ ನಿಯೋಜನೆಯ ಭಾಗವಾಗಿ 24 ಗಂಟೆಗಳಲ್ಲಿಯೇ ಅತ್ಯಂತ ಶಕ್ತಿಶಾಲಿ ಎಫ್–16, ಎಫ್–22 ಮತ್ತು ಎಫ್–35 ಸೇರಿದಂತೆ 50ಕ್ಕೂ ಅಧಿಕ ಫೈಟರ್ ಜೆಟ್‌ಗಳನ್ನು ಸಾಗಿಸಿದೆ ಎಂದು ಜೆರುಸಲೆಂ ಪೋಸ್ಟ್ ವರದಿ ಮಾಡಿದೆ.

ಭಾರತದಿಂದ ಪಾಕಿಸ್ತಾನದ ಪರಮಾಣು ಕೇಂದ್ರದ ಮೇಲೆ ದಾಳಿ: ಟಾಮ್ ಕೂಪರ್



ನವದೆಹಲಿ: 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ವೇಳೆ ಭಾರತವು ಪಾಕಿಸ್ತಾನದ ಕಿರಣಾ ಹಿಲ್ಸ್ ಪರಮಾಣು ಕೇಂದ್ರದ ಮೇಲೆ ದಾಳಿ ನಡೆಸಿದೆ ಎಂದು ವಾಯುಯಾನ ಇತಿಹಾಸಕಾರ, ವಿಶ್ಲೇಷಕ ಟಾಮ್ ಕೂಪರ್ ಪ್ರತಿಪಾದಿಸಿದ್ದಾರೆ.

ಈ ಕುರಿತು ರಾಷ್ಟ್ರೀಯ ಮಟ್ಟದ ಸುದ್ದಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಅವರು ಸ್ಫೋಟಕ ಮಾಹಿತಿಗಳನ್ನು ಹಂಚಿಕೊಂಡಿದ್ದು, ಆಪರೇಷನ್ ಸಿಂಧೂರ್ ದಾಳಿಯು ಕೇವಲ ಮಿಲಿಟರಿ ಕಾರ್ಯಾಚರಣೆಯಾಗಿರದೆ, ಪಾಕಿಸ್ತಾನಕ್ಕೆ ನೀಡಿದ ಬಲವಾದ ಕಾರ್ಯತಂತ್ರದ ಸಂದೇಶವಾಗಿತ್ತು. ಹೆಚ್ಚಿನ ಹಾನಿ ಮಾಡದೆಯೇ ಪಾಕಿಸ್ತಾನಕ್ಕೆ ಎಚ್ಚರಿಕೆ ನೀಡಲು ಇಂತಹ ಸ್ಥಳವನ್ನು ಆರಿಸಿಕೊಳ್ಳಲಾಗಿತ್ತು. ನೋಡಿ, ನಾವು ನಿಮ್ಮನ್ನು ಯಾವಾಗ ಬೇಕಾದರೂ, ಎಲ್ಲಿ ಬೇಕಾದರೂ ಗುರಿಯಾಗಿಸಬಹುದು, ಆದ್ದರಿಂದ ನಿಮ್ಮ ಕುತಂತ್ರಗಳನ್ನು ನಿಲ್ಲಿಸಿ ಎಂದು ಹೇಳುವುದು ಇದರ ಉದ್ದೇಶವಾಗಿತ್ತು ಎಂದು ವಿವರಿಸಿದ್ದಾರೆ.

ಭಾರತವು ಮೊದಲು ರೇಡಾರ್ ವ್ಯವಸ್ಥೆಯನ್ನು ಧ್ವಂಸಗೊಳಿಸಿದ ನಂತರ ಭೂಗತ ಶೇಖರಣಾ ಕೇಂದ್ರಗಳ ಪ್ರವೇಶ ದ್ವಾರಗಳನ್ನು ಗುರಿಯಾಗಿಸಿದೆ. ಪಾಕಿಸ್ತಾನದ ಪ್ರತಿದಾಳಿ 'ಆಪರೇಷನ್ ಬುನ್ಯಾನ್–ಉನ್–ಮರ್ಸೂಸ್' ಭಾರತದ ವಾಯು ರಕ್ಷಣಾ ವ್ಯವಸ್ಥೆಯ ಮುಂದೆ ವಿಫಲವಾಯಿತು. ಈ ಒಟ್ಟಾರೆ ಘಟನೆಯು ಭಾರತಕ್ಕೆ ಸಂದ ಜಯ ಎಂದು ಬಣ್ಣಿಸಿದ್ದಾರೆ. ಆದರೆ ದಾಳಿಯ ಕುರಿತು ಭಾರತೀಯ ವಾಯುಸೇನೆ ಅಧಿಕೃತ ಮಾಹಿತಿ ನೀಡಿಲ್ಲ.

ಅಸಹಾಯಕರಿಗೆ ಕಾನೂನಿನ ಮಾಹಿತಿ ನೀಡುವುದು ಅರೆಕಾಲಿಕ ಕಾನೂನು ಸ್ವಯಂಸೇವಕರ ಆದ್ಯ ಕರ್ತವ್ಯ



ಜಿಲ್ಲಾ ನ್ಯಾಯಾಲಯದಲ್ಲಿ ಆಯೋಜಿಸಿರುವ ಅರೆಕಾಲಿಕ ಕಾನೂನು ಸ್ವಯಂ ಸೇವಕರ ತರಬೇತಿ ಕಾರ್ಯಾಗಾರದಲ್ಲಿ ಪಾಲ್ಗೊಂಡಿರುವ ಶಿಬಿರಾರ್ಥಿಗಳು

ಮಡಿಕೇರಿ, ಫೆ.18–ಅಸಹಾಯಕರು ಹಾಗೂ ಮುಖ್ಯವಾಹಿನಿಯಿಂದ ದೂರವಿರುವ ನಾಗರಿಕರಿಗೆ ಕಾನೂನಿನ ಮಾಹಿತಿ ನೀಡುವುದು ಅರೆಕಾಲಿಕ ಕಾನೂನು ಸ್ವಯಂಸೇವಕರ ಕರ್ತವ್ಯವಾಗಿದೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧ್ಯಕ್ಷರಾದ ಹೊಸಮನಿ ಪುಂಡಲಿಕ ತಿಳಿಸಿದ್ದಾರೆ.

ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಔಟಲಾ ಇಂಡಿಯಾ ಸಂಸ್ಥೆ ಹಾಗೂ ಮಡಿಕೇರಿ ವಕೀಲರ ಸಂಘವಾಗಿ ನಗರದ ಜಿಲ್ಲಾ ನ್ಯಾಯಾಲಯದಲ್ಲಿ ಆಯೋಜಿಸಿರುವ ನಾಲ್ಕು ದಿನಗಳ ಅರೆಕಾಲಿಕ ಕಾನೂನು ಸ್ವಯಂ ಸೇವಕರ ತರಬೇತಿ ಕಾರ್ಯಾಗಾರಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾನೂನು ಸೇವಾ ಪ್ರಾಧಿಕಾರದ ಜೊತೆ ಸೇರಿ ನೊಂದವರಿಗೆ ಕಾನೂನಿನ ಮಾಹಿತಿ ನೀಡುವುದು ಅರೆಕಾಲಿಕ ಕಾನೂನು ಸ್ವಯಂ ಸೇವಕರ ಜವಾಬ್ದಾರಿಯಾಗಿದ್ದು, ಆ ನಿಟ್ಟಿನಲ್ಲಿ ತಮ್ಮ ಕರ್ತವ್ಯವನ್ನು ನಿರ್ವಹಿಸಿ ಉತ್ತಮ ಸಮಾಜ ನಿರ್ಮಾಣಕ್ಕೆ ಕೈಜೋಡಿಸುವಂತೆ ಸಲಹೆ ನೀಡಿದರು.

ವಕೀಲರ ಸಂಘದ ಅಧ್ಯಕ್ಷ ಸಿ.ಟಿ.ಜೋಸೆಫ್ ಮಾತನಾಡಿ, ಕಾನೂನು ಸೇವಾ ಪ್ರಾಧಿಕಾರದಿಂದ ಮಾಹಿತಿ ಪಡೆದು ಇತರರಿಗೂ ಮಾಹಿತಿ ನೀಡುವಂತಾಗಬೇಕು. ಆ ದಿಸೆಯಲ್ಲಿ ಸಮಾಜದಲ್ಲಿ ಉತ್ತಮ ವಾತಾವರಣ ನಿರ್ಮಿಸುವಲ್ಲಿ ಅರೆಕಾಲಿಕ ಕಾನೂನು ಸ್ವಯಂ ಸೇವಕರ ಪಾತ್ರ ಹೆಚ್ಚಿನದ್ದಾಗಿದೆ ಎಂದರು.

ಹಿರಿಯ ವಕೀಲ ಕೆ.ಪಿ.ಬಾಲಸುಬ್ರಹ್ಮಣ್ಯಂ ಮಾತನಾಡಿ ಕಾನೂನು ಒಂದು ದೊಡ್ಡ ವಿಸ್ತಾರವಿದ್ದಂತೆ, ಅರಿವೇ ಗುರು ಎಂಬಂತೆ ಎಲ್ಲರೂ ಉತ್ತಮ ಬದುಕು ನಡೆಸುವಂತಾಗಬೇಕು ಎಂದು ಅವರು ಸಲಹೆ ಮಾಡಿದರು.

ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಶುಭ ಮಾತನಾಡಿ ಗ್ರಾಮೀಣ ಜನರಿಗೆ ನ್ಯಾಯದಾನ ದೊರೆಯಬೇಕು ಎಂಬ ಉದ್ದೇಶದಿಂದ ಅರೆಕಾಲಿಕ ಕಾನೂನು ಸ್ವಯಂ ಸೇವಕರಿಗೆ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಜಿಲ್ಲೆಯಲ್ಲಿ ಅರೆಕಾಲಿಕ ಸ್ವಯಂ ಸೇವಕರು 97 ಮಂದಿ ನೋಂದಣಿ ಮಾಡಿದ್ದು, ಇವರಲ್ಲಿ 70ಕ್ಕೂ ಹೆಚ್ಚು ಮಂದಿ ಕಾರ್ಯಾಗಾರಕ್ಕೆ ಆಗಮಿಸಿದ್ದಾರೆ ಎಂದರು.

ವಕೀಲರಾದ ಎಂ.ಎ.ನಿರಂಜನ್ ಅವರು ಕೌಟುಂಬಿಕ ಕಾನೂನುಗಳ ಕುರಿತು ಮಾತನಾಡಿದರು. 1ನೇ ಅಪರ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಜಿ.ಸುರೇಂದ್ರ ಅವರು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲೆ ದೌರ್ಜನ್ಯ ಕಾಯ್ದೆ ಕುರಿತು ಮಾತನಾಡಿದರು. ಔಟಲಾ ಇಂಡಿಯಾ ಸಂಸ್ಥೆಯವರು ಕಾನೂನು ಅರಿವು ಕುರಿತು ಮಾತನಾಡಿದರು.

ಕೌಟುಂಬಿಕ ನ್ಯಾಯಾಲಯದ ಪ್ರಧಾನ ನ್ಯಾಯಾಧೀಶರಾದ ಸಿ.ಕೆ.ಬಸವರಾಜ್, ಸಿ.ಜೆ.ಎಂ ಸಿ.ವೀರಭದ್ರಯ್ಯ, ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ಡಿ.ಎಸ್.ವಿನುತ, ತರಬೇತುದಾರರಾದ ಮೀಮಾನ್ಸ ಸಿಂಗ್, ಡಿ.ಶಮಾ, ನಿಹಾರಿಕಾ ನಾಯ್ಡು ಕಾನೂನು ನೆರವು ಅಭಿರಕ್ಷಕರಾದ ಮೈಮುನಾ, ಕಾನೂನು ಸೇವಾ ಪ್ರಾಧಿಕಾರದ ಆಡಳಿತ ಸಹಾಯಕರಾದ ಜಯಪ್ಪ ಇತರರು ಇದ್ದರು.

ಭಾಷಾ ಪರಿಣಿತರಿಂದ ಅಭಿಪ್ರಾಯ ಸಂಗ್ರಹಿಸಿ ಪುಸ್ತಕ ಬಿಡುಗಡೆ ಮಾಡಿ



ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭಾಗವಹಿಸಿರುವ ಗಣ್ಯರು

ಮಡಿಕೇರಿ, ಫೆ.18–ಭಾಷೆ ಯಾವುದೇ ಇರಲಿ, ಕೃತಿ ರಚನೆಕಾರರು ತಪ್ಪುಗಳು ನುಸುಳದಂತೆ ಎಚ್ಚರ ವಹಿಸಬೇಕು ಮತ್ತು ಭಾಷಾ ಪರಿಣಿತರಿಂದ ಪುಸ್ತಕದ ಕುರಿತು ಮೊದಲು ಅಭಿಪ್ರಾಯ ಸಂಗ್ರಹಿಸಬೇಕು ಎಂದು ಕೊಡವ ಸಾಹಿತ್ಯ ಅಕಾಡೆಮಿಯ ಮಾಜಿ ಅಧ್ಯಕ್ಷ ಬಾಚರಣಿಯಂಡ ಅಪ್ಪಣ್ಣ ಕಿವಿಮಾತು ಹೇಳಿದ್ದಾರೆ.

ಕೊಡವ ಮಕ್ಕಡ ಕೂಟದ 13ನೇ ವಾರ್ಷಿಕೋತ್ಸವದ ಪ್ರಯುಕ್ತ ಪುಸ್ತಕ ಬಿಡುಗಡೆ ಮಾಡಿ ಮಾತನಾಡಿದ ಅವರು, ಮೂಕೊಂಡ ಪುಷ್ಪ ದಮಯಂತಿ ಪೂಣಚ್ಚ ನೆನಪಿನ ಅಲೆಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಪತ್ರಿಕೆ ಹಾಗೂ ಪುಸ್ತಕಗಳಲ್ಲಿ ಹೆಚ್ಚು ತಪ್ಪುಗಳು ನುಸುಳುತ್ತಿರುವ ಕುರಿತು ಬೇಸರ ವ್ಯಕ್ತಪಡಿಸಿದರು. ಬರಹಗಾರರು ತಾವು ಬರೆದ ಪುಸ್ತಕದಲ್ಲಿನ ತಪ್ಪುಗಳನ್ನು ಪರಿಶೀಲಿಸಲು ತಮಗೆ ವಿಶ್ವಾಸ ಇರುವವರಿಗೆ ಮೊದಲು ಓದಲು ನೀಡಬೇಕು. ತಪ್ಪುಗಳನ್ನು ಸರಿಪಡಿಸಿದ ನಂತರವೇ ಪುಸ್ತಕಗಳನ್ನು ಬಿಡುಗಡೆಗೊಳಿಸಿ ಓದುಗರಿಗೆ ಅರ್ಪಿಸಬೇಕು. ಓದುಗರ ಅಭಿಪ್ರಾಯವನ್ನು ಕೂಡ ಸಂಗ್ರಹಿಸಬೇಕು ಎಂದು ಸಲಹೆ ನೀಡಿದರು.

ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಬಿ.ಅಯ್ಯಪ್ಪ ಮಾತನಾಡಿ 2016ರಿಂದ ಪುಸ್ತಕಗಳನ್ನು ಬಿಡುಗಡೆ ಮಾಡುವ ಮೂಲಕ ಬರಹಗಾರರನ್ನು ಪ್ರೋತ್ಸಾಹಿಸುತ್ತಾ ಬರಲಾಯಿತು. ಸರಕಾರದ ಅನುದಾನವಿಲ್ಲದೆ ಕೇವಲ 9 ವರ್ಷಗಳಲ್ಲಿ ದಾಖಲೆಯ 125 ಪುಸ್ತಕಗಳನ್ನು ಸಾಹಿತ್ಯ ಲೋಕಕ್ಕೆ ಸಮರ್ಪಿಸಿದ ಹೆಗ್ಗಳಿಕೆ ನಮ್ಮದು ಎಂದು ಹರ್ಷ ವ್ಯಕ್ತಪಡಿಸಿದರು.

ಮೂಕೊಂಡ ಪುಷ್ಪ ದಮಯಂತಿ ಪೂಣಚ್ಚರ ಕೊಡಗಿನ ವಿಶೇಷತೆಯ ಸಮಗ್ರ ಸಿರಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಸಮಾಜ ಸೇವಕ ಮಂಡೇಪಂಡ ರತನ್ ಕುಟ್ಟಯ್ಯ, ಇಂದಿನ ಡಿಜಿಟಲ್ ಯುಗದಲ್ಲಿ ಸಾಹಿತ್ಯದ ಬೆಳವಣಿಗೆ ಕಷ್ಟ ಸಾಧ್ಯವಾಗಿದೆ ಎಂದು ಅಭಿಪ್ರಾಯಪಟ್ಟರು. ಸಾಹಿತಿ ಬಾಚರಣಿಯಂಡ ರಾಣು ಅಪ್ಪಣ್ಣ ಮಾತನಾಡಿ, ಕೊಡವ ಮಕ್ಕಡ ಕೂಟ ಹಾಗೂ ಲೇಖಕರಿಗೆ ಶುಭ ಹಾರೈಸಿದರು. ಸಮಾಜ ಸೇವಕಿ ಕೊಳುವಂಡ ಅನಿತಾ ಸುಬ್ಬಯ್ಯ, ಕೊಳುವಂಡ ಸುಬ್ಬಯ್ಯ, ಮೂಕೊಂಡ ಪೂಣಚ್ಚ, ಮೂಕೊಂಡ ನಿತಿನ್ ಕುಶಾಲಪ್ಪ, ಲೇಖಕಿ ಐಚಂಡ ರಶ್ಮಿ ಮೇದಪ್ಪ, ಮುಕ್ಕಾಟಿರ ವಿನಯ್, ಕುಲ್ಲೇಟಿರ ಅಜಿತ್ ನಾಣಯ್ಯ ಹಾಗೂ ಕೊಡವ ಮಕ್ಕಡ ಕೂಟದ ಕಾರ್ಯದರ್ಶಿ ಪುತ್ತರಿರ ಕರುಣ್ ಕಾಳಯ್ಯ ಉಪಸ್ಥಿತರಿದ್ದರು.

ಲೈಬ್ರರಿ ಸೈನ್ಸ್‌ನಲ್ಲಿ ಸಿ.ಎನ್.ತಾರಾ ಸಾಧನೆ



ಸಿ.ಎನ್.ತಾರಾ

ನಾಪೋಕ್ಲು, ಫೆ.18(ದುಗ್ಗಳ)–ಕಕ್ಕಬ್ಬೆ ಗ್ರಾಮ ಪಂಚಾಯಿತಿ ಗ್ರಂಥಾಲಯ ಮೇಲ್ವಿಚಾರಕಿ ಸಿ.ಎನ್.ತಾರಾ ಲೈಬ್ರರಿ ಮತ್ತು ಇನ್ಫಾರ್ಮೇಷನ್ ಸೈನ್ಸ್‌ನ ಸರ್ಟಿಫಿಕೇಟ್ ಕೋರ್ಸ್‌ನಲ್ಲಿ ಶೇ 75.6 ಅಂಕಗಳಿಸಿ ತೇರ್ಗಡೆಯಾಗಿದ್ದಾರೆ.

ಕಕ್ಕಬ್ಬೆ ಗ್ರಾಮ ಪಂಚಾಯಿತಿ ಅರಿವು ಕೇಂದ್ರದಲ್ಲಿ ಗ್ರಂಥಾಲಯ ಮೇಲ್ವಿಚಾರಕಿ ಆಗಿರುವ ಸಿ.ಎನ್.ತಾರಾ ಗದಗ ಜಿಲ್ಲೆಯ ಮಹಾತ್ಮ ಗಾಂಧಿ ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ ನಡೆಸಿದ ಲೈಬ್ರರಿ ಮತ್ತು ಇನ್ಫಾರ್ಮಶನ್ ಸೈನ್ಸ್‌ನ ಸರ್ಟಿಫಿಕೇಟ್ ಕೋರ್ಸ್ ಪರೀಕ್ಷೆಯಲ್ಲಿ ಸಾಧನೆ ಮಾಡಿದ್ದಾರೆ. ಇವರು ಕಕ್ಕಬ್ಬೆಯ ನಾಟೋಲಂಡ ನಂಜುಂಡ ಅವರ ಪತ್ನಿ.

ಸಾರಿಗೆ ನೌಕರರ ಬೆಂಗಳೂರು ಚಲೋ ಮುಷ್ಕರಕ್ಕೆ ಬೆಂಬಲ

ಮಡಿಕೇರಿ, ಫೆ.18–ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ವಿವಿಧ ಸಂಘಟನೆಗಳು ಫೆ.19ರಂದು ಹಮ್ಮಿಕೊಂಡಿರುವ 'ಸಾರಿಗೆ ನೌಕರರ ಬೆಂಗಳೂರು ಚಲೋ' ಹೋರಾಟಕ್ಕೆ ಯುನೈಟೆಡ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್(ಎಐಟಿಯುಸಿ) ಕೊಡಗು ಜಿಲ್ಲಾ ಘಟಕ ಬೆಂಬಲ ಸೂಚಿಸಿದೆ.

'ಬೆಂಗಳೂರು ಚಲೋ' ಹೋರಾಟದಲ್ಲಿ ಕೊಡಗು ಜಿಲ್ಲೆಯ ಸಾರಿಗೆ ನೌಕರರು ಕೂಡ ಪಾಲ್ಗೊಳ್ಳುತ್ತಿದ್ದು, ನೌಕರರ ಬೇಡಿಕೆಗಳಿಗೆ ಬೆಂಬಲ ನೀಡುವುದಾಗಿ ಎಐಟಿಯುಸಿ ಜಿಲ್ಲಾಧ್ಯಕ್ಷ ಹೆಚ್.ಎಂ.ಸೋಮಪ್ಪ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ. ಜಂಟಿ ಕ್ರಿಯಾ ಸಮಿತಿ ವತಿಯಿಂದ ಜ.29ರಂದು 'ಬೆಂಗಳೂರು ಚಲೋ' ಹೋರಾಟಕ್ಕೆ ಕರೆ ನೀಡಲಾಗಿತ್ತು ಆದರೆ ಹಿರಿಯ ಕಾರ್ಮಿಕ ಮುಖಂಡ ಹೆಚ್.ವಿ.ಅನಂತ ಸುಬ್ಬರಾವ್ ನಿಧನದಿಂದಾಗಿ ಹೋರಾಟವನ್ನು ಮುಂದೂಡಲಾಗಿತ್ತು. ಸರಕಾರ ಸಾರಿಗೆ ನೌಕರರ ಬೇಡಿಕೆಗಳಿಗೆ ಇಲ್ಲಿಯವರೆಗೆ ಸೂಕ್ತ ರೀತಿಯಲ್ಲಿ ಸ್ಪಂದಿಸದೆ ಇರುವ ಕಾರಣ 4 ಸಾರಿಗೆ ನಿಗಮಗಳ ಸಾವಿರಾರು ನೌಕರರು ಹೋರಾಟ ನಡೆಸಲು ಮುಂದಾಗಿದ್ದಾರೆ. ಗುರುವಾರ ಬೆಳಿಗ್ಗೆ 11 ಗಂಟೆಗೆ ನಡೆಯುವ ಹೋರಾಟಕ್ಕೆ ಕೊಡಗು ಜಿಲ್ಲಾ ಎಐಟಿಯುಸಿ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಹೆಚ್.ಎಂ.ಸೋಮಪ್ಪ ಹೇಳಿದ್ದಾರೆ.

ಫೆ.21, ಮರಗೋಡುವಿನಲ್ಲಿ ಹಿಂದೂ ಸಂಗಮ ಶೋಭಾಯಾತ್ರೆ



ಹಿಂದೂ ಸಂಗಮ ಆಯೋಜನಾ ಸಮಿತಿ ಏರ್ಪಡಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಭಾಗವಹಿಸಿದ್ದ ಪದಾಧಿಕಾರಿಗಳು.

ಮಡಿಕೇರಿ, ಫೆ.18–ಹಿಂದೂ ಬಾಂಧವರು ಸಂಘಟಿತರಾದಾಗ ಮಾತ್ರ ಧರ್ಮ ಸಂರಕ್ಷಣೆಯಾಗುತ್ತದೆ ಎನ್ನುವ ಚಿಂತನೆಗಳ ಹಿನ್ನೆಲೆಯಲ್ಲಿ ಫೆ.21ರಂದು ತಾಲೂಕಿನ ಮರಗೋಡುವಿನಲ್ಲಿ ಬೃಹತ್ 'ಹಿಂದೂ ಸಂಗಮ' ಆಯೋಜಿಸಲಾಗಿದೆ ಎಂದು ಮರಗೋಡು ಮಂಡಲದ ಹಿಂದೂ ಸಂಗಮ ಆಯೋಜನಾ ಸಮಿತಿ ಅಧ್ಯಕ್ಷ ಬಿ.ವೈ.ಆನಂದ ರಘು ತಿಳಿಸಿದ್ದಾರೆ.

ಹಿಂದೂ ಸಂಗಮದ ಪ್ರಯುಕ್ತ ಅಂದು ಬೃಹತ್ ಶೋಭಾಯಾತ್ರೆ ನಡೆಯಲಿದ್ದು, ಸಹಸ್ರಾರು ಮಂದಿ ಹಿಂದೂ ಬಾಂಧವರು ಅದರಲ್ಲಿ ಪಾಲ್ಗೊಳ್ಳಲಿದ್ದಾರೆ. ಬಳಿಕ ಸಭಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ಸುದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು. ಸಮಿತಿಯ ಖಜಾಂಚಿ ಪಿ.ಬಿ.ಜನಾರ್ಧನ ಮಾತನಾಡಿ, ಅಂದು ಬೆಳಗ್ಗೆ 9.30 ಗಂಟೆಗೆ ಮರಗೋಡಿನ ಭಾರತಿ ಪ್ರೌಢ ಶಾಲೆ ಮೈದಾನದಿಂದ ಗ್ರಾಮದ ಕೃಷಿ ಪತ್ತಿನ ಸಹಕಾರ ಸಭಾಂಗಣದವರೆಗೆ ಸುಮಾರು 1 ಕಿ.ಮೀ.ವರೆಗೆ ಶೋಭಾಯಾತ್ರೆಯನ್ನು ಆಯೋಜಿಸಲಾಗಿದೆ. ಇದರಲ್ಲಿ ಭಾರತ ಮಾತೆ, ಶ್ರೀ ರಾಮ ಮತ್ತು ಕಾವೇರಿ ಮಾತೆಯ ಸ್ತಬ್ಧ ಚಿತ್ರಗಳ ಮೆರವಣಿಗೆ, ಕೇರಳದ ಚಂಡೆ ವಾದ್ಯ, ನಾಸಿಕ್ ವಾದ್ಯ ಮೇಳ, ಕುಣಿತ ಭಜನೆ ತಂಡಗಳು ಪಾಲ್ಗೊಳ್ಳಲಿರುವುದಾಗಿ ವಿವರಿಸಿದರು.

ಶೋಭಾಯಾತ್ರೆ ಬಳಿಕ ಕೃಷಿ ಪತ್ತಿನ ಸಹಕಾರ ಸಭಾಂಗಣದಲ್ಲಿ ಚೆರಿಯಮನೆ ಉದಯಕುಮಾರ್ ಅಧ್ಯಕ್ಷತೆಯಲ್ಲಿ ಬಹಿರಂಗ ಸಮಾವೇಶ ನಡೆಯಲಿದ್ದು, ವಿವಿಧ ದೇವಸ್ಥಾನ ಸಮಿತಿಗಳ ಅಧ್ಯಕ್ಷರು ಪಾಲ್ಗೊಳ್ಳಲಿದ್ದಾರೆ. ಈ ಸಂದರ್ಭ ಗಾಯಕ ರವಿ ಭೂತನಕಾಡು ಅವರಿಂದ ದೇಶ ಭಕ್ತಿಗೀತೆ ಗಾಯನ ಮತ್ತು ಭಜನಾ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ ಸಮಿತಿಯಲ್ಲಿ ಪ್ರಧಾನ ಕಾರ್ಯದರ್ಶಿ ಎಂ.ಕೆ.ಬೆಳ್ಳಿಯಪ್ಪ, ಉಪಾಧ್ಯಕ್ಷ ಬಿ.ಆರ್.ಲಕ್ಷ್ಮೀಪತಿ, ಸದಸ್ಯರುಗಳಾದ ಮುಕ್ಕಾಟಿ ಚಿದಂಬರಂ, ಸನತ್ ಕುಮಾರ್ ಹೊಸ್ಕೇರಿ ಅವರುಗಳು ಪಾಲ್ಗೊಂಡಿದ್ದರು.

ಫೆ.22, ಗೋಣಿಕೊಪ್ಪದಲ್ಲಿ ಹಿಂದೂ ಸಂಗಮ ಆಚರಣೆ

ಗೋಣಿಕೊಪ್ಪ, ಫೆ.18–ಗೋಣಿಕೊಪ್ಪದಲ್ಲಿ ಫೆ.22ರಂದು ಹಿಂದೂ ಸಂಗಮ ಯಾತ್ರೆ ನಡೆಯಲಿದೆ ಎಂದು ಹಿಂದೂ ಸಂಗಮದ ಸಂಯೋಜಕ ಎಂ.ಎಸ್.ಸುಬ್ರಮಣಿ ಮಾಹಿತಿ ನೀಡಿದ್ದಾರೆ.

ಫೆ.22ರಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಆವರಣದಿಂದ ಆರಂಭವಾಗುವ ಶೋಭಾಯಾತ್ರೆ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನದಲ್ಲಿ ಸಮಾವೇಶಗೊಳ್ಳಲಿದೆ. ಮೆರವಣಿಗೆಯಲ್ಲಿ ಡೊಳ್ಳು ಕುಣಿತ, ಭಜನೆ ಕುಣಿತ, ಕೇರಳದ ಮಹಿಳೆಯರಿಂದ ಸಿಂಗಾರಿ ಮೇಳ, ಕೊಡವ ವಾಲಗ, ನಾಗರಹೊಳೆ ಬುಡಕಟ್ಟು ಸಮುದಾಯದವರ ನೃತ್ಯ, ಛದ್ಮವೇಷಗಳು, ಕೊಡಗಿನ ಉಮ್ಮತ್ತಾಟ್ ಸೇರಿದಂತೆ ಹಲವಾರು ಸಾಂಸ್ಕೃತಿಕ ಮೇಳದೊಂದಿಗೆ ಮೆರವಣಿಗೆ ಆಕರ್ಷಣೀಯವಾಗಿ ಹಿಂದುತ್ವವನ್ನು ಪ್ರತಿಪಾದಿಸಲಿದೆ ಎಂದು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಶೋಭಾಯಾತ್ರೆ ಬೆಳಿಗ್ಗೆ 10 ಗಂಟೆಗೆ ಪ್ರಾರಂಭವಾಗಲಿದ್ದು ನಂತರ ಸರ್ಕಾರಿ ಶಾಲಾ ಮೈದಾನದಲ್ಲಿ ಮಧ್ಯಾಹ್ನ 12 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಲಿದೆ. ಅಧ್ಯಕ್ಷತೆಯನ್ನು ಪ್ರಮೋದ್ ಕಾಮತ್ ವಹಿಸಲಿದ್ದು, ಅತಿಥಿಗಳಾಗಿ ಪುರೋಹಿತ ಮಹೇಶ್ ಭಟ್, ಶಿಕ್ಷಕಿ ಬೆಂಜಂಡ ರಶ್ಮಿ ದೇವಯ್ಯ ಭಾಗವಹಿಸಲಿದ್ದಾರೆ. ಸಭಾ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿದೆ ಎಂದು ತಿಳಿಸಿದರು.

ಗುಮ್ಮಟೀರ ಕಿಲನ್ ಗಣಪತಿ, ರಾಜೇಶ್.ಕೆ, ಸುರೇಶ್‌ರೈ, ಸೋಮಯ್ಯ ಉಪಸ್ಥಿತರಿದ್ದರು.

ಪಿ.ಪಿ.ವೇದಾವತಿ ನಿಧನ



ನಾಪೋಕ್ಲು, ಫೆ.18– ಸಮೀಪದ ಕುಂಜಿಲ ಗ್ರಾಮದ ನಿವಾಸಿ ಪಿ.ಪಿ.ವೇದಾವತಿ (65) ಮಂಗಳವಾರ ನಿಧನರಾದರು. ಮೃತರು ಇಬ್ಬರು ಪುತ್ರರು, ಪುತ್ರಿಯನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಬುಧವಾರ ಕುಂಜಿಲ ಗ್ರಾಮದಲ್ಲಿ ಜರುಗಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾದಪ್ಪನ ಬೆಟ್ಟದಲ್ಲಿ ಸಂಭ್ರಮದ ಶಿವರಾತ್ರಿ ಮಹಾ ರಥೋತ್ಸವ



ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಬುಧವಾರ ಮಹಾಶಿವರಾತ್ರಿ ಮಹಾ ರಥೋತ್ಸವ ವೈಭವದಿಂದ ನಡೆಯಿತು. ಲಕ್ಷಾಂತರ ಭಕ್ತರು ಪಾಲ್ಗೊಂಡಿದ್ದರು.

ಎಲ್ಲೆಡೆ ಮೊಳಗಿದ ಉಘೇ... ಉಘೇ ಮಾದಪ್ಪ ಜಯಘೋಷ

ಲಕ್ಷಾಂತರ ಭಕ್ತ ಸಮೂಹ ಭಾಗಿ



ಹನೂರು: ತಾಲೂಕಿನ ಪ್ರಸಿದ್ಧ ಯಾತ್ರಾ ಕ್ಷೇತ್ರವಾದ ಹನೂರು ತಾಲೂಕಿನ ಶ್ರೀಮಲೆ ಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಬುಧವಾರ ಬೆಳಗ್ಗೆ ಮಹಾಶಿವರಾತ್ರಿ ಮಹಾರಥೋತ್ಸವ ಲಕ್ಷಾಂತರ ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವದ ಅಂಗವಾಗಿ ತೇರನ್ನು ವಿವಿಧ ಪುಷ್ಪ, ತಳಿರು–ತೋರಣ ಹಾಗೂ ಬಣ್ಣ ಬಣ್ಣದ ಬಟ್ಟೆಗಳಿಂದ ಸಿಂಗರಿಸಲಾಗಿತ್ತು. ಬೇಡಗಂಪಣ ಅರ್ಚಕರು ದೇಗುಲದ ಗರ್ಭಗುಡಿಯಲ್ಲಿ ಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಿದರು. ಬಳಿಕ ಬಿಳಿ ಆನೆ ಉತ್ಸವವನ್ನು ನೆರವೇರಿಸಲಾಯಿತು.

ನಂತರ ತೇರಿನ ಬಳಿ ತೆರಳಿ ಧಾರ್ಮಿಕ ವಿಧಿ–ವಿಧಾನದೊಂದಿಗೆ ಪೂಜಾ ಕೈಂಕರ್ಯ ನಡೆಸಿ, ಬೆಳಗ್ಗೆ 10.05ರ ಸುಮಾರಿಗೆ ಸ್ವಾಮಿಯ ವಿಗ್ರಹವನ್ನು ರಥದಲ್ಲಿ ಕುಳ್ಳರಿಸಿ ಬೂದು ಕುಂಬಳ ಕಾಯಿಯಿಂದ ದೃಷ್ಟಿ ತೆಗೆಯಲಾಯಿತು. ಬಳಿಕ ಮಹಾಮಂಗಳಾರತಿ ಹಾಗೂ ಬೇಡಗಂಪಣರ 108 ಹೆಣ್ಣು ಮಕ್ಕಳು ಬೆಲ್ಲದ ಆರತಿ ಬೆಳಗಿದ ನಂತರ ಮಹಾ ರಥೋತ್ಸವಕ್ಕೆ ಚಾಲನೆ ನೀಡಲಾಯಿತು.

ಬಳಿಕ ಸೂಕ್ತ ಪೊಲೀಸ್ ಬಂದೋಬಸ್ತ್‌ನೊಂದಿಗೆ ದೇಗುಲದ ಮುಖ್ಯದ್ವಾರದ ಆವರಣದಿಂದ ಸತ್ತಿಗೆ, ಸೂರಪಾನಿ, ಛತ್ರಿ, ಚಾಮರ, ನಂದಿಧ್ವಜ ಹಾಗೂ ಮಂಗಳ ವಾದ್ಯದೊಂದಿಗೆ ದೇಗುಲದ ಸುತ್ತ ಪ್ರದಕ್ಷಿಣೆ ಹಾಕಲಾಯಿತು. ಇದೇ ವೇಳೆ ಹುಲಿ ವಾಹನ, ಬಸವ ವಾಹನ ಹಾಗೂ ರುದ್ರಾಕ್ಷಿ ವಾಹನದ ಉತ್ಸವವನ್ನು ನೆರವೇರಿಸಲಾಯಿತು.

ಈ ವೇಳೆ ಬೇಡಗಂಪಣ ಸಮುದಾಯದ ಹೆಣ್ಣು ಮಕ್ಕಳು ಬೆಲ್ಲದ ಆರತಿ ಹಿಡಿದು ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ವೀರಗಾಸೆ ಕುಣಿತ ಭಕ್ತರ ಗಮನ ಸೆಳೆಯಿತು. ರಥೋತ್ಸವದಲ್ಲಿ ನೆರೆದಿದ್ದ ಭಕ್ತರು ತೇರಿಗೆ ಹಣ್ಣು, ದವನ, ಧನ, ಧಾನ್ಯ ಎಸೆದು ನಮಿಸುವುದರ ಮೂಲಕ ಮಾದಪ್ಪನ ಕೃಪೆಗೆ ಪಾತ್ರರಾದರು.

ಉಘೇ... ಉಘೇ... ಮಾದಪ್ಪ: ರಥೋತ್ಸವದಲ್ಲಿ ತಮಿಳುನಾಡು ಸೇರಿದಂತೆ ಚಾಮರಾಜನಗರ, ಬೆಂಗಳೂರು, ಮೈಸೂರು, ಮಂಡ್ಯ, ರಾಮನಗರ, ಕನಕಪುರ, ಚನ್ನಪಟ್ಟಣ, ಮದ್ದೂರು, ದೊಡ್ಡಬಳ್ಳಾಪುರ, ಮಳವಳ್ಳಿ, ಮಂಡ್ಯ, ನಂಜನಗೂಡು, ಟಿ.ನರಸೀಪುರ, ಹೆಚ್.ಡಿ.ಕೋಟೆ ಹಾಗೂ ರಾಜ್ಯದ ವಿವಿಧೆಡೆಯಿಂದ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಭಾಗಿಯಾಗಿದ್ದರು.

ರಥವನ್ನು ಎಳೆಯುವಾಗ ಭಕ್ತರು ಜೈ ಮಹತ್ ಮಲೆಯಾ, 'ಉಘೇ ಮಾದಪ್ಪ ಉಘೇ' ಎಂಬಿತ್ಯಾದಿ ಜಯ ಘೋಷಗಳು ಮುಗಿಲು ಮುಟ್ಟಿದವು. ರಥೋತ್ಸವ ನಡೆದ ಬಳಿಕ ಭಕ್ತರು ರಥವನ್ನು ಸ್ಪರ್ಶಿಸಿ ನಮಸ್ಕರಿಸುವುದರ ಮೂಲಕ ಮಾದಪ್ಪನನ್ನು ನೆನೆದರು.

> 5 ದಿನಗಳ ಕಾಲ ನಡೆದ ಶಿವರಾತ್ರಿ ಜಾತ್ರಾ ಮಹೋತ್ಸವದಲ್ಲಿ 9–10 ಲಕ್ಷ ಮಂದಿ ಕ್ಷೇತ್ರಕ್ಕೆ ಭೇಟಿ ನೀಡಿದ್ದು, ಜಾತ್ರಾ ಮಹೋತ್ಸವ ಅವಧಿಯಲ್ಲಿ 6.5 ಲಕ್ಷ ಲಾಡುಗಳು ಮಾರಾಟವಾಗಿವೆ. ಸುಭ್ರಮದಿಂದ ಹಾಗೂ ಸುಸೂತ್ರವಾಗಿ ರಥೋತ್ಸವ ನಡೆದಿದೆ.
> – ಎ.ಈ. ರಘು, ಕಾರ್ಯದರ್ಶಿ, ಮಲೆ ಮಹದೇಶ್ವಬೆಟ್ಟ ಪ್ರಾಧಿಕಾರ.

ಸೂಕ್ತ ಪೊಲೀಸ್ ಬಂದೋಬಸ್ತ್: ಮಹಾ ರಥೋತ್ಸವದ ಹಿನ್ನೆಲೆಯಲ್ಲಿ ಮಹದೇಶ್ವರ ಬೆಟ್ಟದ ದೇಗುಲದ ಆವರಣದಲ್ಲಿ ಬೆಳಗ್ಗೆ 6ರಿಂದಲೇ ಲಕ್ಷಾಂತರ ಸಂಖ್ಯೆಯಲ್ಲಿ ಭಕ್ತರು ಕಿಕ್ಕಿರಿದು ತುಂಬಿದ್ದರು. ಈ ಹಿನ್ನೆಲೆಯಲ್ಲಿ ಪೊಲೀಸ್ ಇಲಾಖೆಯಿಂದ ಸೂಕ್ತ ಬಂದೋಬಸ್ತ್ ಕಲ್ಪಿಸಲಾಗಿತ್ತು. ರಥದ ಪೂಜಾ ಕೈಂಕರ್ಯದ ವೇಳೆ ಪೊಲೀಸರು ಭಕ್ತರನ್ನು ರಥ ಸಂಚರಿಸುವ ಮಾರ್ಗ ದಿಂದ ದೂರ ಸರಿಸುವಂತೆ ಸೂಚನೆ ನೀಡುತ್ತಿದ್ದರು. ರಥೋತ್ಸವ ಪ್ರಾರಂಭ ವಾದ ಬಳಿಕ ಬದಿಯಲ್ಲಿ ನಿಂತಿದ್ದ ಭಕ್ತರು ತೇರನ್ನು ಎಳೆಯಲು ಜಯಘೋಷಗಳನ್ನು ಕೂಗುತ್ತಾ ನಾ ಮುಂದು ತಾ ಮುಂದು ಎಂದು ಮುಂದೆ ಬಂದಾಗ ಪೊಲೀಸರು ಭಕ್ತರನ್ನು ದೂರ ಸರಿಸಲು ಹರಸಾಹಸ ಪಡಬೇಕಾಯಿತು.

ತಮ್ಮೂರಿಗೆ ಹಿಂದುರಿಗಿದ ಭಕ್ತರು: ಐದು ದಿನಗಳಿಂದ ಮಲೆ ಮಹದೇಶ್ವರ ಬೆಟ್ಟದಲ್ಲಿ ಬೀಡು ಬಿಟ್ಟಿದ್ದ ಭಕ್ತಾದಿಗಳು ಬುಧವಾರ ರಥೋತ್ಸವ ಮುಗಿದ ಬಳಿಕ ತಮ್ಮ ತಮ್ಮ ಊರುಗಳಿಗೆ ಹಿಂದಿರುಗಿದರು. ಈ ಬಾರಿ ಜಾತ್ರೆಗೆ ಸುಮಾರು 8 ಲಕ್ಷಕ್ಕೂ ಹೆಚ್ಚು ಮಂದಿ ಭಕ್ತರು ಆಗಮಿಸಿದ್ದರು.

'ರಸ್ತೆ ನಿಯಮ ಪಾಲಿಸಿ, ಜೀವ ಉಳಿಸಿ' ಫಲಕ ಹಿಡಿದು ನಿಲ್ಲುವ ಶಿಕ್ಷೆ



ಚಾಮರಾಜನಗರ: ರಸ್ತೆ ಸಂಚಾರ ನಿಯಮ ಉಲ್ಲಂಘಿಸಿ ಪೊಲೀಸರಿಗೆ ಸಿಕ್ಕಿ ಬಿದ್ದ ಸಹೋದರರಿಬ್ಬರಿಗೆ 'ರಸ್ತೆ ನಿಯಮ ಪಾಲಿಸಿ ಜೀವ ಉಳಿಸಿ, ರಸ್ತೆ ಸುರಕ್ಷತಾ ನಿಯಮ ಪಾಲಿಸಿ ಅಪಘಾತ ತಪ್ಪಿಸಿ' ಫಲಕವನ್ನು ನಗರದ ಭುವನೇಶ್ವರಿ ವೃತ್ತದಲ್ಲಿ ಹಿಡಿದು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವಂತೆ ಚಾಮರಾಜನಗರ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರು ಶಿಕ್ಷೆ ವಿಧಿಸಿ, ಆದೇಶಿಸಿದ್ದಾರೆ.

ನಗರದ ನಿವಾಸಿಗಳಾದ ಸುರೇಶ್ ಹಾಗೂ ಸರ್ಕಾರಿ ಶಾಲೆಯ ಶಿಕ್ಷಕ ರಾಜಶೇಖರ್ ಶಿಕ್ಷೆಗೆ ಗುರಿಯಾದವರು.

ದ್ವಿಚಕ್ರ ವಾಹನ ಸವಾರ ಸುರೇಶ್ ಎಂಬಾತ ಅಡ್ಡ ಮಾರ್ಗದಲ್ಲಿ ಬಂದು ಸಂಚಾರಿ ನಿಯಮ ಉಲ್ಲಂಘಿಸಿದ್ದಕ್ಕೆ ಸಂಚಾರಿ ಪೊಲೀಸರು ದಂಡ ವಿಧಿಸಲು ಮುಂದಾಗಿದ್ದರು. ಇದನ್ನು ಪ್ರಶ್ನಿಸಿ ಸುರೇಶ್ ಸಹೋದರ ರಾಜಶೇಖರ್ ಎಂಬುವರು ಸಂಚಾರಿ ಪೊಲೀಸರೊಂದಿಗೆ ವಾಗ್ವಾದ ನಡೆಸಿದರು. ಈ ಬಗ್ಗೆ ಇಬ್ಬರ ವಿರುದ್ಧ ಸಂಚಾರಿ ಪೊಲೀಸರು ಪ್ರಕರಣ ದಾಖಲಿಸಿದ್ದರು.

ಈ ಸಂಬಂಧ ವಿಚಾರಣೆ ನಡೆಸಿದ ಚಾಮರಾಜನಗರ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯದ ನ್ಯಾಯಾಧೀಶರಾದ ಸಿ.ಡಿ.ಪ್ರಕಾಶ್ ಅವರು, 'ರಸ್ತೆ ನಿಯಮ ಪಾಲಿಸಿ ಜೀವ ಉಳಿಸಿ, ರಸ್ತೆ ಸುರಕ್ಷತಾ ನಿಯಮ ಪಾಲಿಸಿ ಅಪಘಾತ ತಪ್ಪಿಸಿ' ಫಲಕವನ್ನು ಹಿಡಿದು ನಗರದ ಭುವನೇಶ್ವರಿ ವೃತ್ತದಲ್ಲಿ ಮೂರು ಗಂಟೆಗಳ ಕಾಲ ಸಾರ್ವಜನಿಕರಲ್ಲಿ ಸಂಚಾರಿ ನಿಯಮಗಳ ಜಾಗೃತಿ ಮೂಡಿಸುವಂತೆ ಶಿಕ್ಷೆ ವಿಧಿಸಿ ಆದೇಶಿಸಿದ್ದಾರೆ.

ಅದರಂತೆ ಸಹೋದರರಿಬ್ಬರು ನಗರದ ಭುವನೇಶ್ವರಿ ವೃತ್ತದಲ್ಲಿ ಫಲಕ ಹಿಡಿದು ಗಮನ ಸೆಳೆದರು. ದ್ವಿಚಕ್ರ ವಾಹನ, ಕಾರು, ಲಾರಿ, ಬಸ್, ಚಾಲಕರಿಗೆ ಜಾಗೃತಿ ಮೂಡಿಸಿದರು.

ಒಳ ಮೀಸಲಾತಿ ಅನ್ಯಾಯ ಖಂಡಿಸಿ ಇಂದು ಪ್ರತಿಭಟನೆ

ಕೊಳ್ಳೇಗಾಲ, ಫೆ.18– ತಾಲೂಕು ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಒಳಮೀಸಲಾತಿಯಲ್ಲಿನ ಅನ್ಯಾಯವನ್ನು ಖಂಡಿಸಿ, ಸರ್ಕಾರದ ನೀತಿ ಪ್ರಶ್ನಿಸಿ ಫೆ.19ರ ಬೆಳಗ್ಗೆ 10ಗಂಟೆಗೆ ಬೃಹತ್ ಪ್ರತಿಭಟನಾ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದ್ದು ಹೆಚ್ಚಿನ ಸಂಖ್ಯೆಯಲ್ಲಿ ಸಮಾಜದ ಬಾಂಧವರು ಆಗಮಿಸಿ ಪ್ರತಿಭಟನೆ ಯಶಸ್ವಿಗೊಳಿಸಬೇಕು ಎಂದು ಒಕ್ಕೂಟದ ಸಂಚಾಲಕ ಶೇಖರ್ ಬುದ್ಧ ಕೋರಿದ್ದಾರೆ.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುರುವಾರ ತಾಲೂಕು ಬಲಗೈ ಸಮುದಾಯಗಳ ಒಕ್ಕೂಟದ ವತಿಯಿಂದ ಎಂಜಿಎಸ್ವಿ ಮೈದಾನದಿಂದ ಸರ್ಕಾರದ ಗಮನ ಸೆಳೆಯುವ ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು. ಈ ವೇಳೆ ನಗರಸಭೆ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ, ಬಸ್ತೀಪುರ ಶಾಂತರಾಜು, ಮಾಜಿ ಸದಸ್ಯ ಕೆ.ಕೆ.ಮೂರ್ತಿ, ಚಂದು, ಜಿ.ಪಂ ಮಾಜಿ ಸದಸ್ಯ ಮುಳ್ಳೂರು ಕಮಲ್, ಅಣಗಳ್ಳಿ ಬಸವರಾಜು, ಲಿಂಗಣ್ಣ ಉತ್ತಂಬಳ್ಳಿ, ಪ್ರಕಾಶ್ ಬಸ್ತೀಪುರ, ಸಿದ್ದಪ್ಪಾಜಿ ಇನ್ನಿತರಿದ್ದರು.

ಗೋವು ಸಾಗಿಸುತ್ತಿದ್ದ ಲಾರಿ ತಡೆದಿದ್ದಕ್ಕೆ ಹಲ್ಲೆ

ಚಾಮರಾಜನಗರ: ಕಸಾಯಿಖಾನೆಗೆ ಗೋ ಸಾಗಣೆ ಮಾಡುತ್ತಿದ್ದ ಲಾರಿಯನ್ನು ತಡೆಯಲು ಹೋದವರ ಮೇಲೆ ಗೋ ಸಾಗಾಣಿಕೆದಾರರು ತೀವ್ರ ಹಲ್ಲೆ ನಡೆದ ಘಟನೆ ತಾಲೂಕಿನ ಪುಣಜನೂರು ಗ್ರಾಮದಲ್ಲಿ ನಡೆದಿದೆ.

ಕರ್ನಾಟಕದ ಗಡಿ ಮೂಲಕ ಕೇರಳದ ಕಸಾಯಿಖಾನೆಗೆ ವ್ಯಾಪಕ ಗೋ ಸಾಗಾಣಿಕೆ ಹಿನ್ನೆಲೆ ಮಾಹಿತಿ ಅರಿತ ಬೆಂಗಳೂರು ಮೂಲದ ಹಿಂದೂ ರಾಷ್ಟ್ರ ರಕ್ಷಣಾ ಪಡೆಯ ಮುಖಂಡರಿಂದ ಜಾನುವಾರು ಸಾಗಿಸುತ್ತಿದ್ದ ಕ್ಯಾಂಟರ್ ತಡೆದು ಕ್ಯಾಂಟರ್‌ನಲ್ಲಿದ್ದ 25 ಗೋವುಗಳನ್ನು ರಕ್ಷಿಸಲು ಮುಂದಾಗಿದ್ದಾರೆ.

ಈ ವೇಳೆ ಗೋ ಸಾಗಾಣಿಕೆದಾರರು ಹಲ್ಲೆ ನಡೆಸಿದ್ದಾರೆ. ಇದರಿಂದ ಘಟನಾ ಸ್ಥಳದಲ್ಲಿ ಕೆಲಕಾಲ ಬಿಗುವಿನ ವಾತಾವರಣ ನಿರ್ಮಾಣವಾಯಿತು. ವಿಷಯ ತಿಳಿದು ಸ್ಥಳಕ್ಕೆ ಚಾಮರಾಜನಗರ ಪೂರ್ವ ಗ್ರಾಮಾಂತರ ಪೊಲೀಸರ ಭೇಟಿ ಜಾನುವಾರುಗಳ ರಕ್ಷಣೆ ಮಾಡಿ, ಇಬ್ಬರನ್ನು ಬಂಧಿಸಿದ್ದಾರೆ. ಘಟನೆಯಲ್ಲಿ ಗಾಯಗೊಂಡ ಇಬ್ಬರು ಸಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ವೃದ್ಧೆಯ ಮಾಂಗಲ್ಯಸರ ಕಸಿದು ಪರಾರಿ

ಕೊಳ್ಳೇಗಾಲ: ತಾಲೂಕಿನ ಸುರಾಪುರ ಗ್ರಾಮದಲ್ಲಿ ಹಸುವಿಗೆ ಹುಲ್ಲು ಹಾಕುತ್ತಿದ್ದ ವೃದ್ಧೆಯ ಕತ್ತಿನಲ್ಲಿದ್ದ ಸುಮಾರು 6 ಲಕ್ಷ ರೂ. ಮೌಲ್ಯದ 45 ಗ್ರಾಂ ತೂಕದ ಮಾಂಗಲ್ಯ ಸರವನ್ನು ಅಪರಿಚಿತ ವ್ಯಕ್ತಿಯೋರ್ವ ಕಸಿದುಕೊಂಡು ಪರಾರಿಯಾಗಿರುವ ಘಟನೆ ಜರುಗಿದೆ.

ಸುರಾಪುರ ಗ್ರಾಮದ ಕಮಲಮ್ಮ ಎಂಬಾಕೆ ಮನೆಯ ಹಿಂಭಾಗದ ಹಿತ್ತಲಿನಲ್ಲಿ ಹಸುವಿಗೆ ಹುಲ್ಲು ಹಾಕಲು ಹೋಗಿದ್ದ ವೇಳೆ ಯಾರೋ ಅಪರಿಚಿತನೋರ್ವ ಸರವನ್ನು ಕಸಿದುಕೊಂಡು ಓಡಿ ಹೋಗಿದ್ದಾನೆ. ಮಹಿಳೆ ಕಿರುಚಿಕೊಂಡರು. ಆದರೆ ಅಷ್ಟರಲ್ಲೇ ಕಳ್ಳ ಪರಾರಿಯಾಗಿದ್ದ. ವಿಚಾರ ತಿಳಿಯುತಿದ್ದಂತೆ ಸ್ಥಳಕ್ಕೆ ಯಳಂದೂರು ವೃತ್ತ ನಿರೀಕ್ಷಕ ಸುಬ್ರಮಣ್ಯ, ಅಗರ ಮಾಂಬಳ್ಳಿ ಪೊಲೀಸ್ ಠಾಣೆಯ ಎಸ್ಐ ಕರಿಬಸಪ್ಪ, ಹೆಚ್.ಸಿ.ಪ್ರಕಾಶ್ ಬೇಟಿ ನೀಡಿ ಸ್ಥಳಕ್ಕೆ ಪರಿಶಿಲಿಸಿದರು. ಈ ಸಂಬಂಧ ಅಗರ ಮಾಂಬಳ್ಳಿ ಪೊಲೀಸ್ ಠಾಣೆಯಲ್ಲಿ ವೃದ್ದೆಯ ಮಗ ವೆಂಕಟೇಶ್ ದೂರು ನೀಡಿದ್ದು, ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಲಕ್ಷ್ಮೀ ದೇವಿ ಅಮ್ಮನವರ ಕೊಂಡೋತ್ಸವ



ಚಾಮರಾಜನಗರ: ತಾಲೂಕಿನ ಚಂದಕವಾಡಿ ಗ್ರಾಮದಲ್ಲಿ ಗ್ರಾಮ ದೇವತೆ ಲಕ್ಷೀದೇವಿ ಅಮ್ಮನವರ ಕೊಂಡೋತ್ಸವ ಬುಧವಾರ ಬೆಳಗಿನ ಜಾವ ಸಾವಿರಾರು ಭಕ್ತರ ಸಮೂಹದಲ್ಲಿ ನೆರವೇರಿತು

ಮಂಗಳವಾರ ಇಡೀರಾತ್ರಿ ಪೂಜಾ ಕೈಂಕರ್ಯಗಳು ನೆರವೇರಿದವು. ನಂತರ ಗ್ರಾಮದ ಪಕ್ಕದಲ್ಲೇ ಹರಿಯುವ ಸುವರ್ಣಾವತಿ ನದಿ ದಡದಲ್ಲಿ ಪೂಜೆ ಸಲ್ಲಿಸಿ ತದನಂತರ ದೇವರ ಅರಳಿ ಮರದ ತಟದಲ್ಲಿ ಪೂಜೆ ಸಲ್ಲಿಸಲಾಯಿತು. ಅಲ್ಲಿಂದ ಸತ್ತಿಗೆ ಸೂರಪಾನಿಯೊಂದಿಗೆ ಮಂಗಳವಾದ್ಯ ಸಮೇತ ಮೆರವಣಿಗೆಯೊಂದಿಗೆ ದೇವಸ್ಥಾನದ ಬಳಿಗೆ ಬಂದು ಪೂಜೆ ಸಲ್ಲಿಸಿ ಕಗ್ಗಲಿ ಕೊಂಡದ ಮೇಲೆ ಸತ್ತಿಗೆ ಹೊತ್ತುಕೊಂಡು ಸಾಗಿದರು. ನಂತರ ಹರಕೆ ಹೊತ್ತ ಹತ್ತಾರು ಜನರು ಕೊಂಡ ಹಾಯುವ ಮೂಲಕ ಕೊಂಡೋತ್ಸವ ನೆರವೇರಿತು.

ಶುಕ್ರವಾರ ರಥೋತ್ಸವ : ಚಂದಕವಾಡಿ ಲಕ್ಷ್ಮೀದೇವಿ ಜಾತ್ರೆಯು ಮೂರು ದಿನಗಳ ಕಾಲ ನಡೆಯಲಿದೆ. ಅಲ್ಲದೆ ಈ ಜಾತ್ರೆಗೆ ಧನಗಳ ಪರಿಷೆ ವಿಶೇಷ ಮೆರಗು ನೀಡಲಿದೆ. ಶುಕ್ರವಾರ ಸಂಜೆ ರಥೋತ್ಸವ ನಡೆಯಲಿದ್ದು ಸಾವಿರಾರು ಭಕ್ತಾದಿಗಳು ಕಣ್ತುಂಬಿಕೊಳ್ಳಲಿದ್ದಾರೆ.

ಶೇಖರಾಜು ನಿಧನ



ಆಲೂರು: ಚಾಮರಾಜನಗರ ತಾಲೂಕಿನ ಆಲೂರು ಗ್ರಾಮದ ನಿವಾಸಿ ಎ.ಎಸ್.ಶೇಖರಾಜು(73) ಮಂಗಳವಾರ ರಾತ್ರಿ ನಿಧನರಾದರು. ಮೃತರು ಪತ್ನಿ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಅಂತ್ಯಕ್ರಿಯೆ ಬುದವಾರ ಗ್ರಾಮದ ಅವರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ

ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

ಸೈಟು ಮಾರಾಟಕ್ಕಿದೆ
30x40 N/F
ಶ್ರೀನಗರ 'C' ಬ್ಲಾಕ್
ಜೆ.ಪಿ. ನಗರ ರಿಂಗ್ ರಸ್ತೆ ಹತ್ತಿರ.
9008570086
9591810822

ಪುರುಷರು ಬೇಕಾಗಿದ್ದಾರೆ
ಹೆಲ್ಪರ್ ಕೆಲಸಕ್ಕೆ ವಿದ್ಯಾರ್ಹತೆ ಬೇಕಿಲ್ಲ. ಸಂಬಳ 17,500+ ESI, PF ವಯಸ್ಸು 18 ರಿಂದ 45ರ ಒಳಗಿರ ಬೇಕು. 8hrs Duty, 3 Shifts ಯಾವುದೇ Fees ಇರುವುದಿಲ್ಲ, ಹೆಚ್ಚಿನ ಮಾಹಿತಿಗಾಗಿ ಭೇಟಿ ನೀಡತಕ್ಕದ್ದು. ಸ್ಥಳ : CIPET ಕಾಲೇಜ್ ಹತ್ತಿರ, ಮೇಟಗಳ್ಳಿ ರಿಂಗ್ ರೋಡ್, ಮೈಸೂರು
9986874574

ಬೇಕಾಗಿದ್ದಾರೆ
ಕುವೆಂಪುನಗರದಲ್ಲಿರುವ ಪಾರ್ಸೆಲ್ ಹೋಟೆಲ್‌ಗೆ ಪಾರ್ಟ್ ಟೈಂ ಕೆಲಸದವರು. ಸಮಯ : ಬೆಳಗ್ಗೆ 9.30 ರಿಂದ 3 ಗಂಟೆ.– 7000, ಸಾಯಂಕಾಲ : 5 ರಿಂದ 9.30 ರವರೆಗೆ– 7000/– ಫುಲ್‌ಟೈಂ ಕೆಲಸಕ್ಕೆ 14000/– ಸಂಬಳದೊಂದಿಗೆ ಊಟ, ವಸತಿ ಉಚಿತ.
Ph: 7204404170

ತಕ್ಷಣ ಬೇಕಾಗಿದ್ದಾರೆ
ಇನ್‌ಫೋಸಿಸ್ ಹಿಂಭಾಗ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಿದ್ಯಾರ್ಹತೆ : SSLC ಮತ್ತು ಮೇಲ್ಪಟ್ಟು, ಸಂಬಳ : ಸೂಪರ್‌ವೈಸರ್ 21000/- ಗಾರ್ಡ್ 20,000/-
9880727819
9620777819

ಬೇಕಾಗಿದ್ದಾರೆ
ಸೂಪರ್‌ವೈಸರ್, ಡ್ರೈವರ್
Contact
9731356002
9606349136

SITE FOR SALE
30x40 West face site Kbl silicon city Near Infosys and beml ltd Mysore, Contact
7338250763
9980616608

ತಕ್ಷಣ ಬೇಕಾಗಿದ್ದಾರೆ
ನಂಜನಗೂಡಿನ ಕಡಕೊಳ ಏರಿಯಾದಲ್ಲಿನ TVS ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಮೇಲ್ಪಟ್ಟು, ವಯೋಮಿತಿ : 50 ವರ್ಷದೊಳಗೆ ಸಂಬಳ : 18000 (26 Days, 8 hrs) ಊಟ, ತಿಂಡಿ, ರೂಮ್ ಸೌಲಭ್ಯವಿರುತ್ತದೆ.
9620777819

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್
Mob: 9964733988

ಹೊಸ-ಮನೆ ಮಾರಾಟಕ್ಕಿದೆ
20x28 - 3 BHK Duplex ಮನೆ, MUDA Approved, Pvt Layout, ಲಲಿತಾದ್ರಿನಗರ(ಬಾಲಾಜಿ ನಗರ)ದಲ್ಲಿ ಮಾರಾಟಕ್ಕಿದೆ. 73 ಲಕ್ಷ (Nego)
9480222708
7760065890

ಬೇಕಾಗಿದ್ದಾರೆ
ಕಂಪೆನಿ ಕೆಲಸಕ್ಕೆ ಯುವಕ–ಯುವತಿಯರು ಬೇಕಾಗಿದ್ದಾರೆ. ವೇತನ 15000–20000, ಊಟ ವಸತಿ ಉಚಿತ.
84313 72086
ಮಂಗಳೂರು

ಬೇಕಾಗಿದ್ದಾರೆ
ಆಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡುವಂಥವರು , ಮಹಿಳೆಯರು ಬೇಕಾಗಿದ್ದಾರೆ. ಎಸ್‌ಎಸ್‌ಎಲ್‌ಸಿ, ಪಿಯುಸಿ, ಫೇಲ್ /ಪಾಸ್ ಊಟ ವಸತಿ ದೊರೆಯುತ್ತದೆ
9110455297

ಬೇಕಾಗಿದ್ದಾರೆ
ಮಂಡ್ಯದ ವೃದ್ಧಾಶ್ರಮದಲ್ಲಿ ಉಳಿದುಕೊಂಡು ಕೆಲಸ ಮಾಡಲು ಹೋಂ ನರ್ಸ್‌ಗಳು ಬೇಕಾಗಿದ್ದಾರೆ. ಊಟ, ವಸತಿ ಸೌಲಭ್ಯ ನೀಡಲಾಗುವುದು. ಮಾಸಿಕ ವೇತನ : 15000/-
9380541232

Go Mysore Holidays
ತಿರುಪತಿ–ತಿರುಮಲ–ಕಾಳಹಸ್ತಿ ಪ್ಯಾಕೇಜ್
20th February 2026(20/02/2026)
ಹೊರಡುವುದು, ಎರಡು ದಿನದ ಪ್ರವಾಸ, ಕೆ.ಡಿ. ಸರ್ಕಲ್, ವಿಜಯನಗರ, 2ನೇ ಹಂತ, ಮೈಸೂರು
9448738617
9036154301

ಸಿಪೆಟ್:ಸಿ.ಎಸ್.ಟಿ.ಎಸ್, ಮೈಸೂರು
ಓಪನ್ ಹೌಸ್
ದಿನಾಂಕ: 20.02.2026 - 21.02.2026
ಬೆಳಗ್ಗೆ 9.00 ರಿಂದ ಸಂಜೆ 6.00 ರವರೆಗೆ
ವಿದ್ಯಾರ್ಥಿಗಳು, ಕೈಗಾರಿಕಾ ಉದ್ಯೋಗಿಗಳು ಹಾಗೂ ಸಾರ್ವಜನಿಕರು ಭಾಗವಹಿಸಬಹುದು
ಪ್ರವೇಶ ಉಚಿತ
ವಿಳಾಸ: ಕೇಂದ್ರೀಯ ಪೆಟ್ರೋಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ ಮೈಸೂರು – 570016.
97496 61667, 94665 85669

JOB'S IN MYSORE
Impulse ನ ವಿವಿಧ ವಿಭಾಗಕ್ಕೆ, 10th, PUC, Any Degree, Age (18-25) Earn (10,400 ರಿಂದ 20,800/- Pm) No Fee, ಪರಸ್ಥಳದವರಿಗೆ ಮಾತ್ರ ವಸತಿ, ವಿವರಗಳೊಂದಿಗೆ,
KAVYA: 9342827788

ಡ್ರೈವರ್ ಬೇಕಾಗಿದ್ದಾರೆ
ವೇತನ : 15,000–20,000
P.No. 9741827359
ಉಚಿತ : ಊಟ, ವಸತಿ

First time in Mysore
Quality Construction at Affordable Price @ 1850 per Sq.ft
(Foundation to Key Handover)
If you are looking for a house to build at the right price
Contact: 9620099689
J&RS Infra Services Pvt Ltd.,

SITE FOR SALE
40x60 E/F MUDA Auction site @ Vijayanagar 4th Stage, 1st Phase.
10 acre Land Near Thalakad,
100 x 55 E/F @ Vijayanagar 4th Stage, 2nd Phase, 80 ft. road.
9986773639
9980039509

ಉಚಿತ ತರಬೇತಿ
ಮನೆಯಿಂದಲೇ ಬಟ್ಟಲು ಸಾಂಬ್ರಾಣಿ ಮತ್ತು ಅಣಬೆ ತಯಾರಿಸಿ ನಮಗೆ ಮರಳಿಸಿ ಪ್ರತಿದಿನ 500 ರಿಂದ 800 ರೂ. ವರೆಗೆ ಗಳಿಸಿ.
ತರಬೇತಿಗಾಗಿ:
7406375196, 9880548596

ಆಲ್ಟ್ರೇಷನ್ ಕೆಲಸ ಮಾಡಿಕೊಡಲಾಗುತ್ತದೆ
ಹಳೇ ಮನೆ ಕೆಲಸ ಮತ್ತು ಬಣ್ಣದ ಕೆಲಸ, ಗಾರೆ ರಿಪೇರಿ ಮತ್ತು ತಾರಸಿ ಸೋರುವಿಕೆ ಸರಿಪಡಿಸಿಕೊಡಲಾಗುತ್ತದೆ.
Mob: 6360884930

ಶ್ರೀ ಸಂಜೀವಿನಿ ಗೋಲ್ಡ್ ಕಂಪನಿ
ನೀವು ಗಿರವಿ ಇಟ್ಟು ಬಿಡಿಸಿಕೊಳ್ಳಲಾಗದ ಚಿನ್ನವನ್ನು ನಾವೇ ಬಿಡಿಸಿ ಉಳಿದ ಹಣ ವನ್ನು ಚಿನ್ನದ ಗುಣಮಟ್ಟದ ಆಧಾರದ ಮೇಲೆ ನಿಮ್ಮ ಸ್ಥಳದಲ್ಲೇ ನೀಡುತ್ತೇವೆ. ಒಂದು ಗ್ರಾಂ ಚಿನ್ನದ ದರ: 14,600 (24 CT)
9108146123

FOR LEASE
2 BHK Flat Available for Lease From Feb 19th at Lalitha Mahal Nagar(Alanahalli Layout), Mysore.
Call: 63638 13842
WA: 63665 96616

CHANGE OF NAME
Mr. SYED NOORULLA S/o Late Syed Asraf Residing at Door No.1195/3, Farm Colony, Gousiya Nagara, Mysore - 570019 KARNATAKA STATE, INDIA. have changed my name from SYED NOORULLA to SYED NOORULLA KHAN thefore I a executing this affidavit and I have to produce this affidavit before the concerned news paper for adverstiment purpose. hereinafter my name will be called with new name SYED NOORULLA KHAN.
Place:- Mysore Sd/- Syed Noorulla Khan
Date: 10.12.2025 Deponent

ಬೇಕಾಗಿದ್ದಾರೆ
ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಕ್ಯಾಶಿಯರ್ ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ: ವಿಳಾಸ : ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್ ಶಿಶ್ಕರಣಿ ಸ್ಕೂಲ್ ಪಕ್ಕ, ಹೆಬ್ಬಾಳ್

ತಕ್ಷಣ ಬೇಕಾಗಿದ್ದಾರೆ
ವರ್ಕ್ ಫ್ರಮ್ ಹೋಮ್ ಕೆಲಸಕ್ಕೆ ವಿದ್ಯಾರ್ಥಿಗಳಿಗೆ & ಪುರುಷರಿಗೆ ಹಾಗೂ ಮಹಿಳೆಯರಿಗೆ ಮೊದಲ ಆದ್ಯತೆ (ಮನೆಯಿಂದಲೇ ಕೆಲಸ) 7th, 10th, PUC, Any Degree ಪಾಸ್ ಫೇಲ್ ಅವಕಾಶ, ಸಂಪರ್ಕಿಸಿ HR.
9964311522

FOR SALE
20x30 Site @ Vijaya Nagar 4th Stage.
30x50, 40x50 Sites @ 50 Ft Road Sites@ Brahmins Lyt, Nr RT Ngr
30x45 Corner Property @ Shardha Public school, Near Dattgalli
20x30, 30x40 Sites @ Bogadi
Commercial Properties @ Ring Road
2 & 3 BHK APARTMENTS @ RK NGR
PRAKRUTHI PROPERTIES
95386 90359, 90359 90359

ಬೇಕಾಗಿದ್ದಾರೆ
ಕೆಲ್ಲಟ್ಟಿ ಕಿಚನ್ ವೆಜ್ ಕೆಫೆಗೆ 4 ಸಿಬ್ಬಂದಿ, ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
* ಸ್ವಚ್ಛಗೊಳಿಸುವವರು
ಬೆಳಿಗ್ಗೆ 6 ರಿಂದ ಸಂಜೆ 3 ಮಧ್ಯಾಹ್ನ 1 ರಿಂದ ರಾತ್ರಿ 10
9986758555

ಕೇವಲ 2000 ರೂಪಾಯಿಗೆ
ದಪ್ಪನೆಯ Double ಹಾಸಿಗೆ 2 ದಿಂಬು ಸಹ ಒಂದು ಬೆಡ್‌ಶೀಟ್ ಮತ್ತು 2 ದಿಂಬಿನ ಕವರ್ ಮತ್ತು ಒಂದು ಸೂಟ್‌ಕೇಸ್ ರಗ್ಗು ಸೇರಿ.
8884179981

WANTED
The Quorum Hotel
1.Front Office Associate (15K - 18K), 2. Restaurant Cashier (15K - 18K), 3. Captain (16K - 18K), 4. Waiter (13K-15K), 5. Housekeeping (12K-15K),
Walk in Interview @The Quorum Hotel
The Quorum Hotel
2257/1, Vinobha road, Mysore- 570005.
9620274629
9035062106

ಕಳೆದಿದೆ
ಭಾರತಿ ಎಸ್ W/o R.S. ಪ್ರಸಾದ್, ಬಸರಾಳು ಹೋಬಳಿ, ಮಂಡ್ಯ ತಾಲ್ಲೂಕು, ಹೇಮಾವತಿ ಕಾಲೋನಿ–571416. ಇವರಿಗೆ ಸೇರಿದ. 2024–25 ದಸ್ತಾವೇಜು ಸಂಖ್ಯೆ, NGM-1-03607 ದಿನಾಂಕ : 10–10–2025 ರಲ್ಲಿ ಕಳೆದುಹೋಗಿದ್ದು, ಯಾರಿಗಾದರೂ ಸಿಕ್ಕಲ್ಲಿ, ಸಂಪರ್ಕಿಸಿ:
9964455229
9900551330

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ
Mob: 9535361279

ತಕ್ಷಣ ಬೇಕಾಗಿದ್ದಾರೆ
ಮಂಡ್ಯದಲ್ಲಿ ಕೆಲಸ ನಿರ್ವಹಿಸಲು ಹುಡುಗರು ಬೇಕಾಗಿದ್ದಾರೆ.
(ಉಚಿತ ಊಟ, ವಸತಿ ಲಭ್ಯವಿದೆ)
ವಿದ್ಯಾರ್ಹತೆ: 10th ಪಾಸ್/ಫೇಲ್ (ಅನುಭವದ ಅವಶ್ಯಕತೆ ಇಲ್ಲ)
ನುಡಿ, ಫೋಟೋಷಾಪ್ ಕಲಿತಿರುವ ಅನುಭವ/ವಿಲ್ಲದ ಮಹಿಳಾ ಡಿಸೈನರ್ ಬೇಕಾಗಿದ್ದಾರೆ
Contact: ಮಂಡ್ಯ ಬಿಗ್ ಪ್ರಿಂಟ್
9900434353

CHANGE OF NAME
I Shrikanth .S aged 38yrs R/a No: 1971/C, 13th Cross, 'C' Block, Mahadevapura, J.P Nagara, Mysore-08. have Changed my name from Shrikant .S to Shrikanth .S on My Own free will infront of Notary Sujatha .C on 08/01/2026t Mysore
Sd/- Shrikanth .S

ಸದ್ಗುರು ಮ್ಯಾರೇಜಸ್
ಎಲ್ಲಾ ಜಾತಿಯ ವಧುವರರು ವಿಧುರರು ವಿಧವೆಯರು ವಿಚ್ಛೇದಿತರು ನೇರ ಸಂಪರ್ಕಿಸಿ, ಒಂದು ಫೋನಿನ ಕರೆ ನಿಮ್ಮ ಬದುಕನ್ನೇ ಬದಲಾಯಿಸುತ್ತದೆ.
9448229184
7899625268

ಬೇಕಾಗಿದ್ದಾರೆ
ಸ್ಟೀಲ್ ಹಾಗೂ ಸಿಮೆಂಟ್ ಅಂಗಡಿಗೆ ಮಾರ್ಕೆಟಿಂಗ್ ಕೆಲಸಕ್ಕೆ ಹುಡುಗರು ಹಾಗೂ ಟಿಪ್ಪರ್ ಡ್ರೈವರ್, ಲೋಡಿಂಗ್ ಅನ್ಲೋಡಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
9686767064

ವಧು ಬೇಕಾಗಿದೆ
ಹಾಸನ ಜಿಲ್ಲೆ, ಸಕಲೇಶಪುರದಲ್ಲಿ ವಾಸವಿರುವ 7 ಎಕರೆ ಕಾಫೀ ತೋಟ ಹೊಂದಿರುವ ಲಿಂಗಾಯಿತ (37 ವರ್ಷ) ವರನಿಗೆ ಲಿಂಗಾಯತ ವಧು ಅಥವಾ ಡಿವೋರ್ಸ್ ಆಗಿರುವ ಲಿಂಗಾಯತ ವಧು ಬೇಕಾಗಿದೆ.
8722231190

BUSINESS OPPORTUNITY
EARN EXTRA INCOME PART/FULL TIME
ಮನೆಯಿಂದಲೇ ಕೆಲಸಮಾಡಿ ಗೃಹಿಣಿಯರು, ಉದ್ಯೋಗಸ್ಥರು, ವ್ಯಾಪಾರಸ್ಥರು, ವಿದ್ಯಾರ್ಥಿಗಳು ನಿವೃತ್ತಿ ಹೊಂದಿದವರು ಹಾಗೂ ಮುಂತಾದವರು
TRAINING & SUPPORT PROVIDED
ಇಂದೇ ಕರೆ ಮಾಡಿ
Ashwini 8660182711
Pradeep 9480561441

ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ
ಬೆಂಗಳೂರಿನ ಇಂಜಿನಿಯರ್ ಕಾಲೇಜ್ ಒಂದಕ್ಕೆ ಅಸಿಸ್ಟೆಂಟ್ ಕುಕ್ ಬೇಕಾಗಿದ್ದಾರೆ ವಸತಿ ಸೌಲಭ್ಯವಿದೆ.
8088419322

ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡುಗಳು (ರಾತ್ರಿ ಪಾಳಿಗೆ) ಸ್ಥಳ: 1) ಹುಲಿಕೆರೆ (ಕೆಆರ್‌ಎಸ್ ರಸ್ತೆ), (2) ದೊಡ್ಡಗಡಿಯಾರ (ಮೈಸೂರು ಸಿಟಿ) (3) ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ (4) ಹೊಸಹಳ್ಳಿ (ಕೆಆರ್‌ಎಸ್ ರಸ್ತೆ).
9686422400
9242406261

ತಕ್ಷಣ ಮಹಿಳೆ /ಪುರುಷ ಸಹಾಯಕರು ಬೇಕಾಗಿದ್ದಾರೆ
ನೇರ ನೇಮಕಾತಿ. ವೇತನ ಮಹಿಳೆಯರಿಗೆ 14,500/–. ಪುರುಷರಿಗೆ 20,000/–, 18,000/– ಮತ್ತು 16,000/–. ಅಶೋಕ್ ಲೇಲ್ಯಾಂಡ್ / ದೋಸ್ತ್ ಡ್ರೈವರ್ ಬೇಕಾಗಿದ್ದಾರೆ. ಸ್ಥಳ: ಹೂಟಗಳ್ಳಿ.
7795452233

ತಕ್ಷಣ ಬೇಕಾಗಿದ್ದಾರೆ
ಮೇಟಗಳ್ಳಿ ಇಂಡಸ್ಟ್ರಿಯಲ್ ಏರಿಯಾದಲ್ಲಿ ಕೆಲಸ ಮಾಡಲು ಹುಡುಗಿಯರು (ಮಹಿಳೆಯರು) ಬೇಕಾಗಿದ್ದಾರೆ. (SSLC pass or fail). Company: JK Tyres, Mysore (ಸೂರ್ಯ ಬೇಕರಿ, ಹೆಬ್ಬಾಳ್, ಮೇಟಗಳ್ಳಿ, ಬಸವನಗುಡಿಯವರು ಬೇಕಾಗಿದ್ದಾರೆ). Salary: 18,000. Age limit: 18 ರಿಂದ 35 ವರ್ಷ. ಅನುಕೂಲತೆ: ESI, PF and Canteen ಸೌಲಭ್ಯವಿರುತ್ತದೆ.
9632265535
9353430078

ಬೇಕಾಗಿದ್ದಾರೆ
ಮೇಟಗಳ್ಳಿ ಕೈಗಾರಿಕಾ ಪ್ರದೇಶದಲ್ಲಿರುವ ಕಾರ್ಖಾನೆಯಲ್ಲಿ ಕೆಲಸ ನಿರ್ವಹಿಸಲು ಪುರುಷ ಗುತ್ತಿಗೆ ನೌಕರರು (Casual Labour) ಬೇಕಾಗಿರುತ್ತಾರೆ. ವಯೋಮಿತಿ 18 ರಿಂದ 35 ವರ್ಷದೊಳಗಿನವರು. ವಿದ್ಯಾರ್ಹತೆಯ ಅವಶ್ಯಕತೆ ಇರುವುದಿಲ್ಲ. ಇಚ್ಛೆಯುಳ್ಳವರು ಸಂಪರ್ಕಿಸಿ:
6361201110
7795794028

FOR SALE
Crnr Property @ Shardha Public school, Nr Dattgalli
30x50, 40x50 Sites @ 50 Ft Road Sites@ Brahmins Lyt, Nr RT Ngr
30x40 Site @ Jnana Bharathi Lyt, JP Ngr
20x30, 30x40 Sites @ Bogadi
Commercial Properties @ Srirampura
2 & 3 BHK APARTMENTS @ RK NGR
PRAKRUTHI PROPERTIES
95386 90359, 90359 90359

CAR SALE
INDIGO ECS (2015)
CIAZ ZDI (2016)
Yellow Board
Single Owner.
Mob: 9972837203

Required Tuition Teachers
Co-ordinator * Science Teacher * Maths Teacher * Social Teacher. Location: Sharada Devi Nagar, Saraswathipuram, Dattagalli, Hootagalli. Send resume to:
9900617600
9916777925

Wanted
Brahmin Cook Required for a vegetarian family of 8. Morning (7 am) till afternoon ; and evening (5-6 pm) duty. Location: Panchavati Circle, K.D. Road.
8861985202

Site for Sale
MUDA approved 40x68 in Vyshnavi Enclave (Vasantha Nagar), 200 meters from Vidya Vikas Engineering College, 5.5 km from Mysore Palace. E/F back side park.
9900263372
9008173060

Site for sale 20x45 EAST FACE
ನಮೂನೆ 3 ಬೋಗಾದಿ ಪಟ್ಟಣ ಪಂಚಾಯಿತಿ E–ಖಾತೆ. ಕ್ರೈಸ್ತ ಪಬ್ಲಿಕ್ ಸ್ಕೂಲ್ ಹಿಂಭಾಗ ದಟ್ಟಗಳ್ಳಿ ಉನ್ನತ ಮಟ್ಟದ ದಾಖಲಾತಿ ಯೊಂದಿಗೆ. ಲೋನ್ ಕೂಡ ದೊರೆಯುತ್ತದೆ.. Broker excuse. Rs. 53 Lakh.
8073799013

ತಕ್ಷಣ ಬೇಕಾಗಿದ್ದಾರೆ
ಅನುಭವವುಳ್ಳ ಸೆಕ್ಯೂರಿಟಿ ಗಾರ್ಡ್. ಸಂಬಳ 15000 ರಿಂದ 20,000. ಸೂಪರ್‌ವೈಸರ್ 20,000 ರಿಂದ 24,000. ಫೀಲ್ಡ್ ಆಫೀಸರ್ ಬೇಕಾಗಿದ್ದಾರೆ. ಊಟ, ವಸತಿ / ಇಎಸ್‌ಐ, ಪಿಎಫ್, W/o ಇರುತ್ತದೆ. ಮೊದಲು ಬಂದವರಿಗೆ ಆದ್ಯತೆ.
7259624713
9632049421

ಮುಡಾ ಸೈಟ್ ಮಾರಾಟಕ್ಕಿದೆ
40x60
ದಟ್ಟಗಳ್ಳಿ, ಮೈಸೂರು
ಸಂಪರ್ಕಿಸಿ
8904497670

ಬಸ್ ಚಾಲಕರು ಬೇಕಾಗಿದ್ದಾರೆ
ಮೈಸೂರಿನ ವಿಜಯನಗರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರ ಶಾಲೆಗೆ ಬಸ್ ಚಾಲಕರು ಬೇಕಾಗಿದ್ದಾರೆ. ಸಂಪರ್ಕಿಸಿ
9483670193

Wanted
For Gold Company
Male - 5 Candidates,
Female - 5 Candidates
Qualification: PUC or Any Degree
9901626773

ತಕ್ಷಣ ಬೇಕಾಗಿದ್ದಾರೆ
1) ಹೌಸ್‌ಕೀಪಿಂಗ್ – ಹುಡುಗರು / ಮಹಿಳೆಯರು (ವಿಜಯನಗರ, ಹಿನಕಲ್, ಮೇಟಗಳ್ಳಿ).
2) ಸೆಕ್ಯೂರಿಟಿ ಗಾರ್ಡ್ (ಕೊಳ್ಳೇಗಾಲ, ಒಂಟಿಕೊಪ್ಪಲ್, ಹಿನಕಲ್, ವಿಜಯನಗರ).
7795162227
9731663856

ಬೇಕಾಗಿದ್ದಾರೆ
ಮೈಸೂರಿನ ಪ್ರಸಿದ್ಧ ಸಸ್ಯಾಹಾರಿ ಹೋಟೆಲ್‌ಗೆ ಅನುಭವವುಳ್ಳ ಸಿಬ್ಬಂದಿಗಳು ಬೇಕಾಗಿದ್ದಾರೆ. 1) ಕ್ಯಾಪ್ಟನ್ ; (2) ವೈಟರ್ ; 3) ಸೂಪರ್‌ವೈಸರ್. ತಕ್ಷಣ ಸಂಪರ್ಕಿಸಿ:
9591642450
9148648485

ಬೇಕಾಗಿದ್ದಾರೆ
ಕೊರಿಯರ್ ಸಂಸ್ಥೆಯಲ್ಲಿ ಆಫೀಸ್ ಕೆಲಸಕ್ಕೆ ಒಬ್ಬ ಹುಡುಗಿ ಅಥವಾ ಮಹಿಳೆ ಬೇಕಾಗಿದ್ದಾರೆ. ಹಾಗೂ ಡೆಲಿವರಿ ಬಾಯ್ಸ್ ಮತ್ತು ಪಾರ್ಟ್ ಟೈಮ್ ಮತ್ತು ಫುಲ್ ಟೈಂ ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ (ಕಂಪ್ಯೂಟರ್ ಜ್ಞಾನ ಹೊಂದಿರತಕ್ಕದ್ದು). ಸಂಪರ್ಕಿಸುವ ಸಮಯ: ಬೆ. 10.30 ರಿಂದ 6.30. ಸಂಪರ್ಕಿಸಿ:
9449871790

ಕೆಲಸಕ್ಕೆ ಬೇಕಾಗಿದ್ದಾರೆ
ನಗರದ ಮಧ್ಯಭಾಗದಲ್ಲಿ ಇರುವ ಹೋಟೆಲ್‌ಗೆ ಸೂಪರ್‌ವೈಸರ್ ಕೆಲಸಕ್ಕೆ ಬೇಕಾಗಿದ್ದಾರೆ. Front Office Reception.
9972615399

Collection Manager ಬೇಕಾಗಿದ್ದಾರೆ
(Experience in Collection Field) (ಸಂಬಳ: 22000) + Incentive. Team Manager ಬೇಕಾಗಿದ್ದಾರೆ (Experience in Collection Field) (DRA Certificate & Computer knowledge) (ಸಂಬಳ: 25,000) + Incentive. ಕರೆ ಮಾಡಿ ತಕ್ಷಣ:
Mob: 8150005111

ತಕ್ಷಣ ಟೆಲಿಕಾಲಿಂಗ್ ಮಾಡಲು ಹುಡುಗಿಯರು ಬೇಕಾಗಿದ್ದಾರೆ
(ಸಂಬಳ: 11000) + Incentive). ಸ್ಥಳ: ಚಾಮುಂಡಿಪುರಂ ಮತ್ತು ಎನ್‌ಆರ್ ಮೊಹಲ್ಲಾ. FIELD EXECUTIVES ಬೇಕಾಗಿದ್ದಾರೆ (ಸಂಬಳ 17000 + Incentive). Collection Department.
Mob: 8150005111

ಭೋಗ್ಯಕ್ಕೆ ಮನೆ ಬೇಕಾಗಿದೆ
J.C. College ಸುತ್ತಮುತ್ತ, ಬೋಗಾದಿ ರಿಂಗ್ ರಸ್ತೆ ಹಾಗೂ ರಾಜರಾಜೇಶ್ವರಿ ನಗರ.
9482340654
9481485684

ಬೇಕಾಗಿದ್ದಾರೆ
ಗ್ಯಾಸ್ ಡೆಲಿವರಿಗೆ ಹುಡುಗರು ಬೇಕಾಗಿದ್ದಾರೆ ಹಾಗೂ ಸ್ವಂತ ವಾಹನ ಇದ್ದವರಿಗೆ ಆದ್ಯತೆ. ಯಶಸ್ವಿನಿ ಭಾರತ್ ಗ್ಯಾಸ್ ಡಿಸ್ಟ್ರಿಬ್ಯೂಟರ್ ರಾಜೀವ್‌ನಗರ, ಮೈಸೂರು
7337811144

Site for Sale
1) 40x60 Nanjangud Main Road (Hiland Layout).
2) 25x30 Gnana Bharathi Layout.
3) 30x50 DTS Rao Nagar.
9845699944

ತಕ್ಷಣ ಬೇಕಾಗಿದ್ದಾರೆ
ಸೆಕ್ಯೂರಿಟಿ ಗಾರ್ಡ್ಸ್ (SSLC Pass) 12 ಗಂಟೆ ಪಾಳಿ 16 ಸಾವಿರ (Rs. 16,000). ESI & PF ಸೌಲಭ್ಯ ಮೇಟಗಳ್ಳಿ ಸುತ್ತಮುತ್ತ ಪ್ರದೇಶ. ಸಂಪರ್ಕಿಸಿ:
9035367083, 6361548626

ಗನವ ಫೌಂಡೇಶನ್ (ರಿ.)
ನಿಮ್ಮ ಪ್ರೀತಿಯ ಹಿರಿಯರಿಗೆ ಎರಡನೇ ಮನೆ ! ನಮ್ಮ ವಿಶೇಷತೆಗಳು: 1) ಶಾಂತಿಯುತ ವಾತಾವರಣ. 2) ಪೌಷ್ಟಿಕ ಮತ್ತು ರುಚಿಕರ ವಾದ ಆಹಾರ. 3) 24/7 ನರ್ಸಿಂಗ್ ಮತ್ತು ವೈದ್ಯಕೀಯ ಸೌಲಭ್ಯ. 4) ಯೋಗ ಮತ್ತು ಮನರಂಜನೆ. ಇಂದೇ ಭೇಟಿ ನೀಡಿ: ನಾಯ್ಡು ನಗರ, ಮೈಸೂರು. ಸಂಪರ್ಕಿಸಿ:
Mob: 99169 05188

ಬೇಕಾಗಿದ್ದಾರೆ
Lady Computer Operator
ಮೈಸೂರು ಪ್ರಾಪರ್ಟೀಸ್, ಹೂಟಗಳ್ಳಿ
(ಆಸ್ತಿಗಳ ಕಾಗದ ಪತ್ರಗಳ ಕಛೇರಿ)
Mob: 9448958332

ಸೈಟುಗಳು ಮಾರಾಟಕ್ಕಿವೆ
30X40 30X50 40X60
ಯಶ್ ಮೆಗಾ ಸಿಟಿ
ಮೈಸೂರು– ಹುಣಸೂರು ರಸ್ತೆ
Mob: 7338445482

ಮನೆ ಬಾಡಿಗೆಗೆ ಇದೆ
(ಸಸ್ಯಾಹಾರಿಗಳಿಗೆ ಮಾತ್ರ)
ಜೆಎಸ್‌ಎಸ್ ಮಹಾ ವಿದ್ಯಾಪೀಠದ ಎದುರು, ರಾಮಾನುಜ ರಸ್ತೆ, ಗ್ರೌಂಡ್ ಫ್ಲೋರ್, 1 BHK. ಪೂರ್ವ ದಿಕ್ಕು. ಆಫೀಸ್‌ಗೂ ಯೋಗ್ಯವಾಗಿದೆ.
Mob: 9449886322

SITE FOR SALE
(40x60)
Dattagalli Ring Road (Near SARA Choultry)
Suitable for office / nursing.
Mob: 95388-39926

SITES WANTED
@ Brahmins Layout Dattagalli, Dadadahalli, Kadakola TVS Factory Road.
Quick Regn.
Mob: 93421-25252

DRUGLESS THERAPY
ನಿಮ್ಮ ದೋಶಗಳನ್ನು ತಿಳಿದುಕೊಳ್ಳಿ ಮತ್ತು ಅವುಗಳನ್ನು ಹೇಗೆ ಸಮತೋಲನಗೊಳಿಸುವುದು, ಆಹಾರ ಚಾರ್ಟ್‌ನೊಂದಿಗೆ ಇತ್ತೀಚಿನ ಮುಂಗಡ ಡಿಜಿಟಲ್ ಟ್ರ್ಯಾಕಿಂಗ್ ಮೂಲಕ ನಿಮ್ಮ ನಾಡಿ ಪರೀಕ್ಷೆಯನ್ನು ಪರಿಶೀಲಿಸಿ.
Scan for Sample report
DASH Center S.S.Puram Mysore
Call/whatsapp : 9481933508

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ
NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.
8884439666

ತಕ್ಷಣ ಬೇಕಾಗಿದ್ದಾರೆ
ಹುಣಸೂರಿನ ಕಟ್ಟೆಮಳಲವಾಡಿ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ ವಿದ್ಯಾರ್ಹತೆ : SSLC ಸಂಬಳ : 18,000/- ಊಟ, ತಿಂಡಿ ಸೌಲಭ್ಯವಿರುತ್ತದೆ.
9620667819

SITE FOR SALE
20X30(2 SITES) Raj Brundhavana Layout, Rs 28,00,000 Each, Yelwala (Near Sai Garments)
Mob : 6364769143

ತಕ್ಷಣ ಬೇಕಾಗಿದ್ದಾರೆ
ಟಿ.ನರಸೀಪುರ ರಸ್ತೆ, ಚಿಕ್ಕಳ್ಳಿ ಬಲ್ಲಾಳ್ ಸರ್ಕಲ್, ಕೆ.ಆರ್. ಆಸ್ಪತ್ರೆ ಹತ್ತಿರ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡ್ & ಹೌಸ್ ಕೀಪಿಂಗ್ ಬೇಕಾಗಿದ್ದಾರೆ. ESI & PF. ಹಾಗೂ ಊಟ ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ
8660309477

HOUSE FOR SALE
15x30 single BHK, Ramakrishna Nagar 'H' Block, Rs. 36 Lakh. Contact
9886695905
9986338822

ಮನೆ ಮಾರಾಟಕ್ಕಿದೆ
30x50, ಪೂರ್ವದಿಕ್ಕು, ಮನೆ ಸಂ. 31, ಅರಮನೆ ನಗರ ಬಡಾವಣೆ, ಅಂಕನಹಳ್ಳಿ,(ಮನುಗನಹಳ್ಳಿ ಹತ್ತಿರ), ಮೈಸೂರು–ಹುಣಸೂರು ಮುಖ್ಯರಸ್ತೆ.
9611377919
9663381843

ಮೈಸೂರು ಮಿತ್ರ 46
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಮತ್ತಷ್ಟು ವರ್ಗೀಕೃತ ಜಾಹೀರಾತು ಪುಟ 11 ರಲ್ಲಿ

ಮೈಸೂರು ಮಿತ್ರ

2ನೇ ಹಂತದ 'ಜನರೊಂದಿಗೆ ಜನತಾದಳ' ರಾಜ್ಯ ಪ್ರವಾಸ ಆರಂಭ

ಚುನಾವಣೆಯಲ್ಲಿ ಸೋಲು-ಗೆಲುವನ್ನು ಜನತೆ ನಿರ್ಧರಿಸುತ್ತಾರೆ

● ಡಿಸಿಎಂ ಡಿಕೆಶಿಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟಾಂಗ್ ● ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ● ಕುಮಾರಣ್ಣ ಮುಖ್ಯಮಂತ್ರಿ ಆಗಬೇಕು ಅನ್ನುವುದು ನಿಖಿಲ್ ಕುಮಾರಸ್ವಾಮಿ ಭಾವನೆಯಲ್ಲ, ಜನರ ಭಾವನೆ

ಪಿರಿಯಾಪಟ್ಟಣ, ಫೆ.18– ಉಪ ಮುಖ್ಯಮಂತ್ರಿಗಳೇ ನಿಖಿಲ್ ಏನು ಅಂತ ಮುಂದೆ ತೋರಿಸುತ್ತೇನೆ. ಚುನಾವಣೆಯಲ್ಲಿ ಸೋಲು-ಗೆಲುವು ಶಾಶ್ವತವಲ್ಲ. ಇದು ಪ್ರಜಾಪ್ರಭುತ್ವ ಯಾರನ್ನು ಸೋಲಿಸಬೇಕು, ಯಾರನ್ನು ಗೆಲ್ಲಿಸಬೇಕು ಎಂದು ಜನತೆ 2028ಕ್ಕೆ ತೀರ್ಮಾನಿಸುತ್ತಾರೆ ಎಂದು ಉಪ ಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರ ಸ್ವಾಮಿ ಟಾಂಗ್ ನೀಡಿದರು.

ಜಿಲ್ಲೆಯ ಪಿರಿಯಾಪಟ್ಟಣ ವಿಧಾನಸಭಾ ಕ್ಷೇತ್ರದಲ್ಲಿ ಹಮ್ಮಿಕೊಂಡಿದ್ದ 'ಜನರೊಂದಿಗೆ ಜನತಾದಳ ಎರಡನೇ ಹಂತದ ಜೆಡಿಎಸ್ ಪಕ್ಷದ ಸದಸ್ಯತ್ವ ನೋಂದಣಿ ಅಭಿಯಾನ'ಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

7.64 ಲಕ್ಷ ಕೋಟಿ ಸಾಲ ನಿಮ್ಮ ಸಾಧನೆ: ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷ ಆಗಿದ್ದು, ಹಾವೇರಿಯಲ್ಲಿ ನಡೆದ ಸಾವಿರ ದಿನಗಳ ಸಮಾವೇಶವನ್ನು ಸರ್ಕಾರದ ಹಣದಲ್ಲಿ ಮಾಡಿದ್ದೀರಿ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ನಿಮ್ಮ ಹಿರಿತನಕ್ಕೆ ಗೌರವವಿದೆ. ದಾಖಲೆ ಪ್ರಮಾಣದಲ್ಲಿ ಶಾಸಕರಿದ್ದಾರೆ. ಆದರೆ 7 ಲಕ್ಷದ 64 ಸಾವಿರ ಕೋಟಿ ಸಾಲ ಮಾಡಿರುವುದೇ ನಿಮ್ಮ ಸಾಧನೆ ಎಂದು ವಾಗ್ದಾಳಿ ನಡೆಸಿದರು.

ಕರ್ನಾಟಕ ಇತಿಹಾಸದಲ್ಲೇ ಅತೀ ಹೆಚ್ಚು ಸಾಲ ಮಾಡಿದ ಕೀರ್ತಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರು ಕಾಂಗ್ರೆಸ್ ಜೊತೆ ಸರ್ಕಾರ ಮಾಡಿದ ಸಂದರ್ಭದಲ್ಲಿ ನಾಡಿನ ರೈತರ ಸಾಲ ಮನ್ನಾ ಮಾಡಿದ್ದರೂ ಕೂಡ ರಾಜ್ಯದ ಪ್ರಜೆಗಳನ್ನು ಸಾಲಗಾರರನ್ನಾಗಿ ಮಾಡಿಲ್ಲ ಎಂದರು.


ಕುಮಾರಣ್ಣ ಮುಖ್ಯಮಂತ್ರಿ ಆಗಬೇಕು ಅನ್ನುವುದು ನಿಖಿಲ್ ಕುಮಾರಸ್ವಾಮಿ ಭಾವನೆಯಲ್ಲ. ನಾನು 9 ಸಾವಿರ ಕಿಲೋಮೀಟರ್ ರಾಜ್ಯ ಪ್ರವಾಸ ಮಾಡಿದ್ದ ಸಂದರ್ಭದಲ್ಲಿ ಜನ ಕುಮಾರಣ್ಣ ಅವರ ಆಡಳಿತವನ್ನು ನೆನೆಸಿಕೊಂಡಿದ್ದನ್ನು ನಾನು ಹತ್ತಿರದಿಂದ ನೋಡಿದ್ದೇನೆ. ಆ ವಿಚಾರವನ್ನು ನಾನು ಮಾಧ್ಯಮಗಳಲ್ಲೂ ಹೇಳಿದ್ದೇನೆ. ನನಗೂ ರಾಜಕೀಯ ಪ್ರಜ್ಞೆ ಇದೆ ಎಂದು ಒತ್ತಿ ಹೇಳಿದರು.

ಜೆಡಿಎಸ್ ರೈತರ ಪಕ್ಷ, ಕಾರ್ಯಕರ್ತರೇ ಪಕ್ಷದ ಬೆನ್ನೆಲುಬು: ನಾನು ಪಕ್ಷದ ಸಾಮಾನ್ಯ ಕಾರ್ಯಕರ್ತ. ನಾನು ನಿಮ್ಮ ಜೊತೆಯಲ್ಲಿ ಇರಬೇಕು ಎಂದು ಜನರೊಂದಿಗೆ ಜನತಾದಳ ಪ್ರವಾಸ ಮಾಡುತ್ತಿದ್ದೇನೆ. ನಮ್ಮ ಪಕ್ಷದ ಕಾರ್ಯಕರ್ತರು ಯೋಧರು. ನಿಮ್ಮ ಜೊತೆ ನಾನಿರುತ್ತೇನೆ ಎಂದು ಭರವಸೆ ನೀಡಿದರು.

ಜನತಾದಳ ಇದು ನಿಮ್ಮ ಪಕ್ಷ, ರೈತರ ಪಕ್ಷ, ಕಾರ್ಯಕರ್ತರೇ ನಮ್ಮ ಪಕ್ಷದ ಬೆನ್ನೆಲುಬು. ಮೈಸೂರು ಭಾಗದಲ್ಲಿ ಪಕ್ಷವನ್ನು ಹಿಂದೆಗಿಂತಲೂ ಇನ್ನೂ ಹೆಚ್ಚಿನ ಮಟ್ಟದಲ್ಲಿ ಸದೃಢವಾಗಿ ಕಟ್ಟೋಣ. ಮುಂಬರುವ ಸ್ಥಳೀಯ ಸಂಸ್ಥೆ ಚುನಾವಣೆಯಲ್ಲಿ ನಾವು ನಿಮ್ಮೊಂದಿಗೆ ಗಟ್ಟಿಯಾಗಿ ನಿಲ್ಲುತ್ತೇವೆ. 2028ಕ್ಕೆ ಪಿರಿಯಾಪಟ್ಟಣದಿಂದ ನಮ್ಮ ಪಕ್ಷದ ಶಾಸಕರನ್ನು ಆಯ್ಕೆ ಮಾಡುವ ಮೂಲಕ ಎನ್‌ಡಿಎ ಸರ್ಕಾರ ರಚಿಸಲು ಸಂಕಲ್ಪ ಮಾಡೋಣ ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಸಚಿವ ಸಾ.ರಾ. ಮಹೇಶ್, ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಕೆ.ಮಹದೇವ್, ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ವಿಧಾನಪರಿಷತ್ ಸದಸ್ಯ ರಾದ ವಿವೇಕಾನಂದ, ಮಂಜೇಗೌಡ, ಪ್ರಸನ್ನ ಕುಮಾರ್ ಸೇರಿದಂತೆ ಇತರರಿದ್ದರು.





ಕಾರ್ಯಕ್ರಮವನ್ನು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಿದರು. ಮತ್ತೊಂದು ಚಿತ್ರದಲ್ಲಿ ಕಾರ್ಯಕ್ರಮಕ್ಕೂ ಮುನ್ನಾ ನಿಖಿಲ್ ಕುಮಾರಸ್ವಾಮಿ ಅವರನ್ನು ತೆರೆದ ವಾಹನದಲ್ಲಿ ಮೆರವಣಿಗೆ ಮಾಡಲಾಯಿತು. ಈ ವೇಳೆ ಮಾಜಿ ಸಚಿವ ಸಾ.ರಾ.ಮಹೇಶ್, ಶಾಸಕ ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕ ಕೆ.ಮಹದೇವ್, ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್ ಇತರರಿದ್ದರು.

ನರೇಗಾ ಯೋಜನೆ ಜಾರಿಗೆ ಒತ್ತಾಯಿಸಿ ಪಾದಯಾತ್ರೆ

ನಂಜನಗೂಡು, ಫೆ.18– ಕೇಂದ್ರ ಸರ್ಕಾರ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ರದ್ದುಗೊಳಿಸಿ ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೊಳಿಸಿರುವುದನ್ನು ವಿರೋಧಿಸಿ ಎಂಎಲ್‌ಸಿ ಡಾ. ಯತೀಂದ್ರ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ತಾಲೂಕಿನ ಮಲ್ಲೂಪುರದಿಂದ ಮಡಹಳ್ಳಿವರೆಗೆ ಪಾದಯಾತ್ರೆ ನಡೆಸಿದರು.

ಈ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಡಾ.ಯತೀಂದ್ರ, ನರೇಗಾ ಯೋಜನೆಯಿಂದ ಬಡ ಕೂಲಿ ಕಾರ್ಮಿಕ ವರ್ಗಕ್ಕೆ ಅನುಕೂಲವಾಗಿತ್ತು. ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಸರ್ಕಾರ ನರೇಗಾ ಯೋಜನೆ ರದ್ದುಗೊಳಿಸಿ ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೊಳಿಸುವ ಮೂಲಕ ಗ್ರಾಮೀಣ ಬಡ ಕಾರ್ಮಿಕರಿಗೆ ಅನ್ಯಾಯ ಮಾಡುತ್ತಿದೆ. ಕೂಡಲೇ ಹೊಸ ಯೋಜನೆ ಕೈ ಬಿಟ್ಟು ಹಿಂದಿನ ನರೇಗಾ ಯೋಜನೆ ಜಾರಿಗೊಳಿಸಬೇಕು. ಈ ನಿಟ್ಟಿನಲ್ಲಿ ಹೋರಾಟ ರೂಪಿಸಲು ವರುಣ ಕ್ಷೇತ್ರದಲ್ಲಿ ಪಾದಯಾತ್ರೆ ನಡೆಸಲಾಗುತ್ತಿದೆ. ಹೋರಾಟ ಹಾಗೂ ಪಾದಯಾತ್ರೆಯನ್ನು ಮುಂದಿನ ದಿನಗಳಲ್ಲಿ ಜಿಲ್ಲಾದ್ಯಂತ ನಡೆಸಲಾಗುವುದು ಎಂದರು.

ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್ ಮಾತನಾಡಿ, ಮಹಾತ್ಮ ಗಾಂಧೀಜಿಯವರ ಹೆಸರಿನಲ್ಲಿರುವ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿ, ವಿಬಿ ಜಿ ರಾಮ್ ಜಿ ಯೋಜನೆ ಜಾರಿಗೊಳಿಸಿರುವುದನ್ನು ವಿರೋಧಿಸಿ ಮತ್ತೆ ನರೇಗಾ ಯೋಜನೆ ಜಾರಿಗೊಳಿಸಲು ಒತ್ತಾಯಿಸಿ ತಹಸೀಲ್ದಾರ್ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಗಿದೆ. ಅಲ್ಲದೇ ಕಾಂಗ್ರೆಸ್ ವತಿಯಿಂದ ಫೆ.21ರವರೆಗೆ ತಾಲೂಕು ಕೇಂದ್ರಗಳಲ್ಲಿ ಪಾದಯಾತ್ರೆ ಮೂಲಕ ಪ್ರತಿಭಟನೆ ಹಮ್ಮಿಕೊಳ್ಳಲಾಗಿದೆ ಎಂದರು.

ಪಾದಯಾತ್ರೆಯಲ್ಲಿ ರಾಜ್ಯ ವಾಲ್ಮೀಕಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಎಸ್.ಸಿ. ಬಸವರಾಜು, ಕರ್ನಾಟಕ ಮೃಗಾಲಯ ನಿಗಮದ ಅಧ್ಯಕ್ಷ ರಂಗಸ್ವಾಮಿ, ಮುಖಂಡರಾದ ಇಂಧನ್ ಬಾಬು, ಎಂ.ಸಿ. ಹುಂಡಿ ಶಿವಪ್ರಸಾದ್, ಕೆಂಪಣ್ಣ ಬಸವರಾಜು, ರಮೇಶ್, ಶಿವರಾಂ, ಬಾಲು, ಪ್ರಕಾಶ್, ಶಿವನಾಗ, ಹದಿನಾರು ಸಿದ್ದರಾಜ ನಾಯಕ, ನಗರ್ಲೆ ನಾರಾಯಣನಾಯಕ ಉಪಸ್ಥಿತರಿದ್ದರು.



ನರೇಗಾ ಯೋಜನೆ ಜಾರಿಗೆ ಒತ್ತಾಯಿಸಿ ಕಾಂಗ್ರೆಸ್ ಕಾರ್ಯಕರ್ತರು ಪಾದಯಾತ್ರೆ ನಡೆಸಿದರು.

ತಂಬಾಕು ಬೆಲೆ ಕುಸಿತ ಹಿನ್ನೆಲೆ

ಪ್ರತಿಭಟನಾನಿರತ ರೈತರ ಸಮಸ್ಯೆ ಆಲಿಸಿದ ಶಾಸಕರು

ಹುಣಸೂರು, ಫೆ.18– ತಂಬಾಕು ಬೆಲೆ ಕುಸಿತ ಹಿನ್ನೆಲೆಯಲ್ಲಿ ಬುಧವಾರ ತಾಲೂಕಿನ ಕಟ್ಟೆಮಳಲವಾಡಿ ಡಿ.ದೇವರಾಜು ಅರಸು ತಂಬಾಕು ಹರಾಜು ಮಾರುಕಟ್ಟೆಯಲ್ಲಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಸಮಸ್ಯೆಯನ್ನು ಶಾಸಕ ಜಿ.ಡಿ.ಹರೀಶ್ ಗೌಡ ಆಲಿಸಿದರು.

ಪ್ರತಿಭಟನೆ ವಿಷಯ ತಿಳಿದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರೊಂದಿಗೆ ಸ್ಥಳಕ್ಕಾಗಮಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ ರೈತರ ಸಮಸ್ಯೆ ಆಲಿಸಿದರು. ಬಳಿಕ ಮಾತನಾಡಿದ ಅವರು, ರೈತರಿಗೆ ಅನ್ಯಾಯವಾಗುವುದನ್ನು ಎಂದಿಗೂ ಸಹಿಸುವುದಿಲ್ಲ. ಕಳೆದ ವರ್ಷ ದೆಹಲಿಗೆ ರೈತರ ನಿಯೋಗ ಕರೆದೊಯ್ದು ಉತ್ತಮ ಬೆಲೆ ಕೊಡಿಸಲಾಗಿತ್ತು. ಇದೀಗ ಈ ವರ್ಷ ತಂಬಾಕು ರೈತರ ಸಮಸ್ಯೆಯನ್ನು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರ ಗಮನಕ್ಕೆ ತಂದು ರೈತರಿಗೆ ಉತ್ತಮ ಬೆಲೆ ಕೊಡಿಸುವುದಾಗಿ ಭರವಸೆ ನೀಡಿದರು.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಮಾತನಾಡಿ, ತಂಬಾಕು ಬೆಳೆಗಾರರ ಸಮಸ್ಯೆ ನನಗೆ ಅರ್ಥವಾಗುತ್ತದೆ. ಪ್ರತಿ ಕೆಜಿ ತಂಬಾಕಿಗೆ 50 ರಿಂದ 60 ರೂ. ಕಡಿಮೆಯಾಗಿ ರೈತರು ಸಂಕಷ್ಟದಲ್ಲಿರುವುದನ್ನು ಶಾಸಕ ಜಿ.ಡಿ.ಹರೀಶ್‌ಗೌಡರು ನನ್ನ ಗಮನಕ್ಕೆ ತಂದಿದ್ದಾರೆ. ರೈತರು ಧೃತಿಗೆಡಬೇಡಿ. ಪ್ರಾರಂಭದ ಮಾರುಕಟ್ಟೆಯಲ್ಲಿ ಇದ್ದ ಬೆಲೆ ಉಳಿಸಿಕೊಳ್ಳಲು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಮೂಲಕ ಪ್ರಯತ್ನಿಸಲಾಗುವುದು ಎಂದರು.

ನಿಮಗೆ ಕೈ ಮುಗಿದು ಮನವಿ ಮಾಡುತ್ತೇನೆ ಅಧಿಕಾರಿಗಳು ರೈತರಿಗೆ ನೋವು ಕೊಡಬೇಡಿ. ರೈತರು ಬೀದಿಗೆ ಬರುವ ಪರಿಸ್ಥಿತಿಯನ್ನು ಈಗಾಗಲೇ ಸರ್ಕಾರಗಳು ಮಾಡಿದ್ದು, ನೊಂದು ಬೆಂದು ಹೋಗಿದ್ದಾರೆ ಎಂದ ಅವರು ರೈತರ ಜೀವನದ ಜೊತೆ ಚೆಲ್ಲಾಟವಾಡಬೇಡಿ ಎಂದರು.

ಈ ವೇಳೆ ಮೊಬೈಲ್ ಮೂಲಕ ಮಾತನಾಡಿದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಕಳೆದ ವರ್ಷ ರೈತರ ನಿಯೋಗ ಕರೆದೊಯ್ದು ಅನುಕೂಲ ಮಾಡಿಕೊಟ್ಟಿದ್ದೇವೆ. ಮತ್ತೆ ನಾಳೆ ವಾಣಿಜ್ಯ ಸಚಿವರನ್ನು ಭೇಟಿ ಮಾಡಿ ತಂಬಾಕು ಬೆಲೆ ಕುಸಿಯದಂತೆ ಕ್ರಮ ಕೈಗೊಳ್ಳಲು ಚರ್ಚಿಸುತ್ತೇನೆ ಎಂದರು.

ಈ ವೇಳೆ ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಮಾಜಿ ಶಾಸಕ ಕೆ.ಮಹದೇವ್, ವಿಧಾನಪರಿಷತ್ ಸದಸ್ಯ ಮಂಜೇಗೌಡ, ಮುಖಂಡರಾದ ಮಾಜಿ ಮೇಯರ್ ರವಿ, ಹರವೆ ಶ್ರೀಧರ್, ಎಸ್‌ಬಿಎಂ ಮಂಜು ಸೇರಿದಂತೆ ಹಲವರಿದ್ದರು.



ಶಾಸಕ ಜಿ.ಡಿ.ಹರೀಶ್‌ಗೌಡ ರೈತರ ಸಮಸ್ಯೆ ಆಲಿಸಿದರು.

ಆಗತ್ತೂರಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣಾ ದಿನಾಚರಣೆ

ಸರಗೂರು, ಫೆ.18– ತಾಲೂಕಿನ ಆಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ಜಂತುಹುಳು ನಿವಾರಣಾ ಕಾರ್ಯಕ್ರಮಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು ರಾಜ್ಯಾದ್ಯಂತ ರಾಷ್ಟ್ರೀಯ ಜಂತು ಹುಳು ನಿವಾರಣಾ ದಿನ ಆಚರಿಸುತ್ತಿದ್ದೇವೆ. ಹೆಚ್.ಡಿ. ಕೋಟೆ ತಾಲೂಕಿನಲ್ಲಿ ಒಟ್ಟು 252 ಅಂಗನವಾಡಿಗಳಲ್ಲಿ 7355 ಮಕ್ಕಳು, 151 ಶಾಲೆಗಳಲ್ಲಿ 21735 ಮಕ್ಕಳಿದ್ದು ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಜಂತು ಹುಳು ನಿವಾರಣಾ ಮಾತ್ರೆಯನ್ನು ನೀಡುತ್ತಿದ್ದೇವೆ. ಅದರಂತೆ ಸರಗೂರು ತಾಲೂಕಿನ ಎಲ್ಲಾ ಮಕ್ಕಳಿಗೂ ಜಂತುಹುಳು ನಿವಾರಣ ಮಾತ್ರೆ ವಿತರಿಸುತ್ತೇವೆ ಎಂದರು.

ಸಾಗರೆ ವೈದ್ಯಾಧಿಕಾರಿ ಡಾ.ಶರತ್ ಮಕ್ಕಳಿಗೆ ಜಂತು ಹುಳು ನಿವಾರಣಾ ಮಾತ್ರೆ ನೀಡಿ ಮಾತನಾಡಿ, 1 ರಿಂದ 19 ವರ್ಷದ ಮಕ್ಕಳಿಗೆ ಜಂತುಹುಳು ನಿವಾರಣಾ ದಿನದ ಪ್ರಯುಕ್ತ ಜಂತು ಹುಳು ಮಾತ್ರೆ ನೀಡುತ್ತಿದ್ದೇವೆ. ನಮ್ಮ ತಾಲೂಕಿನ ಅಂಗನವಾಡಿ ಮತ್ತು ಶಾಲೆಯ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಮಾತ್ರೆ ನೀಡಿ ನೂರಕ್ಕೆ ನೂರರಷ್ಟು ಪ್ರಗತಿ ಸಾಧಿಸಲು ಪ್ರತಿಯೊಬ್ಬರ ಸಹಕಾರ ಅಗತ್ಯ ಎಂದರು. ಈ ವೇಳೆ ಗ್ರಾಪಂ ಸಿಬ್ಬಂದಿಗಳಾದ ರವಿರಾಜ್, ಬಿಂದು, ಆಗತ್ತೂರು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ರಾಜೇಶ, ಮುಖ್ಯ ಶಿಕ್ಷಕ ಸಿದ್ದರಾಜು, ದೈಹಿಕ ಶಿಕ್ಷಕ ಬಂಗಾರಯ್ಯ ಹಾಗೂ ಶಿಕ್ಷಕರು, ಗ್ರಾಮದ ಮುಖಂಡರು, ಮಕ್ಕಳು ಹಾಜರಿದ್ದರು.



ಕಾರ್ಯಕ್ರಮಕ್ಕೆ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಚಾಲನೆ ನೀಡಿದರು.

ಸಂಭ್ರಮದ ನಾದಬ್ರಹ್ಮ ತ್ಯಾಗರಾಜಸ್ವಾಮಿ ಆರಾಧನೆ

ತಿ.ನರಸೀಪುರ, ಫೆ.18– ಪಟ್ಟಣದಲ್ಲಿ ಮಂಗಳವಾದ್ಯ ಯುವ ಕಲಾವಿದರ ಬಳಗದಿಂದ ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಮಹಾನ್ ಕೊಡುಗೆ ನೀಡಿದ ನಾದ ಬ್ರಹ್ಮಾನಂದ ಸಂತ ತ್ಯಾಗರಾಜರ ಆರಾಧನಾ ಮಹೋತ್ಸವ ಸಂಭ್ರಮದಿಂದ ನಡೆಯಿತು.

ಇಲ್ಲಿನ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನದಿಂದ ಪಟ್ಟಣದ ಪ್ರಮುಖ ಬೀದಿಗಳಲ್ಲಿ ನಾದಬ್ರಹ್ಮ ತ್ಯಾಗರಾಜ ಸ್ವಾಮಿಯವರ ಭಾವಚಿತ್ರವನ್ನು ತೆರೆದ ವಾಹನದಲ್ಲಿ ನೂರಾರು ಕಲಾವಿದರ ನಾದ-ನಿನಾದದೊಂದಿಗೆ ಮೆರವಣಿಗೆ ನಡೆಸಲಾಯಿತು.

ಬಳಿಕ ಪಟ್ಟಣದ ಆರ್ಯ ಮಹಲ್ ಕಲ್ಯಾಣ ಮಂಟಪದಲ್ಲಿ ನಡೆದ ವೇದಿಕೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಚಾಮುಂಡಿಬೆಟ್ಟದ ಆಸ್ಥಾನ ವಿದ್ವಾಂಸ ವಿ.ಕೃಷ್ಣಮೂರ್ತಿ ಸಂಗೀತ ಭಾರತದ ಸಾಂಸ್ಕೃತಿಕ ಪರಂಪರೆಯ ತಿರುಳಾಗಿದ್ದು, ನಮ್ಮ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆ ಮತ್ತು ರಕ್ಷಣೆಗೆ ನಾವೆಲ್ಲರೂ ಮುಂದಾಗಬೇಕಿದೆ. ನಮ್ಮ ಸಂಸ್ಕೃತಿ ಮತ್ತು ಮೌಲ್ಯಗಳು ನಮ್ಮ ಗುರುತು. ಅದು ನಮ್ಮನ್ನು ಅನನ್ಯಗೊಳಿಸುತ್ತದೆ ಎಂದರು.

ಶ್ರೀಅಯ್ಯಪ್ಪ ಸ್ವಾಮಿ ಸೇವಾ ಟ್ರಸ್ಟ್ ಅಧ್ಯಕ್ಷ ಸಿದ್ದಲಿಂಗಮೂರ್ತಿ ಮಾತನಾಡಿ, ಸಂಗೀತ ಆಲಿಸುವುದರಿಂದ ಏಕಾಗ್ರತೆ ಮೂಡಿ ಮನಸ್ಸು ಪ್ರಫುಲ್ಲಗೊಳ್ಳುತ್ತದೆ ಮತ್ತು ಚೈತನ್ಯ ಭರಿತವಾಗುತ್ತದೆ. ಸಂಗೀತದಲ್ಲಿ ಪ್ರತಿಯೊಬ್ಬರೂ ತಮ್ಮನ್ನು ತಾವು ತೊಡಗಿಸಿಕೊಳ್ಳುವುದಲ್ಲದೇ ಮಕ್ಕಳಿಗೂ ಸಂಗೀತದಲ್ಲಿ ಆಸಕ್ತಿ ಬರುವಂತೆ ಮಾಡಬೇಕಾಗಿದೆ ಎಂದರು.

ಸಂಗೀತದಿಂದ ಯುವ ಜನತೆ ಹಾಗೂ ಹಿರಿಯರ ಮನಸ್ಸಿಗೆ ನೆಮ್ಮದಿ, ಶಾಂತಿ, ಆನಂದ, ಉಲ್ಲಾಸ ಸಿಗುತ್ತದೆ. ಸಂಗೀತ ದುರಾಲೋಚನೆ ದೂರ ಮಾಡಿ, ಕೇಳುವವರ ಮನಸ್ಸು ಹಾಗೂ ಆತ್ಮವನ್ನು ಪರಿಶುದ್ಧಗೊಳಿಸುತ್ತದೆ ಎಂದರು.

ಸಂಗೀತಕ್ಕೆ ಯಾವ ವಯಸ್ಸಿನ ಮಿತಿ ಇಲ್ಲ. ಸಂಗೀತ ಕೇಳುವುದರಿಂದ ಮನುಷ್ಯನಲ್ಲಿರುವ ಕಾಯಿಲೆಗಳು ದೂರವಾಗುತ್ತವೆ. ಸಂಗೀತ ಹಾಡುವುದು ಅಷ್ಟೇ ಅಲ್ಲ. ಅದನ್ನು ಕೇಳುವುದು ಸಹ ಒಳ್ಳೆಯದು. ಇದನ್ನು ಎಲ್ಲರೂ ಜೀವನದಲ್ಲಿ ಅಳವಡಿಸಿಕೊಂಡು ನೆಮ್ಮದಿಯ ಜೀವನ ನಡೆಸಬೇಕು ಎಂದರು.

ಮಂಗಳವಾದ್ಯ ಯುವ ಕಲಾವಿದರ ಬಳಗದ ಗೌರವಾಧ್ಯಕ್ಷ ಎ.ಪುಟ್ಟಸ್ವಾಮಿ, ಸ್ಯಾಕ್ಸ್‌ಫೋನ್ ಕಲಾವಿದ ಸಿದ್ಧಾರ್ಥ, ಅಧ್ಯಕ್ಷ ಗೆಜ್ಜಿಗನಹಳ್ಳಿ ರಾಜಶೇಖರ ಮೂರ್ತಿ, ಉಪಾಧ್ಯಕ್ಷ ಡೋಲು ಕಲಾವಿದ ಸ್ವಾಮಿ, ಪ್ರಧಾನ ಕಾರ್ಯದರ್ಶಿ ಕೆಂಪಯ್ಯನ 'ಹುಂಡಿ ಚಿಕ್ಕಣ್ಣ, ಖಜಾಂಚಿ ಸಚಿನ್, ಮುಖ್ಯ ಸಲಹೆಗಾರರಾದ ಬಿಲಿಗೆರೆ ಹುಂಡಿ ಮಲ್ಲೇಶ್, ಪಿ.ರವಿಕುಮಾರ್, ಡೋಲು ಕಲಾವಿದ ಸಿದ್ದರಾಜು, ಸ್ಯಾಕ್ಸ್‌ಫೋನ್ ಕಲಾವಿದ ಮರಿಸ್ವಾಮಿ, ಸಂಘದ ಸಂಚಾಲಕ ಪವನ್, ಸಾಂಸ್ಕೃತಿಕ ಕಾರ್ಯದರ್ಶಿ ಮಹೇಶ್, ಟಿ.ಪಿ.ನಾಗರಾಜು ಸೇರಿದಂತೆ ಮತ್ತಿತರರಿದ್ದರು.



ಕಾರ್ಯಕ್ರಮವನ್ನು ಚಾಮುಂಡಿಬೆಟ್ಟದ ಆಸ್ಥಾನ ವಿದ್ವಾಂಸ ವಿ.ಕೃಷ್ಣಮೂರ್ತಿ ಉದ್ಘಾಟಿಸಿದರು.

ಫೆ.21, ಕೋಟೆಯಲ್ಲಿ ಪುಣ್ಯಸ್ಮರಣೆ ಕಾರ್ಯಕ್ರಮ

ಹೆಚ್.ಡಿ.ಕೋಟೆ, ಫೆ.18– ಪಟ್ಟಣದ ಹಳೇ ಆಸ್ಪತ್ರೆ ಆವರಣದಲ್ಲಿ ಫೆ.21ರಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಹೆಚ್.ಡಿ.ಕೋಟೆ ತಾಲೂಕು ಯುವ ಘಟಕದಿಂದ ಶ್ರೀಶಿವಕುಮಾರ ಸ್ವಾಮೀಜಿ ಹಾಗೂ ಶ್ರೀಸಿದ್ದೇಶ್ವರ ಸ್ವಾಮೀಜಿ ಮತ್ತು ಡಾ.ಶ್ರೀಶಿವರಾತ್ರಿ ರಾಜೇಂದ್ರ ಸ್ವಾಮೀಜಿಗಳ ಪುಣ್ಯಸ್ಮರಣೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಮಹಾಸಭಾ ತಾಲೂಕು ಯುವ ಘಟಕದ ಅಧ್ಯಕ್ಷ ಬಹದ್ದೂರ್ ಸತೀಶ್ ತಿಳಿಸಿದ್ದಾರೆ.

ಅಂದು ಬೆಳಗ್ಗೆ 9.30ಕ್ಕೆ ಹರಗುರು ಚರಮೂರ್ತಿಗಳ ದಿವ್ಯ ಸಾನಿಧ್ಯದಲ್ಲಿ ನಡೆಯುವ ಕಾರ್ಯಕ್ರಮಕ್ಕೆ ತಾಲೂಕಿನ ಎಲ್ಲಾ ಸಮಾಜದ ಅಧ್ಯಕ್ಷರು, ಸಂಘಟನೆಗಳ ಪದಾಧಿಕಾರಿಗಳು, ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಯಶಸ್ವಿಗೊಳಿಸಬೇಕು. ಅಲ್ಲದೇ ಮಧ್ಯಾಹ್ನ 12 ಗಂಟೆಗೆ ಪ್ರಸಾದದ ವ್ಯವಸ್ಥೆ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್‌ಐವಿ/ಏಡ್ಸ್ ಜಾಗೃತಿ ಕಾರ್ಯಕ್ರಮ



ಬೆಟ್ಟದಪುರದ ಪ್ರಥಮ ದರ್ಜೆ ಕಾಲೇಜಿನಲ್ಲಿ ರೆಡ್‌ಕ್ರಾಸ್, ತಾಲೂಕು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಎನ್‌ಎಸ್‌ಎಸ್ ಘಟಕಗಳ ಸಂಯುಕ್ತಾಶ್ರಯದಲ್ಲಿ ಹೆಚ್‌ಐವಿ/ಏಡ್ಸ್ ಜಾಗೃತಿ ಕಾರ್ಯಕ್ರಮ ನಡೆಯಿತು. ಈ ವೇಳೆ ತಾಲೂಕು ಸರ್ಕಾರಿ ಆಸ್ಪತ್ರೆ ಸಲಹೆಗಾರ ಪ್ರಕಾಶ್, ಪ್ರಭಾರ ಪ್ರಾಂಶುಪಾಲ ಪ್ರಶಾಂತ್, ಐಕ್ಯೂಎಸಿ ಸಂಚಾಲಕ ಶಕೀರ್, ರಘುವೀರ ಜಲೇಂದ್ರ, ವಿದ್ಯಾರ್ಥಿಗಳಿದ್ದರು.

ಸಿದ್ದರಾಮಯ್ಯ, ಮಹದೇವಪ್ಪರಿಂದ ಮೈಸೂರು ಅಭಿವೃದ್ಧಿ

ಅಭಿವೃದ್ಧಿ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಚಾಲನೆ

ತಿ.ನರಸೀಪುರ, ಫೆ.18– ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರು ಮೈಸೂರನ್ನು ಮಾದರಿ ಜಿಲ್ಲೆ ಮಾಡಲು ಸಾಕಷ್ಟು ಅನುದಾನ ನೀಡಿ ಅಭಿವೃದ್ಧಿ ಕಾರ್ಯ ಕೈಗೊಂಡಿದ್ದರೂ, ಬಿಜೆಪಿಯವರು ಪ್ರಚಾರಕ್ಕಾಗಿ ಇಲ್ಲಸಲ್ಲದ ಆರೋಪ ಮಾಡುತ್ತಿದ್ದಾರೆ ಎಂದು ಸಂಸದ ಸುನೀಲ್ ಬೋಸ್ ಆರೋಪಿಸಿದರು.

ತಾಲೂಕಿನ ವಿವಿಧ ಗ್ರಾಮಗಳಲ್ಲಿ 6.15 ಕೋಟಿ ರೂ. ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಬುಧವಾರ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಮೈಸೂರಿಗೆ ಸಿದ್ದರಾಮಯ್ಯ ಹಾಗೂ ಮಹದೇವಪ್ಪನವರ ಕೊಡುಗೆ ಏನೂ ಇಲ್ಲ ಎಂದು ಆರೋಪಿಸುತ್ತಿರುವ ವಿರೋಧ ಪಕ್ಷದವರು ತಾವು ಅಧಿಕಾರದಲ್ಲಿದ್ದ ಅವಧಿಯಲ್ಲಿ ನೀಡಿರುವ ಅನುದಾನದ ಬಗ್ಗೆ ಮಾಹಿತಿ ನೀಡಲಿ. ಇದೇ ಸಾಲಿನಲ್ಲಿ ಪ್ರತಾಪ್ ಸಿಂಹ ಕೂಡ ಸಂಸದರಾಗಿದ್ದು, ಅವರು ಮೈಸೂರಿಗೆ ನೀಡಿರುವ ಕೊಡುಗೆ ಏನು ಎಂದು ತಿಳಿಸಲಿ. ಪ್ರಸಕ್ತ ಅವಧಿಯಲ್ಲಿ ಮೈಸೂರಿಗೆ ಸಿದ್ದರಾಮಯ್ಯ ಹಾಗೂ ಮಹದೇವಪ್ಪನವರ ಕೊಡುಗೆ ಏನೆಂಬುದನ್ನು ಅವರೇ ಕುಳಿತು ಚರ್ಚೆ ಮಾಡಿಕೊಳ್ಳಲಿ. ಆಗ ಅವರಿಗೆ ಸತ್ಯಾಂಶದ ಅರಿವಾಗುತ್ತದೆ. ನಮ್ಮ ವಿಧಾನಪರಿಷತ್ ಸದಸ್ಯರು ಹೇಳಿರುವಂತೆ ಅವರಿಗೆ ಮಾಡಲು ಬೇರೇನೂ ಕೆಲಸವಿಲ್ಲದ್ದರಿಂದ ಸುಖಾಸುಮ್ಮನೆ ಪ್ರಚಾರಕ್ಕಾಗಿ ಆರೋಪ ಮಾಡುತ್ತಿದ್ದು, ಅವರ ಆರೋಪಗಳಿಗೆ ಪ್ರತಿಕ್ರಿಯೆ ನೀಡದಿರುವುದೇ ಒಳ್ಳೆಯದು ಎಂದರು.

ರೈತರ ಜೀವನದ ಮೇಲೆ ಬರೆ ಎಳೆದ ಪ್ರಧಾನಿ ಮೋದಿ: ರಾಜ್ಯ ಕಾಂಗ್ರೆಸ್ ಸರ್ಕಾರ ರೈತಪರ ಸರ್ಕಾರವಾಗಿದ್ದರೆ, ಮೋದಿ ನೇತೃತ್ವದ ಕೇಂದ್ರ ಸರ್ಕಾರ ಅಮೆರಿಕಾ ಜೊತೆ ಮುಕ್ತ ವ್ಯಾಪಾರ ಒಪ್ಪಂದ ಮಾಡಿಕೊಳ್ಳುವ ಮೂಲಕ ರೈತರ ಜೀವನದ ಮೇಲೆ ಬರೆ ಎಳೆದಿದೆ. ನಮ್ಮ ದೇಶದ ಉತ್ಪನ್ನಗಳಿಗೆ ಅಮೆರಿಕಾ ದೇಶ ಬೆಲೆ ನಿಗದಿ ಮಾಡುವ ಪರಿಸ್ಥಿತಿಯನ್ನು ಮೋದಿ ಸರ್ಕಾರ ತಂದಿಟ್ಟಿದೆ. ಈ ವ್ಯಾಪಾರ ಒಪ್ಪಂದ ರದ್ದು ಮಾಡುವಂತೆ ಕಾಂಗ್ರೆಸ್ ಸರ್ಕಾರ ಪಾರ್ಲಿಮೆಂಟ್‌ನಲ್ಲಿ ಹೋರಾಟ ಮಾಡಿದೆ. ಕಾಂಗ್ರೆಸ್ ಸರ್ಕಾರ ರೈತರ ಪರವಾಗಿದೆ ಎಂಬುದನ್ನು ಸಾಬೀತು ಪಡಿಸಲು ಇದೊಂದು ಸಾಕ್ಷಿ ಸಾಕು ಎಂದರು.

ಆನೆ ದಾಳಿ; ಮೃತನ ಕುಟುಂಬಕ್ಕೆ ಉದ್ಯೋಗ: ಪರಿಣಾಮಿಪುರದಲ್ಲಿ ಆನೆ ತುಳಿತದಿಂದ ರೈತ ಸಾವಿಗೀಡಾಗಿರುವ ಘಟನೆ ನಡೆಯಬಾರದಿತ್ತು. ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರ ವಹಿಸುವಂತೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ. ಮೃತನ ಕುಟುಂಬಕ್ಕೆ ಈಗಾಗಲೇ 5 ಲಕ್ಷ ರೂ. ನೀಡಲಾಗಿದ್ದು, ಮರಣೋತ್ತರ ಪರೀಕ್ಷೆ ಬಳಿಕ ಮತ್ತೆ 15 ಲಕ್ಷ ರೂ. ಪರಿಹಾರ ನೀಡಲಾಗುತ್ತದೆ. ಅವಕಾಶವಿದ್ದಲ್ಲಿ ಮೃತನ ಕುಟುಂಬಕ್ಕೆ ಉದ್ಯೋಗ ದೊರಕಿಸಿ ಕೊಡಲಾಗುವುದು ಎಂದರು.

ಇದೇ ವೇಳೆ ಸಂಸದ ಸುನೀಲ್ ಬೋಸ್ ತಾಲೂಕಿನ ಸೋಸಲೆ, ವ್ಯಾಸರಾಜಪುರ, ಸಿದ್ದನಹುಂಡಿ, ಬೆನಕನಹಳ್ಳಿ, ಚಿಕ್ಕಬೂವಳ್ಳಿ, ಎಸ್.ಮೇಗಡಹಳ್ಳಿ, ಮುಸುವಿನ ಕೊಪ್ಪಲು, ಎಂ.ಕೆಬ್ಬೆಹುಂಡಿ, ಕೈಯಂಬಳ್ಳಿ, ಕೃಷ್ಣಾಪುರ, ಕಾರ್ಗಳ್ಳಿ, ದೊಡ್ಡೇಬಾಗಿಲು ಮೋಳೆ, ಆಚಾರ್ಯನಹುಂಡಿ, ದೊಡ್ಡೇಬಾಗಿಲು ಹಾಗೂ ನರೀಪುರ ಗ್ರಾಮದಲ್ಲಿ ಚರಂಡಿ ಹಾಗೂ ರಸ್ತೆ ಕಾಮ ಗಾರಿಗೆ ಭೂಮಿ ಪೂಜೆ ನೆರವೇರಿಸಿದರು.

ಸಹಕಾರ ವಿಭಾಗದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀರಂಗರಾಜಪುರ ರಾಜೇಶ್, ಬನ್ನೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ಜಿಪಂ ಮಾಜಿ ಸದಸ್ಯ ಹೊನ್ನನಾಯಕ, ಡೈರಿ ಅಧ್ಯಕ್ಷ ಕೆಬ್ಬೆ ರಂಗಸ್ವಾಮಿ, ಎಪಿಎಂಸಿ ಮಾಜಿ ನಿರ್ದೇಶಕ ಉಕ್ಕಲಗೆರೆ ಬಸವಣ್ಣ, ತಾಪಂ ಮಾಜಿ ಅಧ್ಯಕ್ಷ ಶಿವಸ್ವಾಮಿ, ಮಲ್ಲಿಕಾರ್ಜುನಸ್ವಾಮಿ, ಗ್ರಾಪಂ ಮಾಜಿ ಸದಸ್ಯ ಸೋಮಣ್ಣ, ನಟರಾಜು, ಮಲ್ಲೇಶ್, ನಾರಾಯಣ, ಸುರೇಶ, ಸಿದ್ದರಾಜು, ಮಾಜಿ ಅಧ್ಯಕ್ಷ ಮಹೇಶ್, ಪರಶಿವಮೂರ್ತಿ, ಕುಮಾರ್ ರಾಮೇಗೌಡ, ನಿಂಗಯ್ಯ, ಆಪ್ತ ಕಾರ್ಯದರ್ಶಿ ಬಸವರಾಜು, ಸೋಮಣ್ಣ, ತಹಸೀಲ್ದಾರ್ ಟಿ.ಎಸ್.ಸುರೇಶಾಚಾರ್, ಪ್ರಭಾರ ಇಓ ರಂಗಸ್ವಾಮಿ, ಎಇಇ ಪಿ.ಎನ್.ಚರಿತಾ, ಎಇಇ ಸತೀಶ್ ಚಂದ್ರ, ಶಿವರಾಜು, ಸಹಾಯಕ ಸೆಸ್ಕಾಂ ಎಇಇ ವೀರೇಶ್, ನಿರ್ದೇಶಕರಾದ ಶಾಂತ, ಶ್ವೇತಾ, ರೂಪ, ಬಿಸಿಎಂ ಇಲಾಖೆ ರಾಜಣ್ಣ, ಸಿಡಿಪಿಓ ಗೋವಿಂದರಾಜು, ಲಕ್ಷ್ಮೀಶ್, ಆಹಾರ ಇಲಾಖೆ ಸದಾನಂದ ಸೇರಿದಂತೆ ಇತರರಿದ್ದರು.



ಸಂಸದ ಸುನೀಲ್ ಬೋಸ್ ಅವರನ್ನು ವ್ಯಾಸರಾಜಪುರ ಗ್ರಾಮಸ್ಥರು ಹಾಗೂ ಮುಖಂಡರು ಸನ್ಮಾನಿಸಿದರು.

> "ಚುನಾವಣಾ ಪೂರ್ವ ಕ್ಷೇತ್ರದ ಜನತೆಗೆ ನೀಡಿದ್ದ ಭರವಸೆಯಂತೆ ಕ್ಷೇತ್ರದ ಅಭಿವೃದ್ಧಿಗೆ ಸಾಕಷ್ಟು ಅನುದಾನ ತರಲಾಗುತ್ತಿದೆ. ಇಂದು 15 ಹಳ್ಳಿಗಳಲ್ಲಿ ವಿವಿಧ ಕಾಮಗಾರಿಗೆ ಭೂಮಿ ಪೂಜೆ ಮಾಡಲಾಗುತ್ತಿದೆ. ಎಸ್‌ಸಿಪಿ ಅನುದಾನದಲ್ಲಿ 3.50 ಕೋಟಿ ಹಾಗೂ ಸಾಮಾನ್ಯ ವರ್ಗದ ಕಾಲೋನಿಗಳ ಅಭಿವೃದ್ಧಿಗೆ 3.10 ಕೋಟಿ ಸೇರಿದಂತೆ ಒಟ್ಟು 6.15 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಹಾಗೂ ಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗಿದೆ. ನಮ್ಮ ತಂದೆ ಹಾಗೂ ನನ್ನ ಮೇಲೆ ವಿಶ್ವಾಸವಿಟ್ಟು ಕ್ಷೇತ್ರದ ಜನತೆ ನಮಗೆ ಅಧಿಕಾರ ಕೊಟ್ಟಿದ್ದಾರೆ. ಅವರ ನಂಬಿಕೆ ಹುಸಿಗೊಳಿಸದೇ ಸರ್ಕಾರದಿಂದ ಅಗತ್ಯಕ್ಕಿಂತ ಹೆಚ್ಚು ಅನುದಾನ ತಂದು ಅಭಿವೃದ್ಧಿ ಕಾರ್ಯ ಕೈಗೊಳ್ಳುತ್ತೇವೆ.
>
> – ಸುನೀಲ್ ಬೋಸ್, ಸಂಸದ.

ಜೂಜು ಅಡ್ಡೆ ಮೇಲೆ ದಾಳಿ; 1,15,410 ರೂ. ವಶ

ಮೈಸೂರು,ಫೆ.18(ಪಿಎಂ)– ಹುಣಸೂರು ತಾಲೂಕಿನ ಮನುಗನಹಳ್ಳಿ ಗ್ರಾಮದ ತೋಟವೊಂದರಲ್ಲಿ ನಡೆಯುತ್ತಿದ್ದ ಜೂಜಾಟದ ಅಡ್ಡೆ ಮೇಲೆ ದಾಳಿ ನಡೆಸಿರುವ ಬಿಳಿಕೆರೆ ಪೊಲೀಸರು, 12 ಮಂದಿ ವಿರುದ್ಧ ಪ್ರಕರಣ ದಾಖಲಿಸಿ ಜೂಜುಕೋರರು ಪಣಕ್ಕಿಟ್ಟಿದ್ದ 1,15,410 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ.

ಗುಂಪುಗೂಡಿ ಅಂದರ್ ಬಾಹರ್ ಆಡುತ್ತಿದ್ದ ಈ 12 ಮಂದಿ ಗುಂಪಿನ ಮೇಲೆ ಇತ್ತೀಚಿಗೆ ಬಿಳಿಕೆರೆ ಪೊಲೀಸ್ ಠಾಣೆ ಪಿಐ ಟಿ.ಎಂ. ಪುನೀತ್ ನೇತೃತ್ವದಲ್ಲಿ ದಾಳಿ ನಡೆಸಲಾಯಿತು.

ಸಿದ್ದೇಗೌಡ ನಿಧನ

ಕಿತ್ತೂರು, ಫೆ.18– ಪಿರಿಯಾಪಟ್ಟಣ ತಾಲೂಕಿನ ಕಿತ್ತೂರು ಗ್ರಾಮದ ಮಾಜಿ ಗ್ರಾಪಂ ಸದಸ್ಯ ಸಿದ್ದೇಗೌಡ (78) ಮಂಗಳವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಮೃತರ ಜಮೀನಿನಲ್ಲಿ ನಡೆಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಕಾಲೇಜು ರಂಗಭೂಮಿಯಿಂದ ಸಂಸ್ಕೃತಿ ಕಟ್ಟುವ ಕಾರ್ಯವಾಗಬಲ್ಲದು

ರಂಗಾಯಣ ಮಾಜಿ ನಿರ್ದೇಶಕ ಜನ್ನಿ ಅಭಿಮತ



ಕೆ.ಆರ್.ಸುಮತಿ ರಚನೆಯ ದೋಪ್ದಿ(ದ್ರೌಪತಿ) ಮತ್ತು ವ್ಯಾನಿಟಿ ಹೌಸ್ ನಾಟಕ ಕೃತಿಯನ್ನು ಡಾ.ರತಿರಾವ್ ಬಿಡುಗಡೆಗೊಳಿಸಿದರು.

ಮೈಸೂರು, ಫೆ.18(ವಿವಿಹೆಚ್)– ದೇಶ, ಭಾಷೆ ಜೊತೆಗೆ ಸಂಸ್ಕೃತಿ ಕಟ್ಟುವ ಬಹಳ ದೊಡ್ಡ ಜವಬ್ದಾರಿ ನಮ್ಮ ಮೇಲಿದೆ. ಎಲ್ಲರ ಒಳಗೊಳ್ಳುವಿಕೆಯಿಂದ ಮಾತ್ರ ಈ ಕೆಲಸ ಸಾಧ್ಯವಾಗಲಿದ್ದು, ಕಾಲೇಜು ರಂಗಭೂಮಿ ಇದನ್ನು ಬಹಳ ಸಕ್ರಿಯವಾಗಿ ನಿಭಾಯಿಸ ಬಲ್ಲದು ಎಂದು ರಂಗಾಯಣ ಮಾಜಿ ನಿರ್ದೇಶಕ ಜನಾರ್ಧನ್(ಜನ್ನಿ) ಅಭಿಪ್ರಾಯಪಟ್ಟರು.

ನಗರದ ಕಲಾಮಂದಿರ ಆವರಣದ ಕಿರು ರಂಗ ಮಂದಿರದಲ್ಲಿ ಕರ್ನಾಟಕ ನಾಟಕ ಅಕಾಡೆಮಿ ಹಾಗೂ ಜಯಲಕ್ಷ್ಮೀಪುರಂ ಮಹಾಜನ ಪ್ರಥಮ ದರ್ಜೆ ಕಾಲೇಜು ಸಹಯೋಗದಲ್ಲಿ ಏರ್ಪಡಿಸಿದ್ದ ಒಂದು ತಿಂಗಳ ರಂಗ ಶಿಬಿರದ ಸಮಾರೋಪದಲ್ಲಿ ಅವರು ಮಾತನಾಡಿದರು.

ರಂಗಭೂಮಿ ಮನುಷ್ಯನನ್ನು ದೈಹಿಕ, ಮಾನಸಿಕ, ಭೌದ್ಧಿಕವಾಗಿ ಪ್ರಬುದ್ಧಗೊಳಿಸುತ್ತ, ಮಾನವೀಯ ಮೌಲ್ಯಗಳ ಆಲೋಚನೆ ದಿಕ್ಕಿಗೆ ಹೆದ್ದಾರಿಯಾಗಬಲ್ಲದು. ಆ ದೃಷ್ಟಿಯಿಂದಲೇ ಕಾಲೇಜು ರಂಗಭೂಮಿಗೆ ಹೆಚ್ಚಿನ ಒತ್ತು ನೀಡಬೇಕಾದ ಅನಿವಾರ್ಯತೆ ಇಂದಿನ ದಿನಮಾನದಲ್ಲಿ ಬಹಳಷ್ಟಿದೆ ಎಂದರು.

ಪ್ರಸ್ತುತ ದೇಶದಲ್ಲಿ ಯುವಕರು ಉತ್ತಮ ಪ್ರಜೆಗಳಾಗಿ ಬದುಕುಳಿಯಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಆಧುನಿಕ ತಂತ್ರಜ್ಞಾನವೂ ಮಾರಕವಾಗುತ್ತಿದ್ದು, ಸಮಾಜದಲ್ಲಿ ವಿಷದ ಬೀಜ ಬಿತ್ತುವ ಕೆಲಸವಾಗುತ್ತಿದೆ. ಯುವಕರು ಮಾತ್ರ ಈ ದೇಶದ ನಾಯಕತ್ವ ವಹಿಸಲು ಸಾಧ್ಯ. ಇದಕ್ಕೆ ರಂಗಭೂಮಿ ಸಹಾಯಕಾರಿ ಮಾಧ್ಯಮ ವಾಗಲಿದೆ ಎಂದು ತಿಳಿಸಿದರು.

ಕಾಲೇಜು ರಂಗಭೂಮಿಯಿಂದಲೇ, ಕನ್ನಡ ರಂಗಭೂಮಿ ನಿರ್ಮಾಣವಾಗಿದ್ದು. ಕಾಲೇಜು ರಂಗ ಚಟುವಟಿಕೆಗಳಿಂದ ಬೆಳೆದವರು ಇವತ್ತು ಪ್ರಬುದ್ಧ ಕಲಾವಿದರಾಗಿ ವಯಸ್ಸಿನ ಮಿತಿಯಿಲ್ಲದೇ ಚಲನಚಿತ್ರ ಹಾಗೂ ರಂಗಭೂಮಿಯಲ್ಲಿ ತೊಡಗಿಸಿಕೊಳ್ಳುತ್ತಿದ್ದಾರೆ. ಅದು ರಂಗಭೂಮಿ ಅವರಿಗೆ ನೀಡಿದ ಸಶಕ್ತಿಯಾಗಿದೆ ಎಂದು ವಿವರಿಸಿದರು.

ಸಂಸ್ಕೃತಿ ಕಟ್ಟುವ ಜವಬ್ದಾರಿ ನಮ್ಮ ಮೇಲಿದ್ದು, ಇಂತಹ ಕಾರ್ಯ ಚಟುವಟಿಕೆಗಳು ಕಾಲೇಜು ರಂಗಭೂಮಿಯಿಂದ ಸಾಧ್ಯವಾಗಲಿದೆ. ಇದಾದರೆ ನಮ್ಮನ್ನು ನಾವು ಕಟ್ಟಿಕೊಂಡ ಹಾಗೆ, ದೇಶ ಕಟ್ಟಿದ ಹಾಗೆ. ಇದೊಂದು ಸಾಮೂಹಿಕ ಕ್ರಿಯಾ ವೇದಿಕೆಯಾಗಿದ್ದು, ನಾವೆಲ್ಲರೂ ಒಂದೇ ಎಂಬ ಮನೋಭಾವವನ್ನು ಬಿತ್ತುವ ಕೆಲಸ ರಂಗಭೂಮಿಯದ್ದಾಗಿದೆ ಎಂದರು.

ಈ ವೇಳೆ ಕೆ.ಆರ್.ಸುಮತಿ ರಚನೆಯ ದೋಪ್ದಿ(ದ್ರೌಪತಿ) ಮತ್ತು ವ್ಯಾನಿಟಿ ಹೌಸ್ ನಾಟಕ ಕೃತಿಯನ್ನು ಹಿರಿಯ ಚಿಂತಕಿ ಡಾ.ರತಿರಾವ್ ಬಿಡುಗಡೆಗೊಳಿಸಿದರು. ಬಳಿಕ ಹನುಮಂತ ಹಾಲಿಗೇರಿ ರಚನೆಯ ಕೆ.ಆರ್.ಸುಮತಿ ನಿರ್ದೇಶನದ 'ಊರ ಸುಟ್ಟರು ಹನುಮಪ್ಪ ಹೊರಗ' ವಿದ್ಯಾರ್ಥಿಗಳಿಂದ ನಾಟಕ ಪ್ರದರ್ಶನ ಕಂಡಿತು. ಜೆ.ಚಿಂತನ್ ವಿಕಾಸ್ ಮತ್ತು ಜನಾರ್ಧನ್ (ಜನ್ನಿ) ಸಂಗೀತ, ಮಧು ಮಳವಳ್ಳಿ ಬೆಳಕು ಹಾಗೂ ವಿನ್ಯಾಸ ಮತ್ತು ನಿರ್ದೇಶನ ಜವಾಬ್ದಾರಿಯನ್ನು ಕೆ.ಆರ್.ಸುಮತಿ ವಹಿಸಿದ್ದರು.

ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಡಾ.ಕೆ.ವಿ ನಾಗರಾಜ ಮೂರ್ತಿ, ಕರ್ನಾಟಕ ನಾಟಕ ಅಕಾಡೆಮಿ ರಿಜಿಸ್ಟ್ರಾರ್ ಬಿ.ನೀಲಮ್ಮ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮಹಾಜನ ಕಾಲೇಜು ಪ್ರಾಂಶುಪಾಲರಾದ ಡಾ.ಬಿ.ಆರ್.ಜಯಕುಮಾರಿ, ನಾಟಕ ಅಕಾಡೆಮಿ ಸದಸ್ಯರಾದ ಜಿಪಿಓ ಚಂದ್ರು, ಡಾ.ಜಾಹಿದಾ, ಹಿರಿಯ ರಂಗ ನಿರ್ದೇಶಕಿ ಕೆ.ಆರ್.ಸುಮತಿ, ಅಭಿರುಚಿ ಪ್ರಕಾಶನ ಸಂಸ್ಥಾಪಕ ಅಭಿರುಚಿ ಗಣೇಶ್ ಉಪಸ್ಥಿತರಿದ್ದರು.

> ವೈಜ್ಞಾನಿಕವಾಗಿ ಪ್ರಗತಿಯೆಡೆಗೆ ಸಾಗುತ್ತಿದ್ದೇವೆ ಎಂದುಕೊಂಡರೂ ಪ್ರಸ್ತುತ ದೇಶದಲ್ಲಿ ಮೌಢ್ಯತೆಗಳು ತಾಂಡವವಾಡುತ್ತಿವೆ. ದೇವಸ್ಥಾನ ವಿಚಾರಕ್ಕೆ, ಧರ್ಮದ ವಿಚಾರಕ್ಕೆ ಹೊಡೆದಾಟ, ಕೊಲೆಗಳಾಗುತ್ತಿವೆ. ಮೌಢ್ಯತೆಗೆ ಸೆಡ್ಡು ಹೊಡೆದು ವಿಜ್ಞಾನದೆಡೆಗೆ ಸಾಗಬೇಕಿದೆ. ಮೌಢ್ಯತೆ ಮಾರಕವಾಗಬಾರದು, ವಿಜ್ಞಾನ ಪೂರಕವಾಗಬೇಕು ಎಂಬುದನ್ನು ನಾಟಕ, ರಂಗಭೂಮಿಯಿಂದ ಮಾತ್ರ ಕಂಡುಕೊಳ್ಳಲು ಸಾಧ್ಯ
>
> –ಜನಾರ್ಧನ್(ಜೆನ್ನಿ), ಹಿರಿಯ ರಂಗಕರ್ಮಿ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕಾ ದಿ ಫಾರೆಸ್ಟ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರಕ್ಕಸಪುರದೋಳ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ಪೂಕಿ (ತ)	4 ಪ್ರದರ್ಶನಗಳು
ಸಂಗಂ	
ಮೈ ಲಾರ್ಡ್(ತ)	4 ಪ್ರದರ್ಶನಗಳು
ಲಿಡೋ	
ಕರಗ (ಕ) + ಶಿವಲೀಲಾ (ಕ)	3+1 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓ ಸುಂದರ ರಾಕ್ಷಸಿ (ಕ) + ದೈವ (ಕ)	2+2 ಪ್ರದರ್ಶನಗಳು

ನೂತನ ಆಡಳಿತ ಮಂಡಳಿ ಆಯ್ಕೆ



ಮೈಸೂರು ಮಹಾ ನಗರಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ ನೂತನ ಆಡಳಿತ ಮಂಡಳಿಯ ಪದಾಧಿಕಾರಿಗಳು.

ಮೈಸೂರು: ಮೈಸೂರು ಮಹಾನಗರ ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಸಂಘದ 2026–31ರವರೆಗಿನ 5 ವರ್ಷದ ಅವಧಿಗೆ ನೂತನ ಆಡಳಿತ ಮಂಡಳಿಯು ಅವಿರೋಧವಾಗಿ ಆಯ್ಕೆಯಾದರು.

ನೂತನ ಅಧ್ಯಕ್ಷರಾಗಿ ಎಂ.ಬಸವಣ್ಣ ಆಯ್ಕೆಯಾಗಿ ಮಾತನಾಡಿ, ಪಾಲಿಕೆ ನೌಕರರ ಗೃಹ ನಿರ್ಮಾಣ ಸಹಕಾರ ಯಶಸ್ವಿಯಾಗಿ ಮುನ್ನಡೆಯುತ್ತಿದ್ದು, ಮುಂದಿನ ದಿನಗಳಲ್ಲಿ ಅದನ್ನು ಮತ್ತಷ್ಟು ಮುನ್ನಡೆಸಲು ಪೂರಕವಾಗಿ ಶ್ರಮಿಸಲಾಗುವುದು. ನೌಕರರಿಗೆ ಸೂರು ಒದಗಿಸುವ ನಿಟ್ಟಿನಲ್ಲಿ ಸಂಘದ ಎಲ್ಲರನ್ನೂ ಒಗ್ಗೂಡಿಸಿಕೊಂಡು ಹೋಗಲಾಗುವುದು ಎಂದರು.

ನೂತನ ಉಪಾಧ್ಯಕ್ಷರಾಗಿ ಶಂಭು ಆಯ್ಕೆಯಾದರು. ನೂತನ ನಿರ್ದೇಶಕರಾಗಿ ಕೆ.ಜವರಾಜು ಬಿ.ವೆಂಕಟರಾಮ್, ಎಸ್. ಯಶೋಧರ, ಜವರೇಗೌಡ, ಬಿ.ರಾಜು, ಎಂ.ಕೆ. ನಟರಾಜ್, ಉಮೇಶ್, ಖೈರುನ್ನಿಸಾ, ಪಿ.ಶೀಲಾ, ಟಿ.ಎಸ್.ರಮೇಶ್, ಬಿ.ಭಾಸ್ಕರ್, ಬಿ.ಪ್ರಸಾದ್ ಹಾಗೂ ಕೆ.ಸುಮಂಗಳ ಅವಿರೋಧವಾಗಿ ಆಯ್ಕೆಯಾದರು. ರಿಟರ್ನಿಂಗ್ ಅಧಿಕಾರಿ ಬಿ.ರಾಜು ನೂತನ ಅಧ್ಯಕ್ಷ ಹಾಗೂ ಆಡಳಿತ ಮಂಡಳಿ ಘೋಷಣೆ ಮಾಡಿದರು. ಕಾರ್ಯದರ್ಶಿ ವಿ.ವರುಣ್ ಕುಮಾರ್ ಉಪಸ್ಥಿತರಿದ್ದರು.

ನೇಮಕ



ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ, ಸಾತಗಳ್ಳಿ ಬ್ಲಾಕ್‌ನ ಕಾಂಗ್ರೆಸ್ ಮುಖಂಡ ಮೊಹಮ್ಮದ್ ನೈಮುದ್ದೀನ್, ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಅಲ್ಪಸಂಖ್ಯಾತ ಘಟಕದ ನೂತನ ಕಾರ್ಯದರ್ಶಿಯಾಗಿ ನೇಮಕಗೊಂಡಿದ್ದು, ಇವರಿಗೆ ಘಟಕದ ಜಿಲ್ಲಾಧ್ಯಕ್ಷ ಮೊಹ್ಸಿನ್ ಖಾನ್ ನೇಮಕಾತಿ ಪತ್ರ ನೀಡಿದರು. ಈ ವೇಳೆ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ಜೆಎಸ್‌ಎಸ್ ಕಾನೂನು ಕಾಲೇಜಿನ ಏಳು ವಿದ್ಯಾರ್ಥಿಗಳು ಸಿವಿಲ್ ಜಡ್ಜ್ ಹುದ್ದೆಗೆ ಆಯ್ಕೆ



ರೋಷನಿ ಕೆ.ಬಿ. ರಾಹುಲ್ ಆದಿನಾಥ್ ಮಹದೇವ ಕೆ.ಗೌಡ ಸುಹಾಸ್ ಕೆ.ಸಿ.



ರಶ್ಮಿ ವೀರಭದ್ರ ಸುಪ್ರಿಯಾ ನವಾಲಿ ನಿತ್ಯ ಎನ್.ಗುಜ್ಜಾರ್

ಮೈಸೂರು, ಫೆ.18– ಮೈಸೂರು ಸರಸ್ವತಿಪುರಂನ ಜೆಎಸ್‌ಎಸ್ ಕಾನೂನು ಕಾಲೇಜಿನ ಏಳು ವಿದ್ಯಾರ್ಥಿಗಳು ಸಿವಿಲ್ ಜಡ್ಜ್ ಹುದ್ದೆಗೆ ಆಯ್ಕೆಯಾಗಿದ್ದಾರೆ.

ರೋಷನಿ ಕೆ.ಬಿ., ರಾಹುಲ್ ಆದಿನಾಥ್ ನ್ಯಾಮಗೌಡ, ಮಹದೇವ ಕೆ.ಗೌಡ, ಸುಹಾಸ್ ಕೆ.ಸಿ., ಮುದಳಗಿ ರಶ್ಮಿ ವೀರಭದ್ರ, ಸುಪ್ರಿಯಾ ನವಾಲಿ ಹಾಗೂ ನಿತ್ಯ ಎನ್.ಗುಜ್ಜಾರ್ ಸಿವಿಲ್ ಜಡ್ಜ್ ಆಗಿ ಆಯ್ಕೆಯಾಗುವ ಮೂಲಕ ಕಾಲೇಜಿನ ಕೀರ್ತಿ ಹೆಚ್ಚಿಸಿದ್ದಾರೆ.

ಈ ಗಮನಾರ್ಹ ಸಾಧನೆ ಕಾಲೇಜಿನ ಶೈಕ್ಷಣಿಕ ಶ್ರೇಷ್ಠತೆ, ವೃತ್ತಿಪರ ತರಬೇತಿ ಹಾಗೂ ನ್ಯಾಯಾಂಗ ಸೇವೆಗೆ ನೀಡುತ್ತಿರುವ ಸಮರ್ಪಕ ಮಾರ್ಗದರ್ಶನಕ್ಕೆ ಹಿಡಿದ ಕೈಗನ್ನಡಿಯಾಗಿದೆ. ಅಧ್ಯಾಪಕರ ಸಮರ್ಪಣೆ ಮತ್ತು ವಿದ್ಯಾರ್ಥಿಗಳ ಪರಿಶ್ರಮದಿಂದ ಕಾಲೇಜಿನ ಜೊತೆಗೆ ಮೈಸೂರಿನ ಕೀರ್ತಿಯೂ ಹೆಚ್ಚಿದೆ. ಜೆಎಸ್‌ಎಸ್ ಕಾನೂನು ಕಾಲೇಜಿನ ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗವು, ಈ ಎಲ್ಲಾ ಸಾಧಕರಿಗೆ ಅಭಿನಂದನೆ ಸಲ್ಲಿಸಿದೆ ಎಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಹೆಚ್ಚಿನ ವರ್ಗೀಕೃತ ಜಾಹೀರಾತು ಪುಟ 9ರಲ್ಲಿ

ಐಸಿಸಿ ಟಿ20 ವಿಶ್ವಕಪ್ ಪಂದ್ಯಾವಳಿ

ಭಾರತ, ಪಾಕಿಸ್ತಾನ, ದ.ಆಫ್ರಿಕಾಗೆ ಜಯ



ಭಾರತೀಯ ಆಟಗಾರರ ಸಂಭ್ರಮಾಚರಣೆ.

ಮೈಸೂರು, ಫೆ.18(ವಿವಿಹೆಚ್)– ಐಸಿಸಿ ಪುರುಷರ ಟಿ20 ವಿಶ್ವಕಪ್ 2026ರ ಗ್ರೂಪ್ ಹಂತದಲ್ಲಿ ಬುಧವಾರ ನಡೆದ ಪಂದ್ಯಗಳಲ್ಲಿ ನೆದರ್ಲೆಂಡ್ಸ್ ವಿರುದ್ಧ ಭಾರತ, ನಮೀಬಿಯಾ ವಿರುದ್ಧ ಪಾಕಿಸ್ತಾನ ಹಾಗೂ ಯುಎಇ ವಿರುದ್ಧ ದಕ್ಷಿಣ ಆಫ್ರಿಕಾ ಜಯ ಗಳಿಸಿದೆ.

ಭಾರತಕ್ಕೆ ಜಯ: ಶಿವಂ ದುಬೆ ಅವರ ಆಲ್‌ರೌಂಡರ್ ಪ್ರದರ್ಶನ ಹಾಗೂ ವರುಣ್ ಚಕ್ರವರ್ತಿ ಅವರ ಮಾರಕ ಬೌಲಿಂಗ್ ದಾಳಿ ನೆರವಿನಿಂದ ನೆದರ್ಲೆಂಡ್ಸ್ ವಿರುದ್ಧ ಭಾರತ 17 ರನ್‌ಗಳ ಜಯ ಸಾಧಿಸಿದೆ.

ಅಹಮದಾಬಾದ್‌ನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಭಾರತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 193 ಕಲೆ ಹಾಕಿತು. ಬಳಿಕ ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 176 ರನ್ ಗಳಿಸಿತು.

ಮೊದಲ ಬ್ಯಾಟಿಂಗ್ ಮಾಡಿದ ಭಾರತ 39 ರನ್ ಗಳಿಸುವಷ್ಟರಲ್ಲೇ ಶೂನ್ಯಕ್ಕೆ ಅಭಿಷೇಕ್ ಶರ್ಮಾ, 7 ರನ್ ಗಳಿಸಿದ್ದ ಇಶಾನ್ ಕಿಶನ್ ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಬಳಿಕ ಬಂದ ತಿಲಕ್ ವರ್ಮಾ 31, ನಾಯಕ ಸೂರ್ಯಕುಮಾರ್ ಯಾದವ್ 38 ರನ್ ಗಳಿಸಿ ಪೆವಿಲಿಯನ್ ಸೇರಿದರು. ಈ ವೇಳೆ ಆಗಮಿಸಿದ ಶಿವಂ ದುಬೆ 31 ಎಸೆತಗಳಲ್ಲಿ 4 ಬೌಂಡರಿ, 6 ಸಿಕ್ಸರ್ ಒಳಗೊಂಡ 66 ರನ್ ಗಳಿಸಿದರೇ, ಹಾರ್ದಿಕ್ ಪಾಂಡ್ಯ 30, ರಿಂಕು ಸಿಂಗ್ ಅಜೇಯ 6 ರನ್ ಗಳಿಸಿದರು. ನೆದರ್ಲೆಂಡ್ಸ್ ಪರ ಲೋಗನ್ ವಾನ್ ಬೀಕ್ 3, ಆರ್ಯನ್ ದತ್ 2 ಹಾಗೂ ಕೈಲ್ ಸ್ಪೈನ್ ಒಂದು ವಿಕೆಟ್ ಪಡೆದರು.

ಬಳಿಕ ಗುರಿ ಬೆನ್ನತ್ತಿದ ನೆದರ್ಲೆಂಡ್ಸ್ ಪರ ಮೈಕಲ್ ಲೆವಿಟ್ 24, ಮ್ಯಾಕ್ಸ್ ಓ'ಡೌಡ್ 20, ಬಾಸ್ ಡೆ ಲಿಡೆ 33, ಕಾಲಿನ್ ಅಕರ್ಮನ್ 23, ನಾಯಕ ಸ್ಕಾಟ್ ಎಡ್ವರ್ಡ್ಸ್ 15, ರಘಾಕ್ ಲಯನ್–ಕ್ಯಾಚೆಟ್ 26, ನೋಹ್ ಕ್ರೋಸ್ ಅಜೇಯ 25 ರನ್ ಗಳಿಸಿದರು. ಟೀಂ ಇಂಡಿಯಾ ಪರ ವರುಣ್ ಚಕ್ರವರ್ತಿ 3, ಶಿವಂ ದುಬೆ 2, ಹಾರ್ದಿಕ್ ಪಾಂಡ್ಯ ಹಾಗೂ ಜಸ್ಪ್ರಿತ್ ಬುಮ್ರಾ ತಲಾ ಒಂದೊಂದು ವಿಕೆಟ್ ಪಡೆದರು. ಶಿವಂ ದುಬೆ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

ಸೂಪರ್ 8ಗೆ ಪಾಕ್: ಕೊಲಂಬೊದ ಸಿನ್ಹಳೀಸ್ ಕ್ರಿಡಾಂಗಣದಲ್ಲಿ ನಡೆದ ಮತ್ತೊಂದು ಪಂದ್ಯದಲ್ಲಿ ಸಾಹಿಬ್‌ಜಾದಾ ಫರ್ಹಾನ್ ಶತಕದ ನೆರವಿನಿಂದ ಪಾಕಿಸ್ತಾನ ನಮೀಬಿಯಾ ವಿರುದ್ಧ 102 ರನ್‌ಗಳ ಭರ್ಜರಿ ಗೆಲುವು ದಾಖಲಿಸಿ ಸೂಪರ್ 8 ಹಂತಕ್ಕೆ ಲಗ್ಗೆ ಹಾಕಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ 20 ಓವರ್‌ಗಳಲ್ಲಿ 3 ವಿಕೆಟ್ ನಷ್ಟಕ್ಕೆ 199 ರನ್ ಗಳಿಸಿತು. 200 ರನ್ ಗೆಲುವಿನ ಗುರಿ ಬೆನ್ನತ್ತಿದ ನಮೀಬಿಯಾ 17.3 ಓವರ್‌ಗಳಲ್ಲಿ 97 ರನ್‌ಗೆ ಆಲೌಟ್ ಆಯಿತು.

ನಮೀಬಿಯಾ ಪರ ಲಾರೆನ್ ಸ್ಟೀನ್ ಕಾಂಪ್ 23, ಜಾನ್ ಫ್ರೈಲಿಂಕ್ 9, ಜಾನ್ ಲಿಕೊನ್ ಲಾಫ್ಟಿ–ಈಟನ್ 5, ನಾಯಕ ಜೆರಾರ್ಡ್ ಎರಾಸ್ಮಸ್ 7, ಅಲೆಕ್ಸಾಂಡರ್ ವಾಲ್ಕೆಂಕ್ 20, ಜೆಜೆ ಸ್ಮಿಟ್ 9, ಜೇನ್ ಗ್ರೀನ್ 7, ರುಬೆನ್ ಟ್ರಂಪೆಲ್‌ಮನ್ ಡಕ್‌ಔಟ್, ವಿಲ್ಲೆಮ್ ಮೈಬರ್ಗ್ 8, ಬೆರ್ನಾರ್ಡ್ ಸ್ಕಾಲ್ಟ್ 1 ಹಾಗೂ ಜಾಕ್ ಬ್ರಾಸೆಲ್ ಅಜೇಯ 1 ರನ್ ಗಳಿಸಿದರು. ಪಾಕಿಸ್ತಾನದ ಪರ ಉಸ್ಮಾನ್ ತಾರಿಕ್ 4, ಶದಾಬ್ ಖಾನ್ 3, ಮೊಹಮ್ಮದ್ ನವಾಜ್ ಹಾಗೂ ಸಲ್ಮಾನ್ ಮಿರ್ಜಾ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಪಾಕಿಸ್ತಾನ ಪರ ಸಾಹಿಬ್‌ಜಾದಾ ಫರ್ಹಾನ್ 100, ಸೈಮ್ ಆಯೂಬ್ 14, ನಾಯಕ ಸಲ್ಮಾನ್ ಅಲಿ ಆಘಾ 38, ಶದಾಬ್ ಖಾನ್ ಅಜೇಯ 36 ರನ್ ಬಾರಿಸಿದರು. ನಮೀಬಿಯಾ ಪರ ಜಾಕ್ ಬ್ರಾಸೆಲ್ 2 ಹಾಗೂ ನಾಯಕ ಜೆರಾರ್ಡ್ ಎರಾಸ್ಮಸ್ ಒಂದು ವಿಕೆಟ್ ಪಡೆದರು. ಸಾಹಿಬ್‌ಜಾದಾ ಫರ್ಹಾನ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.



ಪಾಕಿಸ್ತಾನ ಆಟಗಾರರ ಸಂಭ್ರಮ

ದ.ಆಫ್ರಿಕಾಗೆ ಜಯ



ಡೆವಾಲ್ಡ್ ಬ್ರೆವಿಸ್ ಹಾಗೂ ರಿಕೆಲ್ಟನ್ ಬ್ಯಾಟಿಂಗ್ ವೈಖರಿ

ದೆಹಲಿಯ ಅರುಣ್ ಜೆಟ್ಲಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಯುಎಇ ವಿರುದ್ಧ ದಕ್ಷಿಣ ಆಫ್ರಿಕಾ 6 ವಿಕೆಟ್‌ಗಳ ಭರ್ಜರಿ ಗೆಲುವು ದಾಖಲಿಸಿತು.

ಟಾಸ್ ಸೋತು ಮೊದಲು ಬ್ಯಾಟ್ ಮಾಡಿದ ಯುಎಇ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 122 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ದಕ್ಷಿಣ ಆಫ್ರಿಕಾ 13.2 ಓವರ್‌ಗಳಲ್ಲಿ ಕೇವಲ 4 ವಿಕೆಟ್ ಕಳೆದುಕೊಂಡು 123 ರನ್ ಗಳಿಸಿತು. ಯುಎಇ ಪರ ಅಲಿಶನ್ ಶರಾಫು 45, ಮುಹಮ್ಮದ್ ವಸೀಂ 22, ಆರ್ಯನ್ಶ್ ಶರ್ಮಾ 13, ಕಾರ್ಬಿನ್ ಬಾಷ್ 3, ಎನ್ರಿಚ್ ನೋಕಿಯೋ 2, ಜಾರ್ಜ್ ಲಿಂಡೆ 1 ವಿಕೆಟ್ ಪಡೆದರು. ದಕ್ಷಿಣ ಆಫ್ರಿಕಾ ಪರ ಡೆವಾಲ್ಡ್ ಬ್ರೆವಿಸ್ 36, ರಿಕೆಲ್ಟನ್ 30, ಐಡೆನ್ ಮಾರ್ಕ್ರಂ 28, ಮುಹಮ್ಮದ್ ಫಾರೂಕ್ 1, ಮುಹಮ್ಮದ್ ಅರ್ಫಾನ್ ಮುಹಮ್ಮದ್ ಜವಾದುಲ್ಲಾ ತಲಾ ಒಂದೊಂದು ವಿಕೆಟ್ ಪಡೆದರು. ಉತ್ತಮ ಬೌಲಿಂಗ್ ದಾಳಿ ಮಾಡಿ ದಕ್ಷಿಣ ಆಫ್ರಿಕಾ ಗೆಲುವಿಗೆ ಕಾರಣರಾದ ಕಾರ್ಬಿನ್ ಬಾಷ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಸಾರಿಗೆ ನೌಕರರ ಒತ್ತಡಕ್ಕೆ ಮಣಿದ ಸರ್ಕಾರ; 26 ತಿಂಗಳ ಬಾಕಿ ಜೊತೆಗೆ ವೇತನ ಪರಿಷ್ಕರಣೆಗೂ ಒಪ್ಪಿಗೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರದ ಎಚ್ಚರಿಕೆಗೆ ಸರ್ಕಾರ ಮಣಿದಿದ್ದು, ನೌಕರರ ಬೇಡಿಕೆಗಳಲ್ಲಿ ಪ್ರಮುಖವಾದ ವೇತನ ಬಾಕಿ ಪಾವತಿಗೆ ಮುಂದಾಗಿದೆ.



ಸಾರಿಗೆ ನೌಕರರಿಗೆ 38 ತಿಂಗಳ ವೇತನ ಬಾಕಿ ನೀಡಬೇಕಿದ್ದು, ಈ ಪೈಕಿ ಮೊದಲ ಹಂತದಲ್ಲಿ 26 ತಿಂಗಳ ವೇತನ ಬಾಕಿ ಪಾವತಿಸಲು ಸರ್ಕಾರ ಆದೇಶ ಪ್ರಕಟಿಸಿದೆ. ಏಪ್ರಿಲ್ 2025 ರಿಂದ ವೇತನ ಪರಿಷ್ಕರಣೆಗೂ ಒಪ್ಪಿಗೆ ಸೂಚಿಸಿದ್ದು, ನೌಕರರು ನಡೆಸಲುದ್ದೇಶಿಸಿದ್ದ ಬೃಹತ್ ಪ್ರತಿಭಟನೆ ರದ್ದಾಗುವ ಸಾಧ್ಯತೆ ಇದೆ.

ಸಾರಿಗೆ ಸಂಸ್ಥೆಯ 4 ನಿಗಮಗಳ (KSRTC, BMTC, NWKRTC, KKRTC) ನೌಕರರು ಒಟ್ಟು 38 ತಿಂಗಳ ವೇತನ ಹಿಂಬಾಕಿಯನ್ನು ನೀಡುವಂತೆ ಒತ್ತಾಯಿಸುತ್ತಿದ್ದರು. ಈ ಬಗ್ಗೆ ಗಂಭೀರ ಚರ್ಚೆ ನಡೆಸಿದ ರಾಜ್ಯ ಸರ್ಕಾರ, ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚನೆ ನಡೆಸಿ, ಪ್ರಾಥಮಿಕ ಹಂತದಲ್ಲಿ 26 ತಿಂಗಳ ಬಾಕಿ ವೇತನ ನೀಡಲು ಅಧಿಕೃತ ಒಪ್ಪಿಗೆ ಸೂಚಿಸಿದೆ. 1-1-2021 ರಿಂದ 28-03-2023 ರವರೆಗೆ 26 ತಿಂಗಳ ಹಿಂಬಾಕಿ ನೌಕರರಿಗೆ ಸಿಗಲಿದೆ.

ಸಾರಿಗೆ ಸಚಿವ ರಾಮಲಿಂಗಾ ರೆಡ್ಡಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಆರ್ಥಿಕ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ನಡೆಸಿದ ಸಭೆಯ ನಂತರ ಮತ್ತೊಂದು ಪ್ರಮುಖ ಘೋಷಣೆ ಮಾಡಿದ್ದಾರೆ. 1ನೇ ಏಪ್ರಿಲ್ 2025 ರಿಂದ ಜಾರಿಗೆ ಬರುವಂತೆ ಸಾರಿಗೆ ನೌಕರರ ವೇತನವನ್ನು ಪರಿಷ್ಕರಣೆ ಮಾಡಲು ಸರ್ಕಾರ ಒಪ್ಪಿಗೆ ಸೂಚಿಸಿದೆ. ವೇತನದಲ್ಲಿ ಎಷ್ಟು ಪ್ರಮಾಣದ ಏರಿಕೆ ಮಾಡಬೇಕು ಎಂಬ ಬಗ್ಗೆ ಸಾರಿಗೆ ಸಂಘಟನೆಗಳ ಮುಖಂಡರೊಂದಿಗೆ ಮತ್ತೊಮ್ಮೆ ಮಾತುಕತೆ ನಡೆಸಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು ಎಂದು ಸರ್ಕಾರ ತಿಳಿಸಿದೆ.

ಪ್ರತಿಭಟನೆ ನಡೆಯಲಿದೆ: ಸರ್ಕಾರ ನಮ್ಮ ಬೇಡಿಕೆ ಈಡೇರಿಸಬೇಕು. 38 ತಿಂಗಳ ಹಿಂಬಾಕಿಯನ್ನು ನೀಡಲೇಬೇಕು ಎಂದು ಕೆಎಸ್‌ಆರ್‌ಟಿಸಿ ನೌಕರರ ಸಂಘದ ಮುಖಂಡ ಜಗದೀಶ್ ತಿಳಿಸಿದ್ದಾರೆ. ಸರ್ಕಾರ 26 ತಿಂಗಳ ಹಿಂಬಾಕಿ ನೀಡಲು ಮುಂದಾಗಿರುವುದಕ್ಕೆ ಪ್ರತಿಕ್ರಿಯಿಸಿದ ಅವರು, ತಮ್ಮ ಪೂರ್ಣ ಬೇಡಿಕೆ ಈಡೇರಿಸಲೇಬೇಕು. ನಾಳೆ (ಗುರುವಾರ) ಸಂಜೆ ಈ ಬಗ್ಗೆ ನೌಕರರ ಜೊತೆ ಮುಂದಿನ ನಿರ್ಧಾರ ಕೈಗೊಳ್ಳುತ್ತೇವೆ ಎಂದರು.

ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳು ನಷ್ಟದಲ್ಲಿ

ಹೈಕೋರ್ಟ್‌ಗೆ ನಿಗಮಗಳ ಪರ ವಕೀಲರು ಮಾಹಿತಿ

ಬೆಂಗಳೂರು: ರಾಜ್ಯದ ನಾಲ್ಕೂ ಸಾರಿಗೆ ನಿಗಮಗಳು ನಷ್ಟದಲ್ಲಿ ನಡೆಯುತ್ತಿದ್ದು, ಕೋವಿಡ್ ಸಂದರ್ಭದಲ್ಲಿ ಸಾವನ್ನಪ್ಪಿದವರ ಕುಟುಂಬದ ಸದಸ್ಯರಿಗೆ ಪರಿಹಾರ ಧನ ಪಾವತಿ ಮಾಡಲು ನಿಗಮಗಳ ಬಳಿ ಹಣವಿಲ್ಲ. ವೇತನ ನೀಡುವುದೇ ಕಷ್ಟವಾಗಿದೆ ಎಂದು ಕರ್ನಾಟಕ ಸಾರಿಗೆ ನಿಗಮಗಳ ಪರ ವಕೀಲರು ಹೈಕೋರ್ಟ್‌ಗೆ ತಿಳಿಸಿದ್ದಾರೆ.

ಕೋವಿಡ್ ಸಮಯದಲ್ಲಿ ಮೃತಪಟ್ಟ ನಾಲ್ಕು ನಿಗಮಗಳ ಸಿಬ್ಬಂದಿಗೆ ತಲಾ 30 ಲಕ್ಷ ಪರಿಹಾರ ಬಿಡುಗಡೆ ಮಾಡಲು ನಿರ್ದೇಶಿಸಬೇಕು ಎಂದು ಕೋರಿ ದಾವಣಗೆರೆಯ ತಾಹಿರ್ ಹುಸೇನ್ ಮತ್ತು ರಾಯಚೂರಿನ ಅಜೀಜ್ ಪಾಷ ಜಹಗೀರ್‌ದಾರ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ಹೈಕೋರ್ಟ್ ವಕೀಲ ಪಿ.ಉಸ್ಮಾನ್, ಕೋವಿಡ್ ವೇಳೆ, ಸಾರಿಗೆ ಸಂಸ್ಥೆಯ ಉದ್ಯೋಗಿಗಳಿಂದ ಬಲವಂತವಾಗಿ ಕೆಲಸ ಮಾಡಿಸಲಾಗಿದೆ. ಆಗ ಮೃತಪಟ್ಟ ಏಳು ಮಂದಿಯ ಕುಟುಂಬಗಳಿಗೆ ತಲಾ 30 ಲಕ್ಷ ಪರಿಹಾರ ಪಾವತಿಸಲಾಗಿದೆ. ಅಂದು ಶಿಕ್ಷಕರು ಮುಂಚೂಣಿ ಆರೋಗ್ಯ ಕಾರ್ಯಕರ್ತರಾಗಿರಲಿಲ್ಲ. ಆದರೂ, ಅವರಿಗೆ ಯೋಜನೆ ವಿಸ್ತರಿಸಿ ಪರಿಹಾರ ಪಾವತಿಸಲಾಗಿದೆ. ಆದರೆ, ಸಾರಿಗೆ ನಿಗಮಗಳ ಸಿಬ್ಬಂದಿಗೆ ಪರಿಹಾರ ಪಾವತಿಸಲು ಮೀನಮೇಷ ಎಣಿಸಲಾಗುತ್ತಿದೆ ಎಂದು ಆಕ್ಷೇಪಿಸಿದರು.

ಇದಕ್ಕೆ ಪ್ರತಿಯಾಗಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ, ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಮತ್ತು ವಾಯವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆ ಪರ ವಕೀಲೆ ಎಚ್.ಆರ್.ರೇಣುಕಾ ಅವರು, ನಿಗಮಗಳು ನಷ್ಟದಲ್ಲಿ ನಡೆಯುತ್ತಿದ್ದು, ಎರಡು ವರ್ಷದಿಂದ ಬಿಎಂಟಿಸಿ ಉದ್ಯೋಗಿಗಳಿಗೆ ಗ್ರ್ಯಾಚುಟಿ ಹಣ ನೀಡಿಲ್ಲ. ಶಕ್ತಿ ಯೋಜನೆಯಡಿ ಸರ್ಕಾರ ಬಿಡುಗಡೆ ಮಾಡುತ್ತಿರುವ ಹಣವನ್ನು ಗ್ರ್ಯಾಚುಟಿ ಮತ್ತಿತರ ವೆಚ್ಚಗಳಿಗೆ ವಿನಿಯೋಗಿಸಲಾಗುತ್ತಿದೆ ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಏಳು ಕುಟುಂಬಗಳಿಗೆ ಪರಿಹಾರ ನೀಡಿ ಉಳಿದವರಿಗೆ ನೀಡದೇ ತಾರತಮ್ಯ ಮಾಡಲಾಗದು. ಶಕ್ತಿ ಯೋಜನೆಯಡಿ ಮಹಿಳೆಯರಿಗೆ ಒದಗಿಸುತ್ತಿರುವ ಉಚಿತ ಬಸ್ ಸೇವೆ ಹೇಗೆ ಕೆಲಸ ಮಾಡುತ್ತಿದೆ. ಇದುವರೆಗೆ ಸರ್ಕಾರ ಎಷ್ಟು ಹಣ ಬಿಡುಗಡೆ ಮಾಡಿದೆ ಎಂಬುದರ ವಿವರವನ್ನು ಸಲ್ಲಿಸಿ ಎಂದು ಸರ್ಕಾರಕ್ಕೆ ನಿರ್ದೇಶಿಸಿ ವಿಚಾರಣೆಯನ್ನು ಮಾರ್ಚ್ 23ಕ್ಕೆ ಮುಂದೂಡಿತು.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಲ್ಲಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್ ನಲ್ಲಿ ನಮೂದಿಸಿರುವ ಸ್ವತ್ತನ್ನು ನಮ್ಮ ಕಕ್ಷಿದಾರರು ಅದರ ಮಾಲೀಕರಾದ ಮೈಸೂರು ನಗರ, ಚಾಮರಾಜ ಮೊಹಲ್ಲಾ, ಕುವೆಂಪುನಗರ, ನ್ಯೂ ಕಾಂತರಾಜ ಅರಸ್ ರಸ್ತೆ, 'ರಘುವೀರ್', ಮನೆ ನಂ.627/ಎ ರಲ್ಲಿ ವಾಸವಾಗಿರುವ ಶ್ರೀ. ಜಿ.ಆರ್. ದಾಸಪ್ಪ ರವರ ಮಗನಾದ ಶ್ರೀ. ಡಿ.ವಿಜಯ ಕುಮಾರ್ ರವರಿಂದ ಜಂಟಿ ಭೂ ಅಭಿವೃದ್ಧಿ ಕರಾರನ್ನು ಮಾಡಿಕೊಳ್ಳಲು ಮುಂದಾಗಿರುತ್ತಾರೆ.

ಈ ಬಗ್ಗೆ ಸಾರ್ವಜನಿಕರಲ್ಲಿ ಏನಾದರೂ ತಕರಾರು ಇದ್ದಲ್ಲಿ, ಸಂಬಂಧಪಟ್ಟ ದಾಖಲೆಗಳೊಂದಿಗೆ ಈ ಕೆಳಕಂಡವರನ್ನು ಈ ಪ್ರಕಟಣೆಯಾದ 10 (ಹತ್ತು) ದಿನಗಳ ಒಳಗಾಗಿ ಭೇಟಿ ಮಾಡಿ ತಿಳಿಸತಕ್ಕದ್ದು. ತಪ್ಪಿದಲ್ಲಿ ಭೂ ಅಭಿವೃದ್ಧಿ ಕರಾರನ್ನು ಸಂಪೂರ್ಣಗೊಳಿಸಲು ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ಭೂ ಅಭಿವೃದ್ಧಿ ಕರಾರನ್ನು ನೋಂದಣಿ ಮಾಡಿಸಲಾಗುತ್ತದೆ. ತದನಂತರ ಬರುವಂತಹ ಯಾವುದೇ ತಕರಾರುಗಳಿಗೆ ಯಾ ಕ್ಲೈಮುಗಳಿಗೆ ನನ್ನ ಕಕ್ಷಿದಾರರು ಬದ್ಧರಾಗಿರುವುದಿಲ್ಲ.

ಷೆಡ್ಯೂಲ್ ಸ್ವತ್ತಿನ ವಿವರ

ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ಕಸಬಾ ಹೋಬಳಿ, ಕೊಪ್ಪಲೂರು ಗ್ರಾಮದಲ್ಲಿರುವ ಅನ್ಯಕ್ರಾಂತವಾಗಿರುವ ಸರ್ವೆ ನಂ.15/5 ರ ವಿಸ್ತೀರ್ಣ 1 ಎಕರೆ 13.08 ಗುಂಟೆ ಜಮೀನು ಇದಕ್ಕೆ ಚಕ್ಕುಬಂಧಿ :- ಪೂರ್ವಕ್ಕೆ : ಗೆಜ್ಜಗಳ್ಳಿ – ಮೈಸೂರು ರಸ್ತೆ, ಪಶ್ಚಿಮಕ್ಕೆ : ಸರ್ವೇ ನಂ .15/4, ಉತ್ತರಕ್ಕೆ : ಸರ್ವೆ ನಂ.15/5 ರ ಉಳಿಕೆ ಸ್ವತ್ತು, ದಕ್ಷಿಣಕ್ಕೆ : ಸರ್ವೆ ನಂ.16 ಹಾಗೂ ಮಂಡಕಳ್ಳಿ ಗಡಿ.

Sd/- RAVI KIRAN .S, B.Sc., LL.B,
Advocate, KAR713/2000
#1143/E, 1st Floor, Chanakya Circle, Geetha Road, Chamaraja puram, Mysuru-570005,
Mob: 9980776068

ದಿನಾಂಕ 18-02-2026, ಸ್ಥಳ ಮೈಸೂರು

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು